ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

ಜುಲೈ 23 ಶನಿವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 98 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ವಿಧಾನಸೌಧದ ಪ್ರತಿ ಕಂಬ ಬಡಿದರೆ

40... 40... ಶಬ್ಧ ಕೇಳಿ ಬರುತ್ತದೆ!

ಮಾಜಿ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಲೇವಡಿ



ಮೈಸೂರು,ಜು.22(ಪಿಎಂ)– ಸರ್ಕಾರದಲ್ಲಿ ಶೇ.40ರಷ್ಟು (40 ಪರ್ಸೆಂಟ್) ಕಮಿಷನ್ ನಡೆಯುತ್ತಿದೆ ಎಂದು ವಿಧಾನಸೌಧದ ಪ್ರತಿಯೊಂದು ಕಂಬವೂ ಹೇಳುತ್ತಿವೆ. ಅಲ್ಲಿನ ಪ್ರತಿಯೊಂದು ಕಂಬ ಬಡಿದರೂ 40... 40... ಎಂದು ಶಬ್ಧ ಕೇಳಿ ಬರುತ್ತದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಲೇವಡಿ ಮಾಡಿದರು.

ಮೈಸೂರಿನ ಗಾಂಧಿಚೌಕದಲ್ಲಿ ಶುಕ್ರವಾರ ಪ್ರತಿಭಟನೆ ವೇಳೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣನವರು 40 ಪರ್ಸೆಂಟ್ ಆರೋಪ ಸಂಬಂಧ ಪ್ರಧಾನಿಗಳಿಗೆ ಪತ್ರ ಬರೆದ ಮೇಲೆಯೇ ಈ ವಿಚಾರ ಬೆಳಕಿಗೆ ಬಂದಿತು ಎಂದು ಹೇಳಿದರು.

ಒಂದುವರೂ ಸಾಬೀತು ಮಾಡಿ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ತನಿಖೆ ಮಾಡಿಸಿ ಎಂದರೆ ಮಾಡಿಸುತ್ತಿಲ್ಲ. ಮಾಜಿ ಸಚಿವ ಕೆ.ಎಸ್.ಈಶ್ವರಪ್ಪನವರು ಏಕೆ ರಾಜೀನಾಮೆ ಕೊಟ್ಟರು. ನಾವು ವಿರೋಧ ಪಕ್ಷದವರು ಒತ್ತಾಯ ಮಾಡಿದೆವು ಎಂದು ಕೊಟ್ಟರಾ? ಗುತ್ತಿಗೆದಾರ ಸಂತೋಷ್ ಪಾಟೀಲ್ ಏಕೆ ಆತ್ಮಹತ್ಯೆ ಮಾಡಿಕೊಂಡ. ಆತನ ಹೇಳಿಕೆ ಏನಿದೆ ಬಹಿರಂಗಪಡಿಸಲಿ ನೋಡೋಣ ಎಂದು ಸವಾಲು ಹಾಕಿದರು.

'ಗಾಂಧಿ ಕುಟುಂಬದ ಹೆಸರಿನಲ್ಲಿ ಮೂರ್ನಾಲ್ಕು ತಲೆಮಾರಿಗೆ ಆಗುವಷ್ಟು ಹಣ ಆಸ್ತಿ ಮಾಡಿಕೊಂಡಿದ್ದೀವೆ' ಎಂಬ ಮಾಜಿ ಸಚಿವ ರಮೇಶ್ ಕುಮಾರ್ ಹೇಳಿಕೆ ಸಂಬಂಧ ಪ್ರತಿಕ್ರಿಯಿಸಿದ ಡಾ.ಜಿ.ಪರಮೇಶ್ವರ್, ಅದು ಅವರ ವೈಯಕ್ತಿಕ ಅಭಿಪ್ರಾಯ. ಅವರು ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಯಾರನ್ನು ಉದ್ದೇಶಿಸಿ ಹೇಳಿದ್ದಾರೋ ಗೊತ್ತಿಲ್ಲ. ಇದನ್ನು ಪಕ್ಷದೊಳಗೆ ಆಂತರಿಕವಾಗಿ ಚರ್ಚೆ ಮಾಡುತ್ತೇವೆ ಎಂದು ಹೇಳಿದರು.

ಸೋನಿಯಾ ಗಾಂಧಿಯವರನ್ನು ಇಡಿ ವಿಚಾರಣೆ ಮಾಡಿರುವ ಸಂಬಂಧ ತಪ್ಪು ಮಾಡಿಲ್ಲವೆಂದರೆ ಕಾಂಗ್ರೆಸ್ ಹೋರಾಟ ಏಕೆ ಮಾಡಬೇಕೆಂದು ಬಿಜೆಪಿ ಪ್ರಶ್ನೆ ಮಾಡುತ್ತಿದೆ ಎಂಬ ಬಗ್ಗೆ ಉತ್ತರಿಸಿ, ಅವರು ನಡೆಸುತ್ತಿರುವ ಪ್ರಕ್ರಿಯೆ ಕಾನೂನುಬದ್ಧವಾಗಿಲ್ಲ ಎಂಬ ಕಾರಣಕ್ಕೆ ಪ್ರತಿಭಟನೆ ಮಾಡುತ್ತಿದ್ದೇವೆ. ಜೊತೆಗೆ ಅವರು ಹೀಗೆಲ್ಲಾ ಮಾಡುತ್ತಿರುವುದರ ಹಿಂದೆ ದುರುದ್ದೇಶದ ರಾಜಕಾರಣವಿದೆ ಎಂಬುದನ್ನು ದೇಶದ ಜನತೆಗೆ ತಿಳಿಸುವುದು ನಮ್ಮ ಪ್ರತಿಭಟನೆಯ ಉದ್ದೇಶ. ಒಂದು ಎಫ್‌ಐಆರ್ ಸಹ ದಾಖಲಾಗದೆ ರಾಹುಲ್ ಗಾಂಧಿಯವರನ್ನು 50 ಗಂಟೆ ಕಾಲ ವಿಚಾರಣೆ ಮಾಡಲಾಗಿದೆ ಎಂದು ಕಿಡಿಕಾರಿದರು.

ಅಲ್ಲಿಗೆ ಕಾಂಗ್ರೆಸ್ ಅನ್ನು ಮಾನಸಿಕವಾಗಿ ಕುಗ್ಗಿಸಬೇಕೆಂಬ ಉದ್ದೇಶ ಬಿಜೆಪಿಗೆ ಇದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಅವರ ಪ್ರಯತ್ನ ಅದೇ ಆಗಿದೆ. ರಾಷ್ಟ್ರೀಯ ಪಕ್ಷದ ಅಧ್ಯಕ್ಷರನ್ನು ಇಡಿ ವಿಚಾರಣೆ ಮಾಡಿದರೆ ಇಡೀ ಕಾರ್ಯಕರ್ತರು ಕುಗ್ಗುತ್ತಾರೆ ಎಂದುಕೊಂಡಿದ್ದಾರೆ. ಅದು ಎಂದೂ ಸಾಧ್ಯವಿಲ್ಲ ಎಂದು ತಿಳಿಸಿದರು.



ಮೈಸೂರಿನ ದೊಡ್ಡ ಒಕ್ಕಲಗೇರಿಯಲ್ಲಿ ಹಮ್ಮಿಕೊಂಡಿದ್ದ 146ನೇ ವರ್ಷದ ಚಾಮುಂಡೇಶ್ವರಿ ಪೂಜಾ ಮಹೋತ್ಸವದಲ್ಲಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ನಿರ್ದೇಶಕರಾದ ಹೆಚ್.ಹರೀಶ್ ಕುಮಾರ್, ಎಸ್.ಅರವಿಂದ, ಪಡುವಾರಹಳ್ಳಿ ಎಂ.ರಾಮಕೃಷ್ಣ, ಶಿವಕುಮಾರ್, ರಘು, ಕುಮ್ಮಿ ಪಾಲ್ಗೊಂಡಿದ್ದರು.

ನ್ಯಾಷನಲ್ ಹೆರಾಲ್ಡ್ ಅವ್ಯವಹಾರ ಆರೋಪ ಪ್ರಕರಣ ; ಇಡಿಯಿಂದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ವಿಚಾರಣೆಗೆ ಖಂಡನೆ

ಕಾಂಗ್ರೆಸ್ ಭಾರೀ ಪ್ರತಿಭಟನೆ, ಆದಾಯ ತೆರಿಗೆ ಕಚೇರಿಗೆ ಮುತ್ತಿಗೆ ಯತ್ನ

ಪ್ರತಿಭಟನೆ ನೇತೃತ್ವ ವಹಿಸಿದ್ದ ಮಾಜಿ ಡಿಸಿಎಂ ಡಾ.ಜಿ.ಪರಮೇಶ್ವರ್, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪೊಲೀಸ್ ವಶಕ್ಕೆ ; ನಂತರ ಬಿಡುಗಡೆ

ಮೈಸೂರು,ಜು.22(ಪಿಎಂ)– ಜಾರಿ ನಿರ್ದೇಶನಾಲಯವು (ಇಡಿ) ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ವಿಚಾರಣೆ ನಡೆಸುತ್ತಿರುವ ಕ್ರಮ ಕಾನೂನುಬಾಹಿರ ಎಂದು ಆರೋಪಿಸಿ ಮಾಜಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ನೇತೃತ್ವದಲ್ಲಿ ಕಾಂಗ್ರೆಸ್ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತಲ್ಲದೆ, ನಜರ್‌ಬಾದ್‌ನಲ್ಲಿರುವ ಆದಾಯ ತೆರಿಗೆ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ, ಪ್ರತಿಭಟನಾಕಾರರನ್ನು ವಶಕ್ಕೆ ಪಡೆದ ಪೊಲೀಸರು, ಬಳಿಕ ಬಿಡುಗಡೆ ಮಾಡಿದರು.

ನ್ಯಾಷನಲ್ ಹೆರಾಲ್ಡ್ ಅವ್ಯವಹಾರ ಆರೋಪ ಪ್ರಕರಣ ಸಂಬಂಧ ಸೋನಿಯಾ ಗಾಂಧಿಯವರನ್ನು ಇಡಿಯಿಂದ ವಿಚಾರಣೆ ನಡೆಸುತ್ತಿರುವ ಕ್ರಮ ಖಂಡಿಸಿ ಇಂದು ಕೆಪಿಸಿಸಿ ಮಾಜಿ ಅಧ್ಯಕ್ಷರೂ ಆದ ಡಾ.ಜಿ.ಪರಮೇಶ್ವರ್ ನೇತೃತ್ವದಲ್ಲಿ ಮೈಸೂರಿನ ಗಾಂಧಿಚೌಕದಲ್ಲಿ ಎರಡೂವರೆ ತಾಸಿಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಲಾಯಿತು.

ಬಳಿಕ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಡಾ.ಜಿ.ಪರಮೇಶ್ವರ್ ನೇತೃತ್ವದಲ್ಲಿ ನಜರ್‌ಬಾದ್‌ನಲ್ಲಿರುವ ಆದಾಯ ತೆರಿಗೆ ಕಚೇರಿಗೆ ಮುತ್ತಿಗೆ ಹಾಕಲು ಪ್ರತಿಭಟನಾ ಮೆರವಣಿಗೆ ಮೂಲಕ ತೆರಳುತ್ತಿದ್ದಾಗ, ದೊಡ್ಡ ಗಡಿಯಾರ ವೃತ್ತದ ಬಳಿ, ತಡೆಯೊಡ್ಡಿದ ಪೊಲೀಸರು, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರನ್ನು ವಶಕ್ಕೆ ಪಡೆದು, ಪೊಲೀಸ್ ವ್ಯಾನ್ ಸೇರಿದಂತೆ ಖಾಸಗಿ ವ್ಯಾನ್‌ಗಳಲ್ಲಿ ಕೂರಿಸಿಕೊಂಡು ಸಿಎಆರ್ ಮೈದಾನಕ್ಕೆ ಕರೆದೊಯ್ದರು.

ಈ ವೇಳೆ ಶಾಂತಿಯುತವಾಗಿ ಪ್ರತಿಭಟನೆ ನಡೆಸಲು ಅವಕಾಶ ನೀಡಲೇಬೇಕು ಎಂದು ಪಟ್ಟು ಹಿಡಿದ ಡಾ.ಜಿ.ಪರಮೇಶ್ವರ್, ದೊಡ್ಡ ಗಡಿಯಾರ ವೃತ್ತದ ಬಳಿ ರಸ್ತೆಯಲ್ಲೇ ಕುಳಿತು ಪ್ರತಿಭಟನೆ ಮುಂದುವರೆಸಿದರು. ಈಗಾಗಲೇ ಹಲವರನ್ನು ವಶಕ್ಕೆ ಪಡೆದಿದ್ದ ಪೊಲೀಸರು, ಡಾ.ಜಿ.ಪರಮೇಶ್ವರ್ ಅವರನ್ನು ವಶಕ್ಕೆ ಪಡೆಯಲು ಹೆಣಗಾಡಬೇಕಾದ ಪರಿಸ್ಥಿತಿ ಕೆಲಕಾಲ ನಿರ್ಮಾಣವಾಗಿತ್ತು. ಕೊನೆಗೂ ಮನವೊಲಿಸಿ ಅವರನ್ನೂ ವಶಕ್ಕೆ ಪಡೆಯುವ ಮೂಲಕ ಪ್ರತಿಭಟನೆಗೆ ಅಂತ್ಯ ಹಾಡುವಲ್ಲಿ ಪೊಲೀಸರು ಯಶಸ್ವಿಯಾದರು. ಬಳಿಕ ಪ್ರತಿಭಟನಾಕಾರರನ್ನು ಕೆಲಕಾಲ ಸಿಎಆರ್ ಮೈದಾನದಲ್ಲಿ ಇರಿಸಿ, ನಂತರದಲ್ಲಿ ಬಿಡುಗಡೆ ಮಾಡಲಾಯಿತು.

ಇದಕ್ಕೂ ಮುನ್ನ ಗಾಂಧಿಚೌಕದಲ್ಲಿ ಪ್ರತಿಭಟನೆ ನಡೆಸಿದ ವೇಳೆ ಡಾ.ಜಿ.ಪರಮೇಶ್ವರ್, ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಕಾಂಗ್ರೆಸ್ ಮುಖಂಡರು, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಡಾ.ಜಿ.ಪರಮೇಶ್ವರ್, ಬಿಜೆಪಿಯಿಂದ ವಿರೋಧ ಪಕ್ಷಗಳನ್ನು ಹತ್ತಿಕ್ಕುವ ಕೆಲಸ ನಡೆಯುತ್ತಿದೆ. ನಮ್ಮ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿಯವರನ್ನು ಇಡಿ ಸಂಸ್ಥೆಯವರು ವಿಚಾರಣೆ ಮಾಡುತ್ತಿದ್ದಾರೆ. ಆದರೆ ಇಲ್ಲಿ ಯಾವುದೇ ರೀತಿಯ ಕಾನೂನು ಪಾಲನೆಯಾಗುತ್ತಿಲ್ಲ ಎಂದು ದೂರಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಕಡಿಮೆ ಸ್ಥಾನಗಳನ್ನು ಗಳಿಸಿರಬಹುದು. ಆದರೆ ದೇಶದ 20 ಕೋಟಿ ಜನ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ. ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಯಾವುದೇ ಹಳ್ಳಿಗೆ ಹೋದರೂ ಅಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಿಗುತ್ತಾರೆ. ಆದರೆ ಬಿಜೆಪಿ ಪಕ್ಷದವರು ಸಿಗುವುದಿಲ್ಲ. ಬಿಜೆಪಿ ಯಾವ ರೀತಿಯಲ್ಲಿ ಚುನಾವಣೆ ಗೆಲ್ಲುತ್ತಿದೆ ಎಂದು ಇಡೀ ವಿಶ್ವವೇ ಗಮನಿಸುತ್ತಿದೆ. ನೀವು ಯಾವ ರೀತಿ ಚುನಾವಣೆ ಗೆಲ್ಲುತ್ತಿದ್ದೀರಿ ಎಂದು ಬೇರೆ ಬೇರೆ ದೇಶಗಳು ಗಮನಿಸುತ್ತಿವೆ ನರೇಂದ್ರ ಮೋದಿಯವರೇ ಎಂದು ಕಿಡಿಕಾರಿದರು.

ಕೀಳು ಮಟ್ಟದ ಆಡಳಿತ ಮತ್ತೆ ದೇಶಕ್ಕೆ ಬೇಕಾ?: ಮೊನ್ನೆಯಷ್ಟೇ ಅಗತ್ಯ ವಸ್ತುಗಳ ಮೇಲೂ ಜಿಎಸ್‌ಟಿ ವಿಧಿಸಿದ್ದೀರಿ. ನಮ್ಮೂರಲ್ಲಿ ರಾಮನವಮಿ ದಿನ ಮಜ್ಜಿಗೆಯನ್ನು ಉಚಿತವಾಗಿ ಹಂಚುತ್ತಿದ್ದೆವು. ಅಂತಹ ಮಜ್ಜಿಗೆಗೂ ಜಿಎಸ್‌ಟಿ ವಿಧಿಸಿದ್ದೀರಿ. ಅಗತ್ಯ ವಸ್ತುಗಳಿಗೂ ಶೇ.5ರಷ್ಟು ಜಿಎಸ್‌ಟಿ ವಿಧಿಸಿದ್ದಾರೆ. ಇಂತಹ ಕೀಳುಮಟ್ಟದ ಆಡಳಿತ ಮತ್ತೆ ಈ ದೇಶಕ್ಕೆ ಬೇಕಾ? ಎಂದು ಪ್ರಶ್ನಿಸಿದರು.

ಎಲ್ಲದ್ದಕ್ಕೂ ಲೆಕ್ಕ ಕೊಡಿ: ಅಗತ್ಯ ವಸ್ತುಗಳು, ಪೆಟ್ರೋಲ್, ಡೀಸೆಲ್ ಸೇರಿದಂತೆ ಯಾವುದೂ ಸಾಮಾನ್ಯ ಜನಕ್ಕೆ ಕೈಗೆಟುಕುವಂತೆ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಯಾವ ಉದ್ದೇಶಕ್ಕೆ ಹೀಗೆ ಮಾಡುತ್ತಿದ್ದೀರಿ. ಬಹಳ ದೊಡ್ಡ ಯೋಜನೆ ಅನುಷ್ಠಾನಕ್ಕೆ ಮುಂದಾಗಿ, ಅಲ್ಲಿಗೆ ಹಣ ವಿನಿಯೋಗ ಮಾಡುತ್ತಿದ್ದಾರಾ? ಎಂದು ನೋಡಿದರೆ ಅಂತಹದ್ದು ಏನೂ ಇಲ್ಲ. ಹಾಗಾಗಿ ಹಣ ಎಲ್ಲಿ ಖರ್ಚು ಮಾಡುತ್ತಿದ್ದೀರಿ? ನೀವು ಎಲ್ಲದಕ್ಕೂ ಲೆಕ್ಕ ಕೊಡಬೇಕು ಎಂದು ಆಗ್ರಹಿಸಿದರು.

ಸೋನಿಯಾ ಗಾಂಧಿಯವರಿಗೆ ಆತ್ಮಸ್ಥೈರ್ಯ ತುಂಬಲು ಹಾಗೂ ದೇಶದಲ್ಲಿ ಮುಂದಿನ ದಿನಗಳು ಕಾಂಗ್ರೆಸ್‌ನದ್ದಾಗಿರುತ್ತದೆ ಎಂಬ ಸಂದೇಶ ನೀಡುವುದು ಈ ಪ್ರತಿಭಟನೆಯ ಉದ್ದೇಶವಾಗಿದೆ ಎಂದು ಹೇಳಿದರು. ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಕಳಲೆ ಕೇಶವಮೂರ್ತಿ, ಮಾಜಿ ಎಂಎಲ್‌ಸಿ ಧರ್ಮಸೇನ, ಕಾಂಗ್ರೆಸ್ ಮುಖಂಡರಾದ ಕೆ.ಮರೀಗೌಡ, ಕೆ.ಹರೀಶ್‌ಗೌಡ, ಹೆಚ್.ಎ. ವೆಂಕಟೇಶ್, ವಕೀಲ ಚಂದ್ರಮೌಳಿ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರ ನಾಥ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಗಾಂಧಿಚೌಕದಲ್ಲಿ ಶುಕ್ರವಾರ ಕೆಪಿಸಿಸಿ ಮಾಜಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

2023ಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ; ಇದು ಸೂರ್ಯ–ಚಂದ್ರ ಇರುವಷ್ಟೇ ಸತ್ಯ

ಮೈಸೂರು,ಜು.22(ಪಿಎಂ)– ರಾಜ್ಯದ ಜನತೆ ರಾಜ್ಯ ಬಿಜೆಪಿ ಸರ್ಕಾರದ ಆಡಳಿತ ವೈಖರಿ ಗಮನಿಸುತ್ತಿದ್ದು, 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವುದು ಸೂರ್ಯ–ಚಂದ್ರ ಇರುವಷ್ಟೇ ಸತ್ಯ ಎಂದು ಮಾಜಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಹೇಳಿದರು.

ಸರ್ಕಾರಿ ಶಾಲಾ ಮಕ್ಕಳಿಗೆ ಶೂ–ಸಮವಸ್ತ್ರ ಕೊಡಲು ಈ ಸರ್ಕಾರದಿಂದ ಸಾಧ್ಯವಾಗುತ್ತಿಲ್ಲ. ಮೂರು ತಿಂಗಳಿಗೊಮ್ಮೆ ವೇತನ ನೀಡಲಾಗುತ್ತಿದೆ ಎಂದು ಕೆಎಸ್‌ಆರ್‌ಟಿಸಿ ನೌಕರರು ಅಳಲು ತೋಡಿಕೊಂಡಿದ್ದಾರೆ. ಇಂತಹ ದುಸ್ಥಿತಿಯ ಆಡಳಿತವನ್ನು ರಾಜ್ಯ ಬಿಜೆಪಿ ಸರ್ಕಾರ ನೀಡುತ್ತಿದೆ. ಕಾಂಗ್ರೆಸ್–ಜೆಡಿಎಸ್‌ನ 17 ಜನ ಶಾಸಕರನ್ನು ಕರೆದುಕೊಂಡು ಹೋಗಿ ಸರ್ಕಾರ ಮಾಡಿದ್ದೀರಿ. ಯಾವ ಉದ್ದೇಶಕ್ಕೆ ಮಾಡಿದ್ದೀರಿ? ನಾವು ಕಾಂಗ್ರೆಸ್‌ನವರು ಸುಮ್ಮನೆ ಕೂತಿಲ್ಲ. ಹಳ್ಳಿಹಳ್ಳಿಯಲ್ಲಿ ಕಾಂಗ್ರೆಸ್ ಸಂಘಟನೆಯಾಗುತ್ತಿದೆ. ಆ ಮೂಲಕ ನಮ್ಮ ಕಾರ್ಯಕರ್ತರು ಬಿಜೆಪಿ ಬಣ್ಣ ಬಯಲು ಮಾಡುತ್ತಿದ್ದಾರೆ ಎಂದರು.



ಜಿಲ್ಲಾ ಆಯುಷ್ ಅಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಡಾ.ಪುಷ್ಪಾ ಅವರನ್ನು ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಹಾಗೂ ನಗರಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ. ರಾಮಕೃಷ್ಣ ಅಭಿನಂದಿಸಿದರು. ಈ ಸಂದರ್ಭದಲ್ಲಿ ಪಡುವಾರಹಳ್ಳಿಯ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಸಿ.ಡಿ.ಕುಮಾರ್, ಬಿ.ಕುಮಾರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.07.2022 ಶನಿವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ದಶಮಿ, ನಕ್ಷತ್ರ : ಭರಣಿ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರಿಂದ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವಗಳು, ಶ್ರೀ ಚಕ್ರ ಪೂಜೆ, ಮಹಾಗಣಪತಿ ಹೋಮ, ಬೆಳಗ್ಗೆ 7.30ಕ್ಕೆ, ಆಢಿಕೃತ್ತಿಕಾ, ಮರಕತ ಸುಬ್ರಹ್ಮಣ್ಯಸ್ವಾಮಿಗೆ ಕಾವಡಿ ಸೇವೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್, ಮೈಸೂರು ಫಾರ್ಮ ಗಾಲ್ಫ್ ಅಸೋಸಿಯೇಷನ್ :** ಮೊದಲನೇ ಆವೃತ್ತಿ ಗಾಲ್ಫ್ ಪಂದ್ಯಾವಳಿ, ಸ್ಥಳ: ಜಯಚಾಮರಾಜ ಒಡೆಯರ್ ಗಾಲ್ಫ್ ಕೋರ್ಟ್, ಬೆಳಗ್ಗೆ 7.30ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಹ್ಯಾದ್ರಿ ಸಿಂಚನ ಚಾರಿಟಬಲ್ ಟ್ರಸ್ಟ್ :** ವಿಶ್ವ ಯೋಗ ದಿನ ಮತ್ತು ವಿಶ್ವ ಸಂಗೀತ ದಿನ ಉದ್ಘಾಟನಾ ಸಮಾರಂಭ, ಉದ್ಘಾಟನೆ: ವಿಶ್ರಾಂತ ಕುಲಪತಿ ಪ್ರೊ. ರಂಗಪ್ಪ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಭವನ, ವಿಜಯನಗರ ಮೊದಲನೇ ಹಂತ, ಬೆಳಗ್ಗೆ 9.30 ಗಂಟೆಗೆ.

■ **ಒಕ್ಕಲಿಗರ ಸಂಘ (ಮೈಸೂರು, ಚಾಮರಾಜನಗರ ಜಿಲ್ಲೆ) :** ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳ ಜನ್ಮದಿನ ಪ್ರಯುಕ್ತ ಆಯುಷ್ಮಾನ್ ಕಾರ್ಡ್ ಮತ್ತು ಸೀನಿಯರ್ ಸಿಟಿಜನ್ ಕಾರ್ಡ್ ಮಾಡಿಸುವ ಶಿಬಿರ, ಸ್ಥಳ: ಒಕ್ಕಲಿಗರ ಸಮುದಾಯ ಭವನ, ವಿದ್ಯಾರಣ್ಯಪುರಂ, ಬೆಳಗ್ಗೆ 10 ಗಂಟೆಗೆ.

■ **ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜು :** ಪ್ರತಿಭಾನ್ವೇಷಣೆ 2022–23, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10 ಗಂಟೆಗೆ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫ್ಯಾಷಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೋಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ರವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ (ಕಾನೂನು ಶಾಲೆ), ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ :** ಕಾನೂನು ಅರಿವು–ನೆರವು ಕಾರ್ಯಕ್ರಮ, ಉದ್ಘಾಟನೆ: ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ದೇವರಾಜ್ ಭೂತೆ, ಸ್ಥಳ: ದಡದಹಳ್ಳಿ ಸಮುದಾಯ ಭವನ, ಬೆಳಗ್ಗೆ 10.30 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಂಗಳೂರಿನ ಸಪ್ನ ಬುಕ್ ಹೌಸ್ :** ಆಚಾರ್ಯ ಹಂ.ಪ. ನಾಗರಾಜಯ್ಯ ವಿರಚಿತ ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಟರ್ ಇನ್ ಕರ್ನಾಟಕ (ಕರ್ನಾಟಕ ಅಭಿಜಾತ ಸಾಹಿತ್ಯದ ಇಂದ್ರ ಚಾಪ) 5 ಪುಸ್ತಕ ಕುರಿತು ಒಂದು ಅನುಸಂಧಾನ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಅಧ್ಯಕ್ಷತೆ: ವಿಶ್ರಾಂತ ಕುಲಪತಿ ಪ್ರೊ. ಮಲ್ಲಿಕಾ ಘಂಟಿ, ಗೌರವ ಉಪಸ್ಥಿತಿ: ನಾಡೋಜ ಡಾ. ಹಂ.ಪ. ನಾಗರಾಜಯ್ಯ, ಸ್ಥಳ: ಬಿಎಂಶ್ರೀ ಸಭಾಂಗಣ, ಮಾನಸ ಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಜನಮನ ಪ್ರತಿಷ್ಠಾನ, ಬೆಂಗಳೂರು :** 'ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ' ಗ್ರಂಥ ಬಿಡುಗಡೆ ಸಮಾರಂಭ ಹಾಗೂ ಸಂವಾದ ಗೋಷ್ಠಿ, ದಿವ್ಯ ಸಾನಿಧ್ಯ: ಸುತ್ತೂರು ಶ್ರೀ ಕ್ಷೇತ್ರದ ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮಿಗಳು, ಕಾಗಿನೆಲೆ ಗುರುಪೀಠದ ಶ್ರೀ ಶಿವಾನಂದಪುರಿ ಮಹಾಸ್ವಾಮಿಗಳು, ಉದ್ಘಾಟನೆ: ರಾಜ್ಯಸಭೆ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ವಿಶೇಷ ಉಪಸ್ಥಿತಿ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ: ವಿಧಾನಪರಿಷತ್ತಿನ ಮಾಜಿ ಸಭಾಪತಿ ಡಾ. ಬಿ.ಎಲ್. ಶಂಕರ್, ಲೇಖಕರ ಪರವಾಗಿ ಮಾತನಾಡುವವರು: ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಗ್ರಂಥ ಪರಿಚಯ: ವಿಶ್ರಾಂತ ಕುಲಪತಿ ಡಾ. ಸಬೀಹಾ ಭೂಮಿಗೌಡ, ಗ್ರಂಥ ಸಂಪಾದಕರು: ಕಾ.ತ. ಚಿಕ್ಕಣ್ಣ, ಲಕ್ಷ್ಮಣ ಕೊಡಸೆ, ಸಂವಾದ: ಸಮಕಾಲಿನ ಸಂವೇದನೆ, ಉಪಸ್ಥಿತಿ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ನಡೆಸಿಕೊಡುವವರು: ಡಾ. ಬಂಜಗೆರೆ ಜಯಪ್ರಕಾಶ್, ಸ್ಥಳ: ಕಲಾಮಂದಿರ, ಹುಣಸೂರು ರಸ್ತೆ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಪಿಂಚಣಿದಾರರ ಸಂಘ :** ಸರ್ವ ಸದಸ್ಯರ ಸಭೆ, ಸ್ಥಳ: ನೌಕರರ ಸಮುದಾಯ ಭವನ, ಕೆಸರೆ ಕಾಲೋನಿ, ರಾಜೇಂದ್ರನಗರ, ಬೆಳಗ್ಗೆ 11 ಗಂಟೆಗೆ.

■ **ಮೈಸೂರು ಕನ್ನಡ ವೇದಿಕೆ ಮತ್ತು ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಹಾಸ್ಯ ಚಕ್ರವರ್ತಿ ನರಸಿಂಹರಾಜುರವರ 99ನೇ ಜಯಂತೋತ್ಸವ ಕಾರ್ಯಕ್ರಮ ಮತ್ತು ಹಾಸ್ಯ ಚಕ್ರವರ್ತಿ ಪ್ರಶಸ್ತಿ ಪ್ರದಾನ ಸಮಾರಂಭ, ದಿವ್ಯ ಸಾನಿಧ್ಯ: ನಟರಾಜ ಶಿಕ್ಷಣ ಸಂಸ್ಥೆಯ ಶ್ರೀ ಚಿದಾನಂದ ಸ್ವಾಮೀಜಿ, ಸ್ಥಳ: ನಟರಾಜ ಪ್ರತಿಷ್ಠಾನ ಮಠ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಲಿಟರರಿ ಫೋರ್ಮ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ :** ಮೈಸೂರು ಲಿಟ್ರೇಚರ್ ಫೆಸ್ಟಿವಲ್‌ನ 6ನೇ ಆವೃತ್ತಿ, ಉದ್ಘಾಟನೆ: ರಾಜಮಾತೆ ಡಾ. ಪ್ರಮೋದಾದೇವಿ ಒಡೆಯರ್, ಸ್ಥಳ: ಸದರನ್ ಸ್ಟಾರ್, ವಿನೋಬಾ ರಸ್ತೆ, ಮಧ್ಯಾಹ್ನ 1 ಗಂಟೆಗೆ.

■ **ಡಿ. ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜು ಹಿರಿಯ ವಿದ್ಯಾರ್ಥಿಗಳ ಸಂಘ :** ಸಾಧಕರು ಮತ್ತು ಪ್ರತಿಭಾನ್ವಿತರಿಗೆ ಸನ್ಮಾನ ಕಾರ್ಯಕ್ರಮ, ಸ್ಥಳ: ಡಿ. ಬನುಮಯ್ಯ ಕಲಾ ಭವನ, ಡಿ. ಬನುಮಯ್ಯ ಕಾಲೇಜು, ಸಂಜೆ 4 ಗಂಟೆಗೆ.

■ **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ನೌಕರರ ಸಂಘ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ :** ಭಾರತ ರತ್ನ, ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 131ನೇ ಜನ್ಮ ದಿನೋತ್ಸವ, ದಿವ್ಯ ಸಾನಿಧ್ಯ: ಮೈಸೂರಿನ ಗಾಂಧಿನಗರದ ಶಿವಯೋಗಿ ಉರಿಲಿಂಗ ಪೆದ್ದಿ ಮಠದ ಪೀಠಾಧ್ಯಕ್ಷರಾದ ಬಹುಜನ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಸ್ಥಳ: ಪುರಭವನ, ಸಂಜೆ 5 ಗಂಟೆಗೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಸಂಗೀತ ಕಾರ್ಯಕ್ರಮ, ಗಾಯನ: ವಿದ್ವಾನ್ ಹೆಮ್ಮಿಗೆ ಪ್ರಶಾಂತ್, ಪಿಟೀಲು: ವಿದುಷಿ ಡಾ. ವೀಣಾ ಸುರೇಶ್, ಮೃದಂಗ: ವಿದ್ವಾನ್ ಅನಿರುದ್ಧ ಭಟ್, ಮೋರ್ಸಿಂಗ್: ವಿದ್ವಾನ್ ವಿ.ಎಸ್. ರಮೇಶ್, ಸ್ಥಳ: ಕೆ. ವಾಸುದೇವಚಾರ್ಯ ಭವನ, ಶ್ರೀ ನಾದಬ್ರಹ್ಮ ಸಂಗೀತ ಸಭಾ, ಸಂಜೆ 6 ಗಂಟೆಗೆ.

■ **ಕಡಾಂಬಿ ಪದ್ಮ ಮೆಮೋರಿಯಲ್ ಟ್ರಸ್ಟ್ :** ಡಿವಿಜಿಯವರ 'ಮಂಕು ತಿಮ್ಮನ ಕಗ್ಗ' ಪ್ರವಚನ, ಪ್ರವಚನಕಾರರು: ಶಿವಮೊಗ್ಗದ ಜಿ.ಎಸ್. ನಟೇಶ್, ಗೀತ ಗಾಯನ ಮತ್ತು ಪ್ರವಚನ, ಸ್ಥಳ: ಗಣಪತಿ ದೇವಸ್ಥಾನ 'ಐ' ಬ್ಲಾಕ್, ರಾಮಕೃಷ್ಣನಗರ, ಸಂಜೆ 6 ಗಂಟೆಗೆ.

■ **ರಂಗಾಯಣ :** ಹವ್ಯಾಸಿ ಅಭಿನಯ ರಂಗ ತರಬೇತಿ ಶಿಬಿರದ ಶಿಬಿರಾರ್ಥಿಗಳಿಂದ 'ಅಶ್ವಪರ್ವ' ನಾಟಕ, ರಚನೆ: ಎಸ್. ರಾಮನಾಥ, ನಿರ್ದೇಶನ: ಕಾರ್ತಿಕ್ ಉಪಮನ್ಯು, ಸ್ಥಳ: ಭೂಮಿ ಗೀತ ರಂಗಮಂದಿರ, ರಂಗಾಯಣ, ಸಂಜೆ 6 ಗಂಟೆಗೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಉಪನ್ಯಾಸ, ಸ್ವಾಮಿ ಮಹಿಪಾಲಾನಂದ ಅವರಿಂದ, ವಿಷಯ: 'ತಂತ್ರಜ್ಞಾನದ ಯುಗದಲ್ಲಿ ಆಧ್ಯಾತ್ಮಿಕ ದೃಷ್ಟಿಕೋನ', ಸ್ಥಳ: ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಶ್ರೀ ರಾಮಕೃಷ್ಣ ಆಶ್ರಮ, ಸಂಜೆ 6 ಗಂಟೆಗೆ.

■ **ಕಲಾ ಸುರಭಿ :** ಕರ್ನಾಟಕ ಸಂಗೀತ, ಹಾಡುಗಾರಿಕೆ: ಅಶ್ವಿನಿ ಕೊಳಿಕ್ಕಜೆ, ಪಿಟೀಲು: ಕೇಶವ್ ಮೋಹನ್‌ಕುಮಾರ್, ಮೃದಂಗ: ನಂದನ್ ಕಶ್ಯಪ್, ಘಟ: ಶಮಿತ್ ಎಸ್. ಗೌಡ, ಸ್ಥಳ: ಸುರಭಿ ರಂಗ ಮನೆ, ಕುವೆಂಪುನಗರ, ಸಂಜೆ 7 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭವದ ಬಯಲಿಗರು ರಚನೆ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ: ರಚನೆ– ಶ್ರೀನಿವಾಸ ಪ್ರಸಾದ್, ಪ್ರಸ್ತುತಿ– ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 9.00 ರಾಗಲಹರಿ: ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ದೈನಂದಿನ ವಿಶೇಷ, ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಎಂ.ಎಲ್. ವಸಂತಕುಮಾರಿ– ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 12.30 ಎದೆ ತುಂಬಿದ ಹಾಡು: ಪರಿಕಲ್ಪನೆ ಮತ್ತು ಪ್ರಸ್ತುತಿ– ಬಸವರಾಜ್ ಸಾದರ್, 12.45 ಜನಪದಗೀತೆ: ತುಳಸಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ: ಬಿ. ಸುನಂದ ದಿಲೀಪ್, ಎಸ್. ಶಾರದಾ, 3.35 ಮಕ್ಕಳ ಮಂಟಪ– ಮುಖಾಮುಖಿ: ನಾದವಪುಷಾ ಸಂಗೀತ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 4.00 ನಾಟಕ 'ಬೇರು', ರಚನೆ– ಕೃಷ್ಣಮೂರ್ತಿ ಕವತಾರ, ನಿರ್ಮಾಣ–ಉಮೇಶ್ ಎಸ್.ಎಸ್., 4.30 ಡಾ.ಹಾ.ಮಾ.ನಾಯಕ್ ಅವರೊಂದಿಗೆ ಡಾ.ಎನ್.ಎಸ್.ತಾರಾನಾಥ್ ಅವರು ನಡೆಸಿದ್ದ ಸಂವಾದ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ 6.50 ಕೃಷಿರಂಗ 'ಕಿಸಾನ್ ವಾಣಿ' ತೋರಣ ಹೂರಣ: ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್‌ಡೌನ್: ಕಥಾನಾಟಕ. ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ 'ಬದುಕು' ಮೂಲಕಥೆ– ದಿವಾಕರ ಹೆಗ್ಡೆ, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 9.15 ಎಲ್ಲಿ ಯಾವ ಗಿಡಾ ಮರ: ಅರಣ್ಯ ಇಲಾಖಾ ಅಧಿಕಾರಿ ಮನೋಜ ಕುಮಾರ ಅವರೊಂದಿಗೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ: ಮೋಹಿತ್ ಕುಮಾರ್– ಗಿಟಾರ್ ವಾದನ 2. ಉಲ್ಲಾಸ್ ರಾಜ್ಞನ್ಸ್ – ತಬಲ, 11.00 ಸವಿನೆನಪು.

ಮೈಸೂರು ಜೆ.ಎಲ್.ಪುರಂನ ಟೆಂಪಲ್ ರಸ್ತೆ 3.40 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ: ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಚಾಲನೆ



ಮೈಸೂರು,ಜು.22(ಪಿಎಂ)– ಮೈಸೂರು ಮಹಾನಗರ ಪಾಲಿಕೆಯ ವಾರ್ಡ್ 19 ಮತ್ತು 22ರ ವ್ಯಾಪ್ತಿಯಲ್ಲಿ 3.40 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಶುಕ್ರವಾರ ಚಾಲನೆ ನೀಡಿದರು.

ಕೆಆರ್‌ಎಸ್ ರಸ್ತೆಯಿಂದ ಮಾತೃಮಂಡಳಿ ವೃತ್ತದ ಮಾರ್ಗವಾಗಿ ಹುಣಸೂರು ರಸ್ತೆವರೆಗಿನ ಟೆಂಪಲ್ ರಸ್ತೆಹಾಗೂ ಮಾತೃ ಮಂಡಳಿ ವೃತ್ತದ ವಾಲ್ಮೀಕಿ ರಸ್ತೆವರೆಗಿನ ಆದಿಪಂಪ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಮಾತೃಮಂಡಳಿ ವೃತ್ತದ ಬಳಿ ಶಾಸಕರು ಭೂಮಿ ಪೂಜೆ ನೆರವೇರಿಸಿದರು. ಪಾಲಿಕೆ ಸದಸ್ಯರಾದ ಭಾಗ್ಯ ಮಾದೇಶ್, ನಮ್ರತಾ ರಮೇಶ್, ನಾಮನಿರ್ದೇಶಿತ ಸದಸ್ಯ ಚಿಕ್ಕವೆಂಕಟು ಅವರೊಂದಿಗೆ ಶಾಸಕರು ಕಾಮಗಾರಿಗೆ ಚಾಲನೆ ನೀಡಿದರು. ಶಾಸಕರ ವಿವೇಚನಾ ಎಸ್‌ಎಫ್‌ಸಿ ವಿಶೇಷ ಪ್ಯಾಕೇಜ್ ಅನುದಾನದಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಈ ರಸ್ತೆಗಳ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

ಪಾಲಿಕೆ ಉಪ ಆಯುಕ್ತಮಹೇಶ್, ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ಸೋಮಶೇಖರ್ ರಾಜು, ಪ್ರಧಾನ ಕಾರ್ಯದರ್ಶಿಗಳಾದ ಪುನೀತ್, ರಮೇಶ್, ಪಕ್ಷದ ಮುಖಂಡರಾದ ದಿನೇಶ್‌ಗೌಡ, ತನುಜಾ ಮಹೇಶ್, ಮಲ್ಲಿಕಾರ್ಜುನ್, ಮಂಜು, ಶ್ರೀರಾಮ್, ಜಯಪ್ರಕಾಶ್, ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಪಡುವಾರಹಳ್ಳಿ ರಾಮಕೃಷ್ಣ, ವಕೀಲರಾದ ಸತ್ಯಮೂರ್ತಿ, ಶಿವಕುಮಾರ್, ಮೈಸೂರು ಸಿಟಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಶಿವು, ಪೈಲ್ವಾನ್ ಭೈರಪ್ಪ, ಮುಖಂಡರಾದ ಬಾಲಣ್ಣ, ಧನರಾಜ್, ಚಂದ್ರು, ಗಿರೀಶ್, ಗುರುದತ್, ಲಯನ್ ಗಣೇಶ್, ಮಧು, ನಂದೀಶ್, ಬಸವರಾಜು, ಬಾಬಣ್ಣ, ಲಲಿತಾ, ಶ್ಯಾಮ್, ವೇಣು, ಯೋಗೇಶ್, ಗುತ್ತಿಗೆದಾರ ಅಶೋಕ್ ಗೋವಿಂದೇಗೌಡ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 23 ಶನಿವಾರ 2022

ಸಂಪುಟ: 43 | ಸಂಚಿಕೆ: 98 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೈಸೂರು ವಿಮಾನ ನಿಲ್ದಾಣಕ್ಕೆ 'ನಾಲ್ವಡಿ ಕೃಷ್ಣರಾಜ ಒಡೆಯರ್' ಹೆಸರು ನಾಮಕರಣ

ಸಂಪುಟ ಸಭೆ ನಿರ್ಣಯ



ಸಂಸದ ಪ್ರತಾಪ್‌ಸಿಂಹ, ಶಾಸಕ ಜಿ.ಟಿ.ದೇವೇಗೌಡರು ಸೇರಿದಂತೆ ಸ್ಥಳೀಯ ಮುಖಂಡರ ಒತ್ತಾಯಕ್ಕೆ ಸರ್ಕಾರ ಮನ್ನಣೆ




ಮೈಸೂರು, ಜು.22–ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿಡಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ, ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ 'ನಾಲ್ವಡಿ ಕೃಷ್ಣರಾಜ ಒಡೆಯರ್ ವಿಮಾನ ನಿಲ್ದಾಣ' ಎಂದು ನಾಮಕರಣ ಮಾಡಲು ನಿರ್ಧರಿಸಲಾಗಿದ್ದು, ಸರ್ಕಾರದ ನಿರ್ಣಯವನ್ನು ಕೇಂದ್ರ ವಿಮಾನಯಾನ ಪ್ರಾಧಿಕಾರಕ್ಕೆ ಸಲ್ಲಿಸುವುದಾಗಿ ತಿಳಿಸಿದರು.

240 ಎಕರೆ ಹಸ್ತಾಂತರ: ಮೈಸೂರು ವಿಮಾನ ನಿಲ್ದಾಣದ ಉನ್ನತೀಕರಣ ಹಾಗೂ ವಿಸ್ತರಣೆಗೆ ಅಗತ್ಯವಿರುವ 240 ಎಕರೆ ಭೂಮಿಯನ್ನು ▶ 10ನೇ ಪುಟಕ್ಕೆ

ಚುನಾವಣಾ ರಾಜಕೀಯಕ್ಕೆ ಯಡಿಯೂರಪ್ಪ ಗುಡ್‌ಬೈ

ಪುತ್ರ ವಿಜಯೇಂದ್ರರಿಗೆ ಶಿಕಾರಿಪುರ ಕ್ಷೇತ್ರ ತ್ಯಾಗ


- ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ವಿಜಯೇಂದ್ರರಿಗೆ ಕ್ಷೇತ್ರ ಫಿಕ್ಸ್
- ತಮ್ಮ ಪುತ್ರನಿಗೆ ತಾವೇ ಟಿಕೆಟ್ ಘೋಷಿಸಿ ವರಿಷ್ಠರಿಗೆ ಖಡಕ್ ಸಂದೇಶ
- ರಾಜ್ಯ, ರಾಷ್ಟ್ರ ಬಿಜೆಪಿ ವಲಯದಲ್ಲಿ ತಲ್ಲಣ



ಬೆಂಗಳೂರು, ಜು.22 (ಕೆಎಂಶಿ)–ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಣೆ ಮಾಡಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಆದರೆ ಸಕ್ರಿಯ ರಾಜಕಾರಣದಲ್ಲಿ ಮುಂದುವರೆಯುವುದಾಗಿ ತಿಳಿಸಿದ್ದಾರೆ.

ತಮ್ಮಿಂದ ತೆರವಾಗಲಿರುವ ಶಿಕಾರಿಪುರ ವಿಧಾನ ಸಭಾ ಕ್ಷೇತ್ರದಲ್ಲಿ ನನ್ನ ಪುತ್ರ, ಬಿಜೆಪಿಯ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಚುನಾವಣಾ ಕಣಕ್ಕಿಳಿಯಲಿದ್ದಾರೆ ಎಂದು ಘೋಷಣೆ ಮಾಡಿದ್ದಾರೆ. ಶಿಕಾರಿಪುರ ಕ್ಷೇತ್ರ ವ್ಯಾಪ್ತಿಯ ಅಂಜನಾಪುರ ಜಲಾಶಯಕ್ಕೆ ಬಾಗಿನ ಅರ್ಪಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಹೀಗೆ ಹಠಾತ್ತನೆ ತಮ್ಮ ರಾಜಕೀಯ ನಿರ್ಧಾರವನ್ನು ಪ್ರಕಟಿಸಿರುವುದು ರಾಜ್ಯ ಬಿಜೆಪಿಯಲ್ಲಿ ತಲ್ಲಣವುಂಟು ಮಾಡಿದೆ. ವಿಧಾನಸಭಾ ಚುನಾವಣೆಗೆ ಇನ್ನೂ ಹತ್ತು ತಿಂಗಳು ಬಾಕಿ ಇರುವ ಮುನ್ನವೇ ಶಿಕಾರಿಪುರ ಕ್ಷೇತ್ರದಿಂದ ನನ್ನ ಪುತ್ರನೇ ಕಣಕ್ಕಿಳಿಯುತ್ತಾನೆ ಎಂದು ಘೋಷಣೆ ಮಾಡಿರುವುದು ಪಕ್ಷದ ನಾಯಕರಿಗೆ ಅಚ್ಚರಿವುಂಟು ಮಾಡಿದೆ. ಅಭ್ಯರ್ಥಿಗಳ ಆಯ್ಕೆ ಪಕ್ಷದ ವರಿಷ್ಠರದ್ದೇ ಅಂತಿಮ. ದೆಹಲಿ ನಾಯಕರ ನಿರ್ಧಾರವನ್ನೂ ಕಾಯದೇ ▶ 10ನೇ ಪುಟಕ್ಕೆ

ಮುಂದಿನ ಚುನಾವಣೆಯಲ್ಲಿ ಬಿಎಸ್‌ವೈ ಬಲವಿದೆ



ನವದೆಹಲಿ, ಜು.22– ಮುಂದಿನ ಚುನಾವಣೆಯಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ಬಲ, ಮಾರ್ಗದರ್ಶನ ಇರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅವರು ಇಂದು ನವದೆಹಲಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡುತ್ತಾ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸುಸ್ತಾಗಲಿ, ನಿವೃತ್ತಿಯಾಗಲಿ ಇಲ್ಲ. ಅವರು ನಿರಂತರ ಹೋರಾಟಗಾರರು. ಅವರು ಭಾಜಪದೊಂದಿಗೆ ಸದಾ ಇದ್ದಾರೆ. ಅವರಿಗೆ ತಮ್ಮದೇ ಆದ ಮಹತ್ವವಿದ್ದು, ಪಕ್ಷದ ವರಿಷ್ಠರಿಗೂ ಅದರ ಅರಿವಿದೆ. ಅವರನ್ನು ಭೇಟಿಯಾದ ಸಂದರ್ಭದಲ್ಲಿ ಈ ಬಗ್ಗೆ ಚರ್ಚಿಸಲಾಗುವುದು ಎಂದರು.

ತಂದೆ, ಪಕ್ಷದ ನಾಯಕರ ನಿರ್ಧಾರದಂತೆ ನಡೆಯುತ್ತೇನೆ...




ಬೆಂಗಳೂರು: ತಮ್ಮ ತಂದೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಯಾವ ರೀತಿ ಮಾರ್ಗದರ್ಶನ ಮಾಡುತ್ತಾರೆ. ಪಕ್ಷ ನಾಯಕರು ಯಾವ ನಿರ್ಧಾರ ಕೈಗೊಳ್ಳುತ್ತಾರೆ ಅದರಂತೆ ನಡೆಯುತ್ತೇನೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ವಿಜಯೇಂದ್ರ ಹೇಳಿದ್ದಾರೆ.

ಹಿಂದೆಯೂ ಪಕ್ಷ ಕಟ್ಟುವ ಕಾರ್ಯವನ್ನು ಮಾಡಿದ್ದೇನೆ. ಮುಂದೆಯು ನನ್ನ ಆ ಕಾರ್ಯ ಮುಂದುವರಿಯುತ್ತದೆ. ಶಿಕಾರಿಪುರದಲ್ಲಿ ಸ್ಪರ್ಧೆ ಬಗ್ಗೆ ತಂದೆಯವರನ್ನು ಕೇಳುವ ಪ್ರಶ್ನೆಯೇ ಉದ್ಭವಿಸಿರಲಿಲ್ಲ. ಕ್ಷೇತ್ರದ ಜನರು ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಒತ್ತಾಯ ಮಾಡಿದ್ದರು. ಆದ್ದರಿಂದ ಈ ಬಗ್ಗೆ ನಿರ್ಧಾರ ಮಾಡಿದ್ದಾರೆ. ಯಡಿಯೂರಪ್ಪ ಅವರಿಗೆ ನಿವೃತ್ತಿ ಎಂಬುವುದೇ ಇಲ್ಲ, ಏಕೆಂದರೆ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡೋ ಸಂದರ್ಭದಲ್ಲೂ ಮುಂದಿನ ಚುನಾವಣೆಯಲ್ಲಿ ಪಕ್ಷಕ್ಕೆ ಗೆಲುವು ತಂದುಕೊಡುವುದಾಗಿ ಹೇಳಿದ್ದರು. ಆ ಕಾರ್ಯವನ್ನು ಮುಂದುವರಿಸುತ್ತಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಯಾವುದೇ ಕೈಗಾರಿಕೆ ಸ್ಥಳೀಯ ಕನ್ನಡಿಗರಿಗೆ ಉದ್ಯೋಗ ಕಲ್ಪಿಸಲೇಬೇಕು

ಹೊಸ ನೀತಿ ತರಲು ಸಂಪುಟ ಸಭೆ ನಿರ್ಣಯ

- ರಸಗೊಬ್ಬರ ದಾಸ್ತಾನಿಗೆ 200 ಕೋಟಿ ಬಂಡವಾಳ ಸಾಲ
- 'ಆಜಾದಿ ಕಾ ಅಮೃತ್' 81 ರಕ್ಷಾ ಬಂಧಿಗಳ ಬಿಡುಗಡೆ
- ಡಿ ದರ್ಜೆ ನೌಕರರ ನೇಮಕಾತಿ
- ಉಚಿತ ಶೂ, ಸಾಕ್ಸ್ ವಿತರಣೆ



ಬೆಂಗಳೂರು, ಜು.22(ಕೆಎಂಶಿ)– ಸ್ಥಳೀಯರು ಮತ್ತು ಕನ್ನಡಿಗರಿಗೆ ಉದ್ಯೋಗ ಕಲ್ಪಿಸುವ ಹೊಸ ನೀತಿಗೆ ರಾಜ್ಯ ಸಚಿವ ಸಂಪುಟ ಹಸಿರು ನಿಶಾನೆ ನೀಡಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಯಾವುದೇ ಕೈಗಾರಿಕೆ ತಾನು ಹೂಡುವ ಬಂಡವಾಳಕ್ಕೆ ಅನುಗುಣವಾಗಿ ಉದ್ಯೋಗ ಸೃಷ್ಟಿ ಮಾಡಿಕೊಳ್ಳಬೇಕು. ಸೃಷ್ಟಿಯಾಗುವ ಎಲ್ಲಾ ಹಂತದ ಹುದ್ದೆಗಳನ್ನು ಸ್ಥಳೀಯರು ಮತ್ತು ಕನ್ನಡಿಗರಿಗೇ ನೀಡಬೇಕು. ಅಷ್ಟೇ ಅಲ್ಲ ಇನ್ನು ಮುಂದೆ ಯಾವುದೇ ಕೈಗಾರಿಕೆ ತನ್ನ ಉದ್ಯಮವನ್ನು ವಿಸ್ತರಿಸುವ ಸಂದರ್ಭದಲ್ಲೂ ಅದೇ ಪ್ರಮಾಣದಲ್ಲಿ ಹೊಸ ಉದ್ಯೋಗ ಸೃಷ್ಟಿಯಾಗಬೇಕು. ಉದಾಹರಣೆಗೆ 100 ಕೋಟಿ ರೂ. ಬಂಡವಾಳ ಹೂಡಿಕೆ ಮಾಡಿ, ತನ್ನ ಸಂಸ್ಥೆಯನ್ನು ವಿಸ್ತರಿಸಿದರೆ ಸರ್ಕಾರ ನಿಗದಿಪಡಿಸಿದ ▶ 10ನೇ ಪುಟಕ್ಕೆ

ಕೊನೆ ಆಷಾಢ ಶುಕ್ರವಾರ

ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಭಕ್ತರ ಮಹಾಪೂರ

- ಮೆಟ್ಟಿಲು ಮೂಲಕ ಬೆಟ್ಟಕ್ಕೆ ಬಂದು ಹರಕೆ ತೀರಿಸಿದ ಮಹಾಭಕ್ತರು
- ದೇವಿ ದರ್ಶನ ಪಡೆದವರಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಹೊರ ರಾಜ್ಯದವರು



ಮೈಸೂರು,ಜು.22(ಎಂಟಿವೈ)–ಪ್ರಸಕ್ತ ಸಾಲಿನ ಆಷಾಢ ಮಾಸದ ಕೊನೆ ಶುಕ್ರವಾರ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯದ ವಿಶೇಷ ಪೂಜಾ ಮಹೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ನಾಡದೇವತೆಯ ದರ್ಶನ ಪಡೆದರು.

ಕಳೆದ ಮೂರು ಆಷಾಢ ಶುಕ್ರವಾರ ಹಾಗೂ ವರ್ಧಂತಿ ಮಹೋತ್ಸವ ದಿನಗಳಿಗಿಂತ ಕೊನೆ ಶುಕ್ರವಾರವಾದ ಇಂದು ಬೆಟ್ಟಕ್ಕೆ ಬಂದ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ಶಕ್ತಿ ದೇವತೆಯ ಆರಾಧನೆಯ ಶ್ರೇಷ್ಠ ಆಷಾಢದ ಶುಕ್ರವಾರದಂದು ನಾಡದೇವಿಯ ದರ್ಶನ ಪಡೆದರೆ ಒಳಿತಾಗಲಿದೆ ಎಂಬ ಪ್ರತೀತಿ ಮೇರೆಗೆ ಇಂದು ರಾಜ್ಯದ ವಿವಿಧ ಜಿಲ್ಲೆಗಳಿಂದ ಭಕ್ತರ ದಂಡೇ ಬೆಟ್ಟಕ್ಕೆ ಹರಿದು ಬಂತು. ಮೋಡ ಕವಿದ ವಾತಾವರಣ, ಆಗಾಗ ತುಂತುರು ಮಳೆ ಬೀಳುತ್ತಿದ್ದರೂ, ಭಕ್ತರು ಯಾವುದನ್ನು ಲೆಕ್ಕಿಸದೇ ನಾಡದೇವಿಯ ದರ್ಶನ ಪಡೆಯಲು ಉತ್ಸುಕರಾಗಿದ್ದರು. ಇಂದು ಬೆಟ್ಟಕ್ಕೆ ಬಂದವರಲ್ಲಿ ತಮಿಳು ನಾಡು ಸೇರಿದಂತೆ ಹೊರ ರಾಜ್ಯದ ಭಕ್ತರ ಸಂಖ್ಯೆ ಹೆಚ್ಚಾಗಿದ್ದು ವಿಶೇಷವಾಗಿತ್ತು.

ಮುಂಜಾನೆಯಿಂದಲೇ ಪೂಜೆ: ದೇವಾಲಯದ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ಮುಂಜಾನೆ 3.30ರಿಂದಲೇ ಮಹಾನ್ಯಾಸಕ ಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಅರ್ಚನೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ಜರುಗಿದವು. ನಂತರ ಮಹಾಮಂಗಳಾರತಿ ಬಳಿಕ ಮುಂಜಾನೆ 5.30ರಿಂದ ಭಕ್ತರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಬೆಳಗ್ಗೆ 9.30ಕ್ಕೆ ದೇವಾಲಯದ ಪ್ರಾಂಗಣದಲ್ಲೇ ಉತ್ಸವ ಮೂರ್ತಿ ಪ್ರದಕ್ಷಿಣೆ ನಡೆಯಿತು. ಸಂಪ್ರದಾಯದಂತೆ ದೇವತೆಗೆ ಪೊಲೀಸ್ ▶ 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಟೀಚರ್ : ಎಲೆಕ್ಟ್ರಿಸಿಟಿ ಇಲ್ಲದೆ ಹೋಗಿದ್ರೆ ಏನಾಗುತ್ತಿತ್ತು?
ಗುಂಡ : ರಾತ್ರಿಯಲ್ಲಿ ಕ್ಯಾಂಡಲ್ ಹಿಡ್ಕೊಂಡು ಟಿವಿ ನೋಡಬೇಕಾಗುತ್ತಿತ್ತು.

ಮೈಸೂರು ಮಿತ್ರ

ಶನಿವಾರ, 23 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಕೆಲವು ಸಾರಿ ಗಾಳಿ–ಮಳೆಗೆ ಬಂಡೆಗಳು ಬಿರುಕು ಬಿಡಬಹುದು. ಆದರೆ, ಗರಿಕೆ ಹಾಳಾಗುವುದಿಲ್ಲ, ಎಷ್ಟೇ ಬಲಿಷ್ಠನಾಗಿದ್ದರೂ ಮನಸಿನಲ್ಲಿ ಗರಿಕೆಯ ಸೌಮ್ಯತೆ ಇರಲಿ, ತಲೆ ಬಾಗುವ ವಿನಯವಿರಲಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತಾನು ಮಾಡುವುದು ಉತ್ತಮ, ಮಗ ಮಾಡುವುದು ಮಧ್ಯಮ, ಆಳು ಮಾಡುವುದು ಹಾಳು.

ನಿಮ್ಮ ಪತ್ರಗಳು

ಹದಗೆಟ್ಟ ರಸ್ತೆ ರಿಪೇರಿ ಮಾಡಿ



ಮಾನ್ಯರೇ,

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಮೈಸೂರು–ಕೆಆರ್ ಪೇಟೆ ಹಾಗೂ ಮೈಸೂರು–ನಾಗ ಮಂಗಲ ಹೆದ್ದಾರಿಯ ರಸ್ತೆ ಗಳು ಹಳ್ಳ–ಕೊಳ್ಳಗಳಿಂದ ಕೂಡಿದ್ದು ಸಂಚಾರಕ್ಕೆ ತುಂಬಾ ತೊಂದರೆಯಾಗಿದೆ. ಈ ಹೆದ್ದಾರಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳ ಸಂಚಾರವಿದ್ದು, ಈ ದಾರಿಯಲ್ಲಿ ಪಾಂಡವಪುರದ ಸಕ್ಕರೆ ಕಾರ್ಖಾನೆ ಇರುವುದರಿಂದ ಕಬ್ಬಿನ ಲಾರಿಗಳು ಟ್ರಾಕ್ಟರ್ ಹಾಗೂ ಎತ್ತಿನಗಾಡಿಗಳ ಸಂಚಾರ ಹೆಚ್ಚಾಗಿದೆ. ರಸ್ತೆಯ ಅವ್ಯವಸ್ಥೆಯಿಂದ ಬೈಕ್ ಅಪಘಾತ ಹಾಗೂ ಕಾರಿನ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತಿದ್ದು ಕನಿಷ್ಠ ವಾರಕ್ಕೆ ಎರಡು ಅಪಘಾತಗಳು ಸಂಭವಿಸುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಆದಷ್ಟು ಬೇಗ ಈ ದುರಸ್ತಿ ರಸ್ತೆಗಳನ್ನು ಸರಿಪಡಿಸಿ ಅಪಘಾತ ತಪ್ಪಿಸಬೇಕಾಗಿದೆ.

– ನಚಿಕೇತನ್. ಎನ್, ಮಹಾರಾಜ ಕಾಲೇಜು, ಮೈಸೂರು.

ಅಗತ್ಯ ವಸ್ತುಗಳಿಗೆ ತೆರಿಗೆ ಬೇಡ

ಮಾನ್ಯರೆ,

ಹಾಲಿನ ಉತ್ಪನ್ನಗಳಾದ ಮೊಸರು, ಮಜ್ಜಿಗೆ ಸೇರಿದಂತೆ, ಮೀನು, ಮಾಂಸ, ಅಕ್ಕಿ, ಗೋದಿ, ಬೆಲ್ಲ, ತರಕಾರಿ, ಬಟಾಣಿ ಮುಂತಾದ ಅಹಾರ ಪದಾರ್ಥಗಳ ಮೇಲೆ ಜುಲೈ 18 ರಿಂದ ಶೇಕಡಾ 5 ರಷ್ಟು ಜಿಎಸ್‌ಟಿ ವಿಧಿಸಿರುವುದು ತೀರಾ ಖಂಡನಾರ್ಹವಾಗಿದೆ.

ಹಾಲಿನ ಉತ್ಪನ್ನಗಳ ಮೇಲೆ ಇದೇ ಮೊದಲ ಬಾರಿಗೆ ಜಿಎಸ್‌ಟಿ ವಿಧಿಸಲಾಗಿದ್ದು, ಬೆಲೆ ಏರಿಕೆ ಮತ್ತು ಕೊವಿಡ್ ಸೋಂಕಿನ ಅವಾಂತರದಿಂದ ಈಗಾಗಲೇ ನಲುಗಿರುವ ಬಡ ಜನತೆಯ ಮೇಲೆ ಇದು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸಿದಂತಾಗಿದ್ದು, ಕೇಂದ್ರ ಸರ್ಕಾರ ಈ ಕೂಡಲೇ ಇದನ್ನು ಹಿಂದಕ್ಕೆ ಪಡೆಯಬೇಕಾಗಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದಿದ್ದ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಡಬ್ಬಿ, ಅಥವಾ ಪ್ಯಾಕ್ ಮತ್ತು ಲೇಬಲ್ ಮಾಡಿದ ಆಹಾರ ಪದಾರ್ಥಗಳ ಮೇಲೆ ಜಿಎಸ್‌ಟಿ ವಿಧಿಸುವ ಬಗ್ಗೆ ನಿರ್ಧರಿಸಲಾಗಿತ್ತು ಎಂದು ಸರ್ಕಾರಿ ಮೂಲಗಳು ತಿಳಿಸಿವೆ. ಆದರೆ ಇಂತಹ ನಿರ್ಧಾರ ಸಾಮಾನ್ಯ ಜನತೆಯ ಮೇಲೆ ಹಾಗೂ ಗ್ರಾಹಕರ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಕೇಂದ್ರ ಸರ್ಕಾರ ಈ ಕೂಡಲೇ ತನ್ನ ನಿರ್ಧಾರವನ್ನು ಪುನರ್ ಪರಿಶೀಲಿಸಿ, ಕನಿಷ್ಠಪಕ್ಷ ಹಾಲಿನ ಉತ್ಪನ್ನಗಳಿಗಾದರೂ ತೆರಿಗೆ ವಿನಾಯಿತಿ ನೀಡಲಿ.

– ಡಾ. ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಪ್ಲೀಸ್ ಪಾರ್ಕಿಗೆ ಶುಲ್ಕ ವಿಧಿಸಬೇಡಿ

ಮಾನ್ಯರೆ,

ಉದ್ಯಾನವನಗಳಿಗೆ ಪ್ರವೇಶ ಶುಲ್ಕವನ್ನು ವಿಧಿಸುವ ವಿಷಯ ಕೇಳಿ ಬೇಜಾರಾಯಿತು. ಇದು ಸರಿಯಾದ ಕ್ರಮವಲ್ಲ. ಮಕ್ಕಳು ಪ್ರತಿನಿತ್ಯ ಓದಿ ಬರೆದು ಬೇಜಾರಾದರೆ ಸಮೀಪದಲ್ಲಿರುವ ಹಲವಾರು ಪಾರ್ಕುಗಳಿಗೆ ಹೋಗುತ್ತೇವೆ. ಸ್ನೇಹಿತರೊಂದಿಗೆ ಆಟವಾಡುತ್ತೇವೆ. ಇದರಿಂದ ಹಲವಾರು ಸ್ನೇಹಿತರು ಪರಿಚಯ



ಆಗುತ್ತದೆ. ಅಲ್ಲಿ ನಾವು ಶಾಲೆ, ಪುಸ್ತಕ, ಹಾಗೂ ಟ್ಯೂಷನ್ ಬಗ್ಗೆ ಚರ್ಚೆ ಮಾಡುತ್ತೇವೆ ಪಾರ್ಕ್ ನಲ್ಲಿ ಯೋಗ ಮಾಡಿ, ಹಾಡು ಹೇಳಿ ಸಂತೋಷದಿಂದ ಕಾಲ ಕಳೆಯುತ್ತೇವೆ. ಹಲವಾರು ವಿಷಯದ ಬಗ್ಗೆ ತಿಳುವಳಿಕೆ ಮೂಡುತ್ತದೆ. ನಮಗೆ ಅನುಕೂಲವಾಗುತ್ತದೆ.

ಪಾರ್ಕುಗಳಲ್ಲಿ ಕೆಲವು ಬಾರಿ ಚಿತ್ರ ಬರೆಯುವ ಸ್ಪರ್ಧೆಯನ್ನು ಆಯೋಜಿಸಿರುತ್ತಾರೆ. ಉಚಿತವಾಗಿರುವುದರಿಂದ ನಾವೆಲ್ಲ ಹೋಗಿ ಭಾಗವಹಿಸುತ್ತೇವೆ. ಇದರಿಂದ ಎಲ್ಲರಿಗೂ ಅನುಕೂಲವಾಗಿದೆ. ಆದರೆ ಪಾರ್ಕ್‌ಗೆ ಪ್ರವೇಶ ಶುಲ್ಕ ವಿಧಿಸಿದರೆ ನಮ್ಮ ತಿಂಗಳ ಪಾಕೆಟ್ ಮನಿ ಖಾಲಿಯಾಗುತ್ತದೆ. ಇದರಿಂದ ನಮಗೆ ತುಂಬಾ ಬೇಜಾರಾಗುತ್ತದೆ. ಆದ್ದರಿಂದ ಎಂದಿನಂತೆ ಪಾರ್ಕ್‌ನಲ್ಲಿ ಶುಲ್ಕ ಬೇಡ ಪ್ರವೇಶ ಉಚಿತವಾಗಿರಲಿ. ಇದರಿಂದ ಎಲ್ಲಾ ಮಕ್ಕಳಿಗೂ ಸಂತೋಷವಾಗುತ್ತದೆ. ಪಾರ್ಕ್‌ಗಳಿಗೆ ಹೋಗಿ ಎಲ್ಲರೊಂದಿಗೆ ಸೇರಿ ಆಟವನ್ನು ಆಡಿ ಸಂತೋಷದಿಂದ ನಲಿಯುತ್ತೇವೆ.

– ಎಂ.ಎಸ್.ಇಂಚರದತ್, ಬ್ಯಾಂಕ್ ಕಾಲೋನಿ, ಮೈಸೂರು

ಹಳಕಟ್ಟಿ ಪ್ರಶಸ್ತಿ

ಮಾನ್ಯರೆ,

'ವಚನ ಪಿತಾಮಹ' ಫ.ಗು. ಹಳಕಟ್ಟಿಯವರ ಜನ್ಮ ದಿನದ ಆಚರಣೆಗೆ ಸಂಬಂಧಿಸಿದಂತೆ ಈ ಪತ್ರ.

ಒಂದು ವಿಷಯ ಮರೆತೇ ಹೋಗಿತ್ತು. (ಮರೆತರೆ ಮಾನವ. ನನಗೀಗ ಮಹಾಮರವೆ!) : ನಾನು 'ಹಳಕಟ್ಟಿ ಪ್ರಶಸ್ತಿ' ಪುರಸ್ಕೃತ. (ನನ್ನ ವಚನ ಸಾಹಿತ್ಯ ಸಂಬಂಧಿ ಕೆಲಸಕ್ಕೆ ಇತರ ಪುರಸ್ಕಾರಗಳೂ ಸಂದಿವೆ) ಆ ಪುಣ್ಯ ಶ್ಲೋಕರಿಗೆ ನಮನ.

– ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.



ಕಾರ್ಕಳ ಅನಂದಭಟ್
ಮೊ.7676554198

ದಿಕ್ಕುದೆಸೆ

ತಂಬಾಕಿನ ವ್ಯಸನ ಅನಾರೋಗ್ಯಕ್ಕೆ ಆಹ್ವಾನ

ತಂಬಾಕು ಸೇವನೆಯಿಂದ ಮನುಷ್ಯನ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮ ಹಾಗೂ ಬರುವ ಕಾಯಿಲೆಗಳ ಬಗ್ಗೆ ಅರಿವು ಮೂಡಿಸಲು 1987 ರಿಂದ ವಿಶ್ವ ಆರೋಗ್ಯ ಸಂಸ್ಥೆಯು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಈ ವರ್ಷ 'ಪರಿಸರ ರಕ್ಷಿಸೋಣ' ಎಂಬ ವಿಶೇಷ ಸಂದೇಶದ ಮೂಲಕ ತಂಬಾಕು ಪರ್ಯಾವರಣವನ್ನು ಯಾವ ರೀತಿ ವಿಷಯುಕ್ತಗೊಳಿಸುತ್ತಿದೆ ಎಂಬ ಬಗ್ಗೆ ಗಮನ ಸೆಳೆದಿದೆ. ತಂಬಾಕಿನ ವ್ಯವಸಾಯದಿಂದ ಉಪಯೋಗಿಸುವ ಹಂತದ ವರೆಗೆ ಆಗುತ್ತಿರುವ ಅಪಾಯಗಳ ಸಮಗ್ರ ಮಾಹಿತಿ ನೀಡಿದೆ. ಪ್ರತಿ ವರ್ಷ ಜಾಗತಿಕವಾಗಿ ಸಿಗರೇಟ್ ಹಾಗೂ ತಂಬಾಕಿನ ಇತರ ಉತ್ಪನ್ನಗಳ ತಯಾರಿಕೆಗೆ 600 ಮಿಲಿಯನ್ ಮರಗಳನ್ನು ಕಡಿಯಲಾಗುತ್ತಿದೆ. ಪ್ರತಿ ಹದಿನೈದು ಪ್ಯಾಕ್ ಸಿಗರೇಟ್ ತಯಾರಿಕೆಗೆ ಒಂದು ಮರ ಸಾಯುತ್ತಿದೆ. ಎಂಭತ್ತನಾಲ್ಕು ಮೆಗಾಟನ್‌ನಷ್ಟು ಕಾರ್ಬನ್ ಆಕ್ಸೈಡ್ ವಾತಾವರಣಕ್ಕೆ ಸೇರುವುದರಿಂದ ಜಾಗತಿಕ ತಾಪಮಾನ ಹೆಚ್ಚುತ್ತಿದೆ. ತಂಬಾಕಿನ ವ್ಯವಸಾಯಕ್ಕಾಗಿಯೂ ಮರಗಳು ಬಲಿಯಾಗುತ್ತಿವೆ. ತಂಬಾಕು ಮನುಕುಲ ಮಾತ್ರವಲ್ಲ, ಭೂಮಿಯನ್ನೂ ನಾಶಪಡಿಸುತ್ತಿದೆ. ಕೇವಲ 20ನೇ ಶತಮಾನ ಒಂದರಲ್ಲೇ ತಂಬಾಕಿನಿಂದ 100 ಮಿಲಿಯನ್ ಜನರು ಸಾವಿಗೀಡಾಗಿದ್ದಾರೆ. ಜಗತ್ತಿನಲ್ಲಿ ಪ್ರತಿ ವರ್ಷ ಸುಮಾರು 8 ಮಿಲಿಯನ್ ಜನರು ತಂಬಾಕಿನಿಂದಾಗಿ ಸಾಯುತ್ತಿದ್ದಾರೆ. ಇದರಲ್ಲಿ 1.2 ಮಿಲಿಯನ್ ಜನರು ತಂಬಾಕಿನ ಪರೋಕ್ಷ/ಛಾಯಾ (Passive Smoking) ಸೇವನೆಯಿಂದ ಸಾಯುತ್ತಿದ್ದಾರೆ. ತಂಬಾಕಿನಲ್ಲಿ ಸುಮಾರು ನಾಲ್ಕು ಸಾವಿರ ಅಪಾಯಕಾರಿ ರಾಸಾಯನಿಕಗಳಿದ್ದು, ಇವುಗಳಲ್ಲಿ ಅರ್ವತ್ತಮೂರು ಅನಿಲಗಳು ಕ್ಯಾನ್ಸರ್‌ಕಾರಕಗಳಾಗಿವೆ. ತಂಬಾಕಿನಲ್ಲಿರುವ ನಿಕೋಟಿನ್ ಎಂಬ ವಿಷಕಾರಿ ರಾಸಾಯನಿಕ ಅನಿಲ ಕೇವಲ ಆರು ಸೆಕೆಂಡ್‌ಗಳಲ್ಲಿ ಮೆದುಳನ್ನು ತಲುಪುವುದು Smoking thrills but it also kills ಎನ್ನುವಂತೆ ಧೂಮಪಾನವು ಹೃದ್ರೋಗ, ಕ್ಯಾನ್ಸರ್ ನಿದ್ರಾಹೀನತೆ, ತೂಕ ನಷ್ಟ ನಪುಂಸಕತ್ವ, ಮೆದುಳು ಸಂಬಂಧಿ ಕಾಯಿಲೆಗಳಿಗೆ ಆಹ್ವಾನ ನೀಡುವ ದುರಭ್ಯಾಸವಾಗಿದೆ.



> ತಂಬಾಕು ಮನುಕುಲ ಮಾತ್ರವಲ್ಲ, ಭೂಮಿಯನ್ನೂ ನಾಶಪಡಿಸುತ್ತಿದೆ. ಕೇವಲ 20ನೇ ಶತಮಾನ ಒಂದರಲ್ಲೇ ತಂಬಾಕಿನಿಂದ 100 ಮಿಲಿಯನ್ ಜನರು ಸಾವಿಗೀಡಾಗಿದ್ದಾರೆ. ಜಗತ್ತಿನಲ್ಲಿ ಪ್ರತಿ ವರ್ಷ ಸುಮಾರು 8 ಮಿಲಿಯನ್ ಜನರು ತಂಬಾಕಿನಿಂದಾಗಿ ಸಾಯುತ್ತಿದ್ದಾರೆ. ಇದರಲ್ಲಿ 1.2 ಮಿಲಿಯನ್ ಜನರು ತಂಬಾಕಿನ ಪರೋಕ್ಷ/ಛಾಯಾ (Passive Smoking) ಸೇವನೆಯಿಂದ ಸಾಯುತ್ತಿದ್ದಾರೆ. ತಂಬಾಕಿನಲ್ಲಿ ಸುಮಾರು ನಾಲ್ಕು ಸಾವಿರ ಅಪಾಯಕಾರಿ ರಾಸಾಯನಿಕಗಳಿದ್ದು, ಇವುಗಳಲ್ಲಿ ಅರ್ವತ್ತಮೂರು ಅನಿಲಗಳು ಕ್ಯಾನ್ಸರ್‌ಕಾರಕಗಳಾಗಿವೆ. ತಂಬಾಕಿನಲ್ಲಿರುವ ನಿಕೋಟಿನ್ ಎಂಬ ವಿಷಕಾರಿ ರಾಸಾಯನಿಕ ಅನಿಲ ಕೇವಲ ಆರು ಸೆಕೆಂಡ್‌ಗಳಲ್ಲಿ ಮೆದುಳನ್ನು ತಲುಪುವುದು

2021ರಲ್ಲಿ ಜಾಗತಿಕ ಮಟ್ಟದಲ್ಲಿ ಶೇ.22.5ರಷ್ಟು ಜನರು ತಂಬಾಕನ್ನು ಉಪಯೋಗಿಸಿದ್ದಾರೆ. ಎಲ್ಲ ಮಾದರಿಯ ತಂಬಾಕನ್ನು ಉಪಯೋಗಿಸುವುದು ಅಪಾಯಕಾರಿಯಾಗಿದೆ. ಸಿಗರೇಟ್‌ಗಳು ಸುಂದರ ಪ್ಯಾಕ್‌ಗಳಲ್ಲಿ ಸಂಚರಿಸುವ ನಿಗೂಢ ಹಂತಕರೆಂದು (Cigarettes are silent killers travelling in beautiful pack) ಗೊತ್ತಿದ್ದರೂ ಇದು ವಿಶ್ವಾದ್ಯಂತ ತಂಬಾಕು ಸೇವನೆಯ ಸಾಮಾನ್ಯ ಮಾಧ್ಯಮವಾಗಿದೆ. ಇತರ ಮಾದರಿಯಲ್ಲಿ ವಾಟರ್ ಪೈಪ್ ತಂಬಾಕು, ಹೊಗೆ ರಹಿತ ತಂಬಾಕು, ಪೈಪ್ ತಂಬಾಕು, ಬೀಡಿಗಳು ಸೇರಿವೆ. ಜಗತ್ತಿನಲ್ಲಿ ತಂಬಾಕಿನ ಚಟವಿರುವವರಲ್ಲಿ ಶೇ.80ರಷ್ಟು ಜನರು ಮಧ್ಯಮ ಹಾಗೂ ಕಡಿಮೆ ಆದಾಯವಿರುವವರಾಗಿದ್ದಾರೆ. ಇವರು ತಂಬಾಕಿನ ಚಟಕ್ಕಾಗಿ ಮನೆ ಖರ್ಚಿನ ಹಣವನ್ನು ಉಪಯೋಗಿಸಿ ಬಡತನ ಆಹ್ವಾನಿಸುತ್ತಿದ್ದಾರೆ. ಇವರಲ್ಲಿ ತಂಬಾಕಿನ ವ್ಯಸನದಿಂದಾಗಿ ಕಾಯಿಲೆಗಳು, ಮರಣಗಳು, ಆರ್ಥಿಕ ಹೊರೆ ಅಧಿಕವಾಗಿದೆ.

ಭಾರತದಲ್ಲಿ ಸುಮಾರು 267 ಮಿಲಿಯನ್ ತಂಬಾಕು ವ್ಯಸನಿಗಳಿದ್ದಾರೆ. ದೇಶದಲ್ಲಿ ಹದಿನೈದು ವರ್ಷ ಮೇಲ್ಪಟ್ಟ ವಯಸ್ಕರಲ್ಲಿ ಶೇ.28.6ರಷ್ಟು ಜನರು ತಂಬಾಕು ಉಪಯೋಗಿಸುತ್ತಾರೆ. ಶೇ.21.4 ಹೊಗೆರಹಿತ ತಂಬಾಕು ಉಪಯೋಗಿಸುತ್ತಿದ್ದಾರೆ. ವಯಸ್ಕರಲ್ಲಿ ಹೆಚ್ಚಿನವರು ಬೀಡಿ ಸೇದುತ್ತಾರೆ. ಶೇ.8.5ರಷ್ಟು ಒಂದಲ್ಲಾ ಒಂದು ರೀತಿಯ ತಂಬಾಕು ಸೇವನೆ ಮಾಡುತ್ತಾರೆ. ಒಳಾಂಗಣದಲ್ಲಿ ಕೆಲಸ ಮಾಡುವ ಕಾರ್ಮಿಕರಲ್ಲಿ ಶೇ.30ರಷ್ಟು ಪರೋಕ್ಷ (Passive) ಧೂಮಪಾನ ಮಾಡುತ್ತಾರೆ. ಶೇ.7.4 ಹೋಟೆಲ್‌ಗಳಲ್ಲಿ ಶೇ.13.3, ಸಾರ್ವಜನಿಕ ಸಾರಿಗೆಗಳಲ್ಲಿ ಶೇ.21, ಯುವ ಜನರು ಸಾರ್ವಜನಿಕ ಸ್ಥಳಗಳಲ್ಲಿ ಶೇ.11ರಷ್ಟು, ಮನೆಗಳಲ್ಲಿ ಪರೋಕ್ಷ ಧೂಮಪಾನ ಮಾಡುತ್ತಾರೆ. ಜಾಗತಿಕವಾಗಿ ಹೊಗೆರಹಿತ ತಂಬಾಕು ವ್ಯಸನಿಗಳಲ್ಲಿ ಶೇ.70ರಷ್ಟು ಜನರು ಭಾರತದಲ್ಲಿದ್ದಾರೆ. ಹೊಗೆ ರಹಿತ ತಂಬಾಕು ಸೇವನೆಯಿಂದ ಭಾರತದಲ್ಲಿ ಪ್ರತಿ ವರ್ಷ 2.30 ಲಕ್ಷ ಜನರು ಸಾವಿಗೀಡಾಗುತ್ತಿದ್ದಾರೆ. ದೇಶದಲ್ಲಿ ಶೇ.90ರಷ್ಟು ಬಾಯಿ ಕ್ಯಾನ್ಸರ್ ಧೂಮರಹಿತ ತಂಬಾಕಿನಿಂದ ಬರುತ್ತಿದೆ. ದೇಶದಲ್ಲಿನ ಕ್ಯಾನ್ಸರ್ ರೋಗಿಗಳಲ್ಲಿ ಶೇ.27ರಷ್ಟು ತಂಬಾಕು ಸೇವನೆ ಚಟದವರಾಗಿದ್ದಾರೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2019–20ರ ವರದಿಯಂತೆ ವಯಸ್ಕರಲ್ಲಿ ತಂಬಾಕು ಉಪಯೋಗಿಸುವವರ ಪ್ರಮಾಣದಲ್ಲಿ ಇಳಿಕೆಯಾಗುತ್ತಿರುವುದು ಸಮಾಧಾನಕರ ಸಂಗತಿಯಾಗಿದೆ. ಆದರೆ ಸಿಕ್ಕಿಂ, ಹಿಮಾಚಲಪ್ರದೇಶ, ಗೋವಾ, ಗುಜರಾತ್, ಬಿಹಾರ ಮತ್ತು ಮಿಜೊರಾಂಗಳಲ್ಲಿ ಇದೇ ಅವಧಿಯಲ್ಲಿ ಏರಿಕೆ ದಾಖಲಾಗಿದೆ. ಪೂರ್ವೋತ್ತರ ಭಾರತದಲ್ಲಿ ವಿಶೇಷವಾಗಿ ಅಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ತಂಬಾಕಿನ ಚಟ ನಗರಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿದೆ.

ಅಮೇರಿಕದಲ್ಲಿ 2020ರಲ್ಲಿ ಹದಿನೆಂಟು ವರ್ಷ ಮೇಲ್ಪಟ್ಟ ಪ್ರತಿ ನೂರರಲ್ಲಿ ಹದಿಮೂರು ಮಂದಿ ಅಂದರೆ ಸುಮಾರು 30.8 ಮಿಲಿಯನ್ ವಯಸ್ಕರು ಸಿಗರೇಟ್ ಸೇದುತ್ತಿದ್ದಾರೆ. ಇವರಲ್ಲಿ 16 ಮಿಲಿಯನ್ ಧೂಮಪಾನ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಪ್ರತಿ ವರ್ಷ ಅಮೇರಿಕವು 225 ಬಿಲಿಯನ್ ಡಾಲರ್ ಅನ್ನು ಧೂಮಪಾನಿಗಳ ಚಿಕಿತ್ಸೆಗಾಗಿ ಖರ್ಚು ಮಾಡುತ್ತಿದೆ. ಇದೇ ರೀತಿ ಯೂರೋಪ್‌ನಲ್ಲಿ 2019ರಲ್ಲಿ ಅಲ್ಲಿನ ಒಟ್ಟು ಜನಸಂಖ್ಯೆಯ ಶೇ.18.4ರಷ್ಟು ಹದಿನೈದು ವರ್ಷ ಮೇಲ್ಪಟ್ಟವರು ಪ್ರತಿ ದಿನ ಸಿಗರೇಟ್ ಸೇದುವ ದುರಭ್ಯಾಸ ಹೊಂದಿದ್ದಾರೆ. ಜಗತ್ತಿನಲ್ಲಿ ಚೀನಾ ಅತೀ ಹೆಚ್ಚು ತಂಬಾಕು ಉತ್ಪಾದಿಸುವ ಮತ್ತು ಸೇವನೆ ಮಾಡುವವರ ದೇಶವಾಗಿದೆ. ಚೀನಾದಲ್ಲಿ ಸುಮಾರು 307.6 ಮಿಲಿಯನ್ ಧೂಮಪಾನಿಗಳಿದ್ದಾರೆ. ಜಗತ್ತಿನಲ್ಲಿ ಸಿಗರೇಟ್ ಸೇದುವ ಪ್ರತಿ ಮೂವರಲ್ಲಿ ಓರ್ವ ಚೀನಾ ದೇಶದವನಾಗಿದ್ದಾನೆ. ತಂಬಾಕು ವ್ಯಸನದಿಂದ ಚೀನಾದಲ್ಲಿ ಪ್ರತಿ ವರ್ಷ ಸುಮಾರು 2.5 ಮಿಲಿಯನ್ ಜನರು ಸಾಯುತ್ತಿದ್ದಾರೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಲಿಯ (ICMR) ವರದಿಯಂತೆ ದೇಶದ ಒಟ್ಟು ಕ್ಯಾನ್ಸರ್ ರೋಗಿಗಳಲ್ಲಿ ಶೇ.30 ತಂಬಾಕು ವ್ಯಸನಿಗಳಾಗಿದ್ದಾರೆ. ದೇಶದ ಶೇ.42 ಪುರುಷರು ಹಾಗೂ ಶೇ.18 ಮಹಿಳೆಯರು ತಂಬಾಕು ಸೇವನೆಯಿಂದಾದ ಕ್ಯಾನ್ಸರ್‌ನಿಂದ ಸಾಯುತ್ತಿದ್ದಾರೆ.

ಈ ಮೌನ ಹಂತಕನನ್ನು ನಿಯಂತ್ರಿಸಲು ಜಗತ್ತಿನ ಎಲ್ಲ ದೇಶಗಳು ತಂಬಾಕು ಸೇವನೆ ನಿಯಂತ್ರಿಸಲು ಕಠಿಣ ಕ್ರಮ ಕೈಗೊಳ್ಳುತ್ತಿದೆ. ಮಾರಾಟದ ಮೇಲೆ ನಿರ್ಬಂಧಗಳು, ಎಚ್ಚರಿಕೆ ಸಂದೇಶಗಳು, ಜಾಹೀರಾತುಗಳು, ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ, ತಂಬಾಕು ಉಪಯೋಗಿಸದಂತೆ ಕಾನೂನುಗಳನ್ನು ಜಾರಿಗೊಳಿಸಲಾಗಿದೆ. ಛಾಯಾ ಧೂಮಪಾನ ತಡೆಯಲು, ಔದ್ಯೋಗಿಕ, ಶೈಕ್ಷಣಿಕ, ನ್ಯಾಯಾಲಯಗಳ ಪ್ರದೇಶಗಳಲ್ಲಿ, ಸಿನೆಮಾ ಹಾಲ್, ಹೋಟೆಲ್, ಬಾರ್‌ಗಳಿರುವಲ್ಲಿ ತಂಬಾಕು ಸೇವಿಸದಂತೆ ನಿರ್ಬಂಧ ವಿಧಿಸಲಾಗಿದೆ. ತಂಬಾಕು ಉತ್ಪನ್ನಗಳ ಮೇಲೆ ಭಾರೀ ಮೊತ್ತದ ತೆರಿಗೆ ಹಾಕಲಾಗುತ್ತಿದೆ. ಇಂತಹ ಅನೇಕ ಕ್ರಮಗಳನ್ನು ಸರಕಾರಿ ಮಟ್ಟದಲ್ಲಿ ತೆಗೆದುಕೊಳ್ಳಲಾಗುತ್ತಿದೆ. ಈ ಎಲ್ಲ ಕ್ರಮಗಳು, ಪ್ರಯತ್ನಗಳು, ಕಾನೂನುಗಳು ಯಶಸ್ವಿಯಾಗಲು ಸಾರ್ವಜನಿಕರ ಸಹಕಾರ, ಸಹಭಾಗಿತ್ವದಿಂದ ಮಾತ್ರ ಸಾಧ್ಯ. "ನಾವು ತಂಬಾಕಿನ ವಿರುದ್ಧದ ಹೋರಾಟದಲ್ಲಿ ವಿಫಲವಾದರೆ ಕ್ಯಾನ್ಸರ್ ವಿರುದ್ಧದ ಹೋರಾಟದಲ್ಲಿ ಸೋಲುತ್ತೇವೆ".

ಉದಯಪುರ ಟೈಲರ್ ಹತ್ಯೆ: ಎನ್‌ಐಎಯಿಂದ 8ನೇ ಆರೋಪಿ ಬಂಧನ

ಜೈಪುರ, ಜು.22– ಉದಯಪುರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಧಿಕಾರಿಗಳು ಮತ್ತೋರ್ವ ಆರೋಪಿಯನ್ನು ಬಂಧಿಸಿದ್ದಾರೆ.

ಬಿಜೆಪಿ ನಾಯಕಿ ನೂಪುರ್ ಶರ್ಮಾರನ್ನು ಬೆಂಬಲಿಸಿ ಪೋಸ್ಟ್ ಹಾಕಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಉದಯ್‌ಪುರದ ಟೈಲರ್ ಕನ್ನಯ್ಯಾಲಾಲ್‌ರನ್ನು ದುಷ್ಕರ್ಮಿಗಳು ಹತ್ಯೆ ಮಾಡಿದ್ದರು. ಈ ಹತ್ಯೆಗೆ ಸಂಬಂಧಿಸಿದಂತೆ ಹತ್ಯೆ ಮಾಡಿದ ಮತ್ತು ಸಂಚು ರೂಪಿಸಿದ ಆರೋಪದ ಮೇರೆಗೆ ಈವರೆಗೂ 7 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಇದೀಗ ಪ್ರಕರಣದ 8ನೇ ಆರೋಪಿ ಬಂಧಿಸಲಾಗಿದ್ದು, ಮೊಹಮ್ಮದ್ ಜಾವೇದ್ (19) ಎಂಬಾತನನ್ನು ನಿನ್ನೆ (ಜು.21) ಬಂಧಿಸಲಾಗಿದೆ ಎಂದು ಎನ್‌ಐಎ ತಿಳಿಸಿದೆ.

19 ವರ್ಷದ ಮೊಹಮ್ಮದ್ ಜಾವೇದ್, ಕನ್ನಯ್ಯಾ ಲಾಲ್ ಹತ್ಯೆಯ ಸಂಚಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಎಂದು ತನಿಖಾ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದ್ದು, ಅವರು ಕನ್ನಯ್ಯಾ ಅಂಗಡಿಯಲ್ಲಿ ಇರುವ ಬಗ್ಗೆ ಮಾಹಿತಿಯನ್ನು ಕೊಲೆಗಾರ ರಿಯಾಜ್ ಅಟ್ಟಾರಿಗೆ ಈತನೇ ರವಾನಿಸಿದ್ದ ಎನ್ನಲಾಗಿದೆ. ಕನ್ನಯ್ಯಾ ಲಾಲ್ ಹತ್ಯೆಗೆ ಸಂಬಂಧಿಸಿದಂತೆ ತನಿಖಾ ಸಂಸ್ಥೆ ಜುಲೈ 9 ರಂದು ಎನ್‌ಐಎ ಏಳನೇ ಬಂಧನವನ್ನು ಮಾಡಿತ್ತು. ಬಂಧಿತನನ್ನು ಫರ್ಹಾದ್ ಮೊಹಮ್ಮದ್ ಶೇಖ್ ಪ್ರಮುಖ ಆರೋಪಿ ರಿಯಾಜ್ ಅತ್ತಾರಿಯ ನಿಕಟ ಸಹಚರ ಎಂದು ಹೇಳಲಾಗಿದೆ ಮತ್ತು ಈತ ಟೈಲರ್ ಹತ್ಯೆ ಮಾಡುವ ಸಂಚಿನಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದನು.

ಈತನೂ ಸೇರಿದಂತೆ ಹಂತಕರಾದ ರಿಯಾಜ್ ಅತ್ತಾರಿ ಮತ್ತು ಗೌಸ್ ಮೊಹಮ್ಮದ್ ಅವರನ್ನು ನ್ಯಾಯಾಲಯ ಆಗಸ್ಟ್ 1 ರವರೆಗೆ NIA ಕಸ್ಟಡಿಗೆ ಕಳುಹಿಸಿತ್ತು. ಇತರ ನಾಲ್ವರು ಆರೋಪಿಗಳಾದ ಮೊಹ್ಸಿನ್, ಆಸಿಫ್, ಮೊಹಮ್ಮದ್ ಮೊಹ್ಸಿನ್ ಮತ್ತು ವಾಸಿಂ ಅಲಿ ಈಗಾಗಲೇ ಆಗಸ್ಟ್ 1 ರವರೆಗೆ ನ್ಯಾಯಾಂಗ ಬಂಧನದಲ್ಲಿದ್ದಾರೆ.


ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು, ಜು.22–ಮೈಸೂರಿನ ಕುವೆಂಪುನಗರ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ಜುಲೈ 24ರಂದು ಸಂಜೆ 6.30ಕ್ಕೆ ಸಿದ್ಧ ಸಮಾಧಿ ಯೋಗ ಶಿಬಿರದ ಬಗ್ಗೆ ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಲಾಗಿದೆ. ಜು.25ರಿಂದ 14 ದಿನ ಸಿದ್ಧಿ ಸಮಾಧಿ ಯೋಗ ಶಿಬಿರ ನಡೆಯಲಿದೆ. ಹೆಚ್ಚಿನ ವಿವರಗಳಿಗಾಗಿ ಹೆಚ್.ಎಸ್. ರಮೇಶ್ ಚಂದ್ರ (9448458050) ಅಥವಾ ಪಿ.ಎ. ಮನೋಹರ ರಾವ್ (8618762110) ಅವರನ್ನು ಸಂಪರ್ಕಿಸಬಹುದು.

ಚುನಾವಣಾ ರಾಜಕೀಯದಿಂದ ಯಡಿಯೂರಪ್ಪ ನಿವೃತ್ತಿ ಸರಿ: ಎಂಎಲ್ಸಿ ವಿಶ್ವನಾಥ್ ಪ್ರತಿಕ್ರಿಯೆ

• ಆದರೆ ವಿಜಯೇಂದ್ರರನ್ನು ಶಿಕಾರಿಪುರ ಅಭ್ಯರ್ಥಿಯಾಗಿ ಘೋಷಿಸಿರುವುದಕ್ಕೆ ಆಕ್ಷೇಪ • ವಿವಿಧ ಪಕ್ಷದ ನಾಯಕರಿಂದ ಮಿಶ್ರ ಪ್ರತಿಕ್ರಿಯೆ

ಬೆಂಗಳೂರು, ಜು. 22– ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಿಸಿರುವುದು ಸರಿ. ಆದರೆ, ಅವರು ಸಕ್ರಿಯ ರಾಜಕಾರಣದಲ್ಲಿ ಮುಂದುವರಿಯಲಿದ್ದಾರೆ. ಅವರ ರಾಜಕೀಯ ಅನುಭವ ಬಿಜೆಪಿಗೆ ಮತ್ತು ರಾಜ್ಯಕ್ಕೆ ಅತ್ಯವಶ್ಯಕವಾಗಿದೆ ಎಂದು ಹೇಳಿರುವ ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್, ಶಿಕಾರಿಪುರ ಕ್ಷೇತ್ರದ ಅಭ್ಯರ್ಥಿಯಾಗಿ ಬಿ.ವೈ. ವಿಜಯೇಂದ್ರ ಅವರನ್ನು ಘೋಷಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಬೆಂಗಳೂರಿನಲ್ಲಿ ಇಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, ವಂಶ ಪಾರಂಪರ್ಯ ರಾಜಕಾರಣ ಪ್ರಜಾತಂತ್ರ ವ್ಯವಸ್ಥೆಯನ್ನು ಗೆದ್ದಲಿನಂತೆ ತಿನ್ನುತ್ತಿದೆ ಎಂದು ಪ್ರಧಾನಿ ಮೋದಿಯವರು ಹೇಳಿದ್ದಾರೆ. ಅವರ ಈ ಮಾತನ್ನು ಏಕೆ ಬಿಜೆಪಿಯ ಹಿರಿಯ ಮುಖಂಡರು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ ಎಂದು ಪ್ರಶ್ನಿಸಿದರಲ್ಲದೆ? ನಾನಾದ ಮೇಲೆ ನನ್ನ ಮಗನಿಗೆ ಅಧಿಕಾರ ಸಿಗಲಿ ಅಂದರೆ ಏನರ್ಥ? ಯಡಿಯೂರಪ್ಪನವರಿಗಾಗಿ ದುಡಿದ ಅನೇಕ ಕಾರ್ಯಕರ್ತರಿದ್ದಾರೆ. ಅವರಿಗೆ ಅವಕಾಶ ಮಾಡಿಕೊಡಬೇಕು ಎಂದರು.

ಹಿರಿಯರ ಹಾದಿಯಲ್ಲಿ: ಬಿಜೆಪಿಯ ಹಿರಿಯ ಮುಖಂಡರಾದ ಎಲ್.ಕೆ. ಅಡ್ವಾನಿ, ಮುರಳಿ ಮನೋಹರ ಜೋಷಿ ಮುಂತಾದವರು 75 ವರ್ಷದ ನಂತರ ಚುನಾವಣಾ ರಾಜಕೀಯದಿಂದ ನಿವೃತ್ತಿ ಪಡೆದು ಪಕ್ಷದ ಸಂಘಟನೆಗಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಅದೇ ಗರಡಿಯಲ್ಲಿ ಪಳಗಿರುವ ಯಡಿಯೂರಪ್ಪ ಹಿರಿಯರ ಹಾದಿಯಲ್ಲಿ ನಡೆದಿದ್ದಾರೆ ಎಂದು ಸಚಿವ ಮುರುಗೇಶ್ ನಿರಾಣಿ ತಿಳಿಸಿದರು. ಶಿಕಾರಿಪುರ ಕ್ಷೇತ್ರವನ್ನು ಮಗ ವಿಜಯೇಂದ್ರ ಅವರಿಗೆ ಬಿಟ್ಟುಕೊಟ್ಟಿರುವುದು ತಪ್ಪೇನಿಲ್ಲ ಎಂದ ಅವರು, ಕಳೆದ 10 ವರ್ಷದಿಂದ ವಿಜಯೇಂದ್ರ ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಹಲವಾರು ಜವಾಬ್ದಾರಿಗಳನ್ನು ನಿಭಾಯಿಸಿದ್ದಾರೆ. ಹೀಗಾಗಿ ಅವರಿಗೆ ಯಡಿಯೂರಪ್ಪ ಕ್ಷೇತ್ರ ಬಿಟ್ಟುಕೊಟ್ಟಿರುವುದು ತಪ್ಪೇನಲ್ಲ ಎಂದರು.

ಚುನಾವಣಾ ರಾಜಕಾರಣದಿಂದ ಹಿಂದೆ ಸರಿಯ ಬಾರದು: ಯಡಿಯೂರಪ್ಪನವರು ಚುನಾವಣಾ ರಾಜಕಾರಣದಿಂದ ಹಿಂದೆ ಸರಿಯಬಾರದು ಎಂದು ಶಾಸಕ ರೇಣುಕಾಚಾರ್ಯ ಆಗ್ರಹಿಸಿದ್ದಾರೆ. ಪಕ್ಷಕ್ಕೆ ಅವರ ಮಾರ್ಗದರ್ಶನದ ಅವಶ್ಯಕತೆ ಇದೆ. ದಕ್ಷಿಣ ಭಾರತ ದಲ್ಲಿ ಪಕ್ಷವನ್ನು ಕಟ್ಟಿ ಅಧಿಕಾರಕ್ಕೆ ತಂದ ಏಕೈಕ ನಾಯಕರಾಗಿರುವ ಯಡಿಯೂರಪ್ಪ, ರಾಜಕಾರಣದಲ್ಲಿ ಸಕ್ರಿಯವಾಗಿ ರಬೇಕು. ಚುನಾವಣೆಯಲ್ಲೂ ಸ್ಪರ್ಧಿಸಬೇಕು ಎಂದ ಅವರು, ಯಡಿಯೂರಪ್ಪ ಪುತ್ರ, ವಿಜಯೇಂದ್ರ ಸ್ಪರ್ಧಿಸುವ ಬಗ್ಗೆ ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ ಎಂದರು.

ನಿವೃತ್ತರಾಗುವ ವಯಸ್ಸಾಗಿಲ್ಲ: ಚುನಾವಣಾ ರಾಜಕಾರಣದಿಂದ ನಿವೃತ್ತರಾಗುವಂತಹ ವಯಸ್ಸು ಯಡಿಯೂರಪ್ಪನವರಿಗೆ ಆಗಿಲ್ಲ. ಅವರು ರಾಜಕೀಯದಲ್ಲಿ ಮುಂದುವರೆದು, ಅವರ ಅನುಭವದ ಮಾರ್ಗದರ್ಶನವನ್ನು ಎಲ್ಲರಿಗೂ ನೀಡಬೇಕು. ಯಡಿಯೂರಪ್ಪ ರಾಜ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಹೇಳಿದರು.

ಬಿಎಸ್‌ವೈ ಮಕ್ಕಳೂ ಪ್ರಭಾವಶಾಲಿಗಳು: ಯಡಿಯೂರಪ್ಪನವರ ಪುತ್ರರೂ ಕೂಡ ರಾಜಕಾರಣದಲ್ಲಿ ಪ್ರಭಾವಶಾಲಿಗಳಾಗಿದ್ದಾರೆ. ವಿಜಯೇಂದ್ರ ಅವರನ್ನು ಸ್ಪರ್ಧಿಸುವಂತೆ ಹಲವಾರು ಕ್ಷೇತ್ರಗಳ ಕಾರ್ಯಕರ್ತರು ಒತ್ತಾಯ ಮಾಡುತ್ತಿದ್ದರು. ಯಾವುದೇ ಕ್ಷೇತ್ರದಲ್ಲೂ ಸ್ಪರ್ಧಿಸುವಷ್ಟು ಪ್ರಭಾವವೂ ಅವರಿಗಿದೆ. ಆದರೆ, ಮಗ ಬೇರೆ ಕ್ಷೇತ್ರದಲ್ಲಿ ಸ್ಪರ್ಧಿಸಿದರೆ, ಅಲ್ಲಿ ಪಕ್ಷ ಕಟ್ಟಿದ ಕಾರ್ಯಕರ್ತರಿಗೆ ಸಮಸ್ಯೆಯಾಗಬಾರದು ಎಂಬ ದೃಷ್ಟಿಯಿಂದ ಯಡಿಯೂರಪ್ಪ, ಶಿಕಾರಿಪುರವನ್ನು ಮಗನಿಗೆ ಬಿಟ್ಟುಕೊಟ್ಟಿರಬಹುದು. ಇದಕ್ಕಾಗಿ ಅವರನ್ನು ಅವರ ಪಕ್ಷದ ಕಾರ್ಯಕರ್ತರು ಮೆಚ್ಚಬಹುದು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಬಿಎಸ್‌ವೈಗೆ ಇನ್ನೂ ರಾಜಕೀಯ ಶಕ್ತಿಯಿದೆ ಯಡಿಯೂರಪ್ಪನವರಿಗೆ ಇನ್ನೂ ರಾಜಕೀಯ ಶಕ್ತಿ ಇದೆ. ಹೀಗಾಗಿ ಅವರು ಚುನಾವಣಾ ರಾಜಕಾರಣದಿಂದ ನಿವೃತ್ತಿಯಾಗಬಾರದು ಎಂದಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜಕೀಯವಾಗಿ ಶಕ್ತಿವಂತರಾಗಿರುವ ಅವರನ್ನು ಬಿಜೆಪಿಯವರು ಅಧಿಕಾರದಿಂದ ಇಳಿಸಿದರು. ಅವರ ನಾಯಕತ್ವದಿಂದಲೇ ಬಿಜೆಪಿ 106 ಸ್ಥಾನಗಳನ್ನು ಗೆದ್ದಿತ್ತು. ಅವರ ಹೆಸರು ಬಳಸಿಕೊಂಡೇ ಆಪರೇಷನ್ ಕಮಲ ಮಾಡಿ ಬಿಜೆಪಿ ಅಧಿಕಾರಕ್ಕೆ ಬಂತು. ಕೊನೆಗೆ ಬಿಜೆಪಿಯವರು ಯಡಿಯೂರಪ್ಪ ಮತ್ತು ಅವರ ಆಪ್ತರಿಗೆ ಕಿರುಕುಳ ನೀಡಿದರು. ಸಿದ್ಧಾಂತದ ಮೇಲೆ ನಂಬಿಕೆ ಇಟ್ಟುಕೊಂಡು ಕೆಲಸ ಮಾಡುವವರಿಗೆ ಆಗುವಂತಹ ನೋವನ್ನು ಯಡಿಯೂರಪ್ಪ ಅನುಭವಿಸುತ್ತಿದ್ದಾರೆ. ಅವರು ಹೇಳಿಕೊಳ್ಳದಿದ್ದರೂ, ನೋವಿನಿಂದ ಮಾನಸಿಕ ವಾಗಿ ಕುಗ್ಗಿದ್ದಾರೆ. ಆದರೂ ಅವರು ಪಕ್ಷದ ಬಗ್ಗೆ ಅಭಿಮಾನ ದಿಂದ ಮಾತನಾಡಿದ್ದಾರೆ ಎಂದಿರುವ ಡಿಕೆಶಿ, ವಿಜಯೇಂದ್ರಸ್ಪರ್ಧೆ ಅವರ ಪಕ್ಷಕ್ಕೆ ಸೇರಿದ ವಿಷಯ ಎಂದರು.

ರಾಜ್ಯ ಸುತ್ತಿ ಸಂಘಟನೆ ಮಾಡಲು ಬಿಎಸ್‌ವೈಗೆ ಹೆಚ್ಚು ಸಮಯ ಸಿಗುತ್ತೆ

ಬೆಂಗಳೂರು: ಚುನಾವಣಾ ರಾಜಕಾರಣದಿಂದ ನಿವೃತ್ತಿ ಘೋಷಿಸಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ನಿರ್ಧಾರದಿಂದ ಅವರಿಗೆ ರಾಜ್ಯ ಸುತ್ತಿ ಪಕ್ಷ ಸಂಘಟಿಸಲು ಹೆಚ್ಚು ಸಮಯ ಸಿಗುತ್ತದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.



ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಯಸ್ಸಿನ ಕಾರಣ ಅಥವಾ ಬೇರೆ ಕಾರಣಕ್ಕಾಗಿ ಯಡಿಯೂರಪ್ಪ ಅವರು ಚುನಾವಣಾ ರಾಜಕಾರಣದಿಂದ ಹಿಂದೆ ಸರಿದಿರುವುದಾಗಿ ಹೇಳಿರಬಹುದು. ಈ ಬಗ್ಗೆ ಸಂಘಟನೆಯವರು ಅವರ ಜತೆ ಮಾತನಾಡುತ್ತಾರೆ. ಬಿಎಸ್‌ವೈ ಚುನಾವಣಾ ರಂಗದಿಂದ ಹಿಂದೆ ಸರಿದಿದ್ದಾರೆ ಎಂದ ಕೂಡಲೇ ರಾಜಕೀಯ ರಂಗದಿಂದ ಹಿಂದೆ ಸರಿದಿದ್ದಾರೆ ಎನ್ನಲು ಆಗದು ಎಂದರು. ಅವರ ಈ ನಿರ್ಧಾರದಿಂದ ರಾಜ್ಯ ಸುತ್ತಲು ಹೆಚ್ಚು ಸಮಯ ಅವರಿಗೆ ಸಿಗುತ್ತದೆ. ಯಡಿಯೂರಪ್ಪ ಸಕ್ರಿಯವಾಗಿ ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. 150 ಪ್ಲಸ್ ಸ್ಥಾನ ಬರಲು ಸ್ಟ್ರಾಟಜಿ ಚರ್ಚೆಯಲ್ಲೂ ಸಕ್ರಿಯವಾಗಿ ಭಾಗಿಯಾಗಿದ್ದರು. ಶಿಕಾರಿಪುರದಲ್ಲಿ ಸ್ಪರ್ಧೆ ಮಾಡಲ್ಲ ಅಂದರೆ ರಾಜಕೀಯ ರಂಗದಿಂದ ಹಿಂದೆ ಸರಿದಿದ್ದಾರೆ ಎಂದಲ್ಲ ಎಂದು ಸ್ಪಷ್ಟಪಡಿಸಿದರು. ಬಿಎಸ್‌ವೈ ಅವರನ್ನು ಪಕ್ಷದಲ್ಲಿ ಸೈಡ್ ಲೈನ್ ಮಾಡಲಾಗಿದೆ ಎಂಬ ಆರೋಪ ವಿಚಾರವಾಗಿ ಮಾತನಾಡಿ, ಪಕ್ಷದಲ್ಲಿ ಅವರನ್ನು ಸೈಡ್ ಲೈನ್ ಮಾಡಿಲ್ಲಎಲ್ಲವೂ ಯಡಿಯೂರಪ್ಪ ಅವರ ಮಾರ್ಗದರ್ಶನದಲ್ಲಿ ನಡೆಯುತ್ತಿದೆ ಎಂದು ಹೇಳಿದರು. ಬಿ.ವೈ. ವಿಜಯೇಂದ್ರ ಅವರಿಗೆ ಸೂಕ್ತ ಸ್ಥಾನಮಾನ ನೀಡಲು ಇದು ಸೂಕ್ತ ಕಾಲವೇ ಎಂಬ ವಿಚಾರವಾಗಿ, ಈ ಬಗ್ಗೆ ನನಗೆ ಗೊತ್ತಿಲ್ಲ, ಸಂಘಟನೆ ತೀರ್ಮಾನ ಮಾಡುತ್ತದೆ ಎಂದು ಗೃಹ ಸಚಿವರು ಹೇಳಿದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಶುಕ್ರವಾರ	124.68 ಅಡಿ
ಒಳಹರಿವು	20864 ಕ್ಯೂಸೆಕ್
ಹೊರಹರಿವು	19708 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಶುಕ್ರವಾರ	2284.00 ಅಡಿ
ಒಳ ಹರಿವು	16048 ಕ್ಯೂಸೆಕ್
ಹೊರ ಹರಿವು	15000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶುಕ್ರವಾರ	2856 ಅಡಿ
ಒಳ ಹರಿವು	4450 ಕ್ಯೂಸೆಕ್
ಹೊರ ಹರಿವು	2800 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಶುಕ್ರವಾರ	2921.05 ಅಡಿ
ಒಳ ಹರಿವು	8152 ಕ್ಯೂಸೆಕ್
ಹೊರ ಹರಿವು	1950 ಕ್ಯೂಸೆಕ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಆಗಸ್ಟ್ ವೇಳೆಗೆ ಮೈಷುಗರ್ ಆರಂಭವಾಗದಿದ್ದರೆ ಹೋರಾಟ

ಮಂಡ್ಯ,ಜು.22– ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಆಗಸ್ಟ್ ವೇಳೆಗೆ ಆರಂಭಿಸದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ರೈತ ಮುಖಂಡ ಇಂಡುವಾಳು ಬಸವರಾಜು ರಾಜ್ಯ ಸರ್ಕಾರವನ್ನು ಎಚ್ಚರಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಜೂನ್, ಜುಲೈ, ಆಗಸ್ಟ್ ಅಂತ ಮುಂದೆ ತಳ್ಳುತ್ತಿದೆ. ಇದರಿಂದ ರೈತರ ಕಬ್ಬು ಒಣಗುತ್ತಿದ್ದು, ಅರ್ಧ ಬೆಲೆಗೆ ಆಲೆಮನೆ ಮಾಲೀಕರು ಕೇಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಆಗಸ್ಟ್ ವೇಳೆಗೆ ಕಾರ್ಖಾನೆ ಆರಂಭವಾಗದಿದ್ದರೆ ಕಾರ್ಖಾನೆ ಬಳಿಯೇ ಉಗ್ರ ಹೋರಾಟ ನಡೆಸುವುದಾಗಿ ರಾಜ್ಯ ಸರ್ಕಾರವನ್ನು ಎಚ್ಚರಿಸಿದ್ದಾರೆ.

ಅಂಬೇಡ್ಕರ್‌ವಾದಿ ಶಿವಲಿಂಗಯ್ಯ ನುಡಿನಮನ ಕಾರ್ಯಕ್ರಮ

ಮಂಡ್ಯ,ಜು.22– ಅಂಬೇಡ್ಕರ್‌ವಾದಿ ಹಾಗೂ ನಿವೃತ್ತ ಇಂಜಿನಿಯರ್ ಡಾ.ಎಲ್. ಶಿವಲಿಂಗಯ್ಯ ಅವರ ನುಡಿನಮನ ಕಾರ್ಯಕ್ರಮವನ್ನು ಇದೇ ಜುಲೈ 24ರಂದು ಮಂಡ್ಯದ ಅಂಬೇಡ್ಕರ್ ಭವನದಲ್ಲಿ ಬೆಳಿಗ್ಗೆ 10.30ಕ್ಕೆ ಏರ್ಪಡಿಸಲಾಗಿದೆ ಎಂದು ಅಭಿಮಾನಿ ಬಳಗದ ಚಂದ್ರಶೇಖರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವಲಿಂಗಯ್ಯ ಇದೇ ಜೂನ್ 18ರಂದು ವಿಧಿವಶರಾಗಿದ್ದು, ಅವರ ತಮ್ಮ ಜೀವಿತಾವಧಿಯಲ್ಲಿ ಬಡವರು, ದಲಿತರು, ಶೋಷಿತರ ಪರ ಧ್ವನಿಯಾಗಿದ್ದರು. ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಅಂಬೇಡ್ಕರ್ ಕುರಿತ ಪುಸ್ತಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುತ್ತಿದ್ದರು. ಇಂತಹ ಸೇವಕರಿಗೆ ನುಡಿನಮನ ಸಲ್ಲಿಸುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸವುಂತೆ ಕೋರಿದರು.

ನಾಯಕರಾಗೋದು ಮುಖ್ಯವಲ್ಲ, ಮೊದಲು ಜನ ನಾಯಕರಾಗಿ

ಕೆಪಿಸಿಸಿ ಅಧ್ಯಕ್ಷ ಡಿಕೆಶಿ, ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿಗೆ ಸಚಿವ ಆರ್.ಅಶೋಕ್ ಟಾಂಗ್

ಮದ್ದೂರು, ಜು. 22– ರಾಜ್ಯ ಒಕ್ಕಲಿಗ ಸಿಎಂ ಚರ್ಚೆ ವಿಚಾರದಲ್ಲಿ ನಾನೇ ನಾಯಕ..., ನಾಯಕ..., ಅನ್ನೋದಲ್ಲ, ಮೊದಲು ಜನ ನಾಯಕ ನಾಗಬೇಕು ಎಂದು ಕಂದಾಯ ಸಚಿವ ಆರ್.ಅಶೋಕ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಟಾಂಗ್ ನೀಡಿದರು.



ಮಂಡ್ಯದಿಂದ ಬೆಂಗಳೂರಿಗೆ ತೆರಳುತ್ತಿದ್ದ ಮಾರ್ಗಮಧ್ಯೆ ಪಟ್ಟಣದ ಶಿವಾಸ್ ಹೋಟೆಲ್ ಬಳಿ ಮನ್‌ಮುಲ್ ನಿರ್ದೇಶಕ ಎಸ್.ಪಿ. ಸ್ವಾಮಿ ಅವರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಒಕ್ಕಲಿಗ ಸಮುದಾಯದ ನಾಯಕರ ವಿಷಯದಲ್ಲಿ ಕೆ.ಪಿ.ಸಿ.ಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿಕುಮಾರಸ್ವಾಮಿ ಅವರುಗಳು ಪರಸ್ಪರ ಮೇಲುಗೈ ಸಾಧಿಸಲು ಹೇಳಿಕೆ ನೀಡುತ್ತಿರುವುದು ಸರಿಯಲ್ಲ ಎಂದರು.

ಒಕ್ಕಲಿಗ ಸಮುದಾಯದ ವಿಷಯದಲ್ಲಿ ಅವರವರೇ ನಾಯಕರೆಂದು ಪ್ರತಿಪಾದನೆ ಮಾಡಿಕೊಳ್ಳುವುದು, ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಿಕೊಳ್ಳುವುದು, ತಮಗೆ ತಾವೇ ಸರ್ಟಿಫಿಕೇಶನ್ ಕೊಟ್ಟುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ ಎಂದ ಅವರು, ನಾನು ಒಕ್ಕಲಿಗನೇ ಹಾಗಂತ ಅವರ ರೀತಿ ಹೇಳಿಕೆ ನೀಡುವುದಿಲ್ಲ, ಎಲ್ಲಾ ಸಮುದಾಯದ ಜನರು ಸಮಾಜವೆಂದ ಮೇಲೆ ಮುಖ್ಯವಾಗುತ್ತಾರೆ ಎಂದು ಕುಟುಕಿದರು.

ಮುಂಬರುವ 2023 ರ ವಿಧಾನಸಭಾ ಚುನಾವಣೆಯಲ್ಲಿ ಮದ್ದೂರು ಕ್ಷೇತ್ರದಿಂದ ಎಸ್.ಪಿ.ಸ್ವಾಮಿ ಅವರೇ ಬಿಜೆಪಿ ಪಕ್ಷದ ಅಭ್ಯರ್ಥಿ ಎಂದು ಎಷ್ಟು ಸಾರಿ ಹೇಳಬೇಕು ಎಂದು ಕಂದಾಯ ಸಚಿವ ಆರ್.ಅಶೋಕ್ ಅವರು ಮುಖಂಡ ಎಸ್.ಪಿ.ಸ್ವಾಮಿ ರವರ ಬೆಂಬಲಿಗರಿಗೆ ತಿಳಿಸಿದರು.

ಎಸ್.ಪಿ.ಸ್ವಾಮಿ ಅವರನ್ನು ಬಿಜೆಪಿ ಅಭ್ಯರ್ಥಿ ಎಂದು ಘೋಷಿಸಬೇಕು ಎಂದು ಅವರ ಬೆಂಬಲಿಗರು ಒತ್ತಾಯಿಸಿದಾಗ ಈ ರೀತಿ ಪ್ರತಿಕ್ರಿಯಿಸಿದ ಅವರು, ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ಅವರೇ ಬಿ.ಜೆ.ಪಿ ಪಕ್ಷದ ಮದ್ದೂರು ಕ್ಷೇತ್ರದ ಅಭ್ಯರ್ಥಿಯೆಂದು ಎಷ್ಟೋ ಬಾರಿ ಸಭೆಗಳೂ ಸೇರಿದಂತೆ ಹಲವು ಕಡೆ ಹೇಳಲಾಗಿದೆ ಎಂದರು.

ಕಾಂಗ್ರೆಸ್ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರುಗಳನ್ನು ಇಡಿ ವಿಚಾರಣೆಗೊಳಿಸಿರುವುದು ಬಿಜೆಪಿಯ ಕುತಂತ್ರವಾಗಿದ್ದು, ರಾಜಕೀಯ ದುರುದ್ದೇಶದಿಂದ ಈ ರೀತಿ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್‌ನ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಆರೋಪಿಸಿದ್ದಾರಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಇದರಲ್ಲಿ ಯಾವುದೇ ರಾಜಕೀಯ ದುರುದ್ದೇಶವಿಲ್ಲ. ಹಾಗಿದ್ದರೆ ಈ ಹಿಂದೆ ಜನಾರ್ಧನರೆಡ್ಡಿ ಅವರನ್ನು ಕಾಂಗ್ರೆಸ್ ಸರ್ಕಾರವಿದ್ದಾಗ ಇ.ಡಿ. ವಿಚಾರಣೆ ನಡೆಸಿ ಬಂಧಿಸಿತ್ತು ಅಲ್ಲವೇ? ಎಂದ ಅವರು, ಆಗ ಇ.ಡಿ.ಸರಿ ಇತ್ತು ಈಗ ಸರಿ ಇಲ್ಲವೇ ಎಂದು ಕಾಂಗ್ರೆಸ್ ನಾಯಕರಿಗೆ ಟಾಂಗ್ ನೀಡಿದ ಅವರು, ತಪ್ಪು ಮಾಡಿದ್ದಾರೆ ಎಂದರೆ ಶಿಕ್ಷೆಯಾಗಲೇಬೇಕು ಎಂದ ಮಾಜಿ ಸಚಿವ ಕಾಂಗ್ರೆಸ್‌ನ ರಮೇಶ್ ಕುಮಾರ್ ಅವರು ಹೇಳಿದಂತೆಯೇ 3–4 ತಲೆಮಾರಿಗಾಗುವಷ್ಟು ಮಾಡಿಕೊಂಡಿದ್ದಾರೆ ಎಂದು ಅವರೇ ಹೇಳಿಕೊಂಡಿರುವುದರಿಂದ ಅನುಭವಿಸುತ್ತಾರೆ ಬಿಡಿ ಎಂದರು.

ಮನ್ ಮುಲ್ ನಿರ್ದೇಶಕ ಹಾಗೂ ಬಿಜೆಪಿ ಮುಖಂಡ ಎಸ್.ಪಿ.ಸ್ವಾಮಿ, ಮುಖಂಡರಾದ ಅಶೋಕ್ ಎಸ್.ಡಿ ಜಯರಾಮು, ಗ್ರಾ.ಪಂ. ಅಧ್ಯಕ್ಷ ನಂದೀಶ್ ಗೌಡ, ತಾಲ್ಲೂಕು ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಶಿವದಾಸ್ ಸತೀಶ್, ಮುಖಂಡರಾದ ಹಾಗಲಹಳ್ಳಿ ರಘು, ಶಿವು, ಅಭಿ, ಮಧು, ಹನುಮಂತೇಗೌಡ, ಉಪ್ಪಿನಕೆರೆ ಶಿವರಾಮ್ ಇದ್ದರು.

ಅರ್ಚಕರ ನೇಮಕದ ಬಗ್ಗೆ 2 ಗುಂಪುಗಳ ಪೈಪೋಟಿ

ಸಣ್ಣಕ್ಕಿ ರಾಯಸ್ವಾಮಿ ದೇವಾಲಯಕ್ಕೆ ಬೀಗ

ಭಾರತೀನಗರ, ಜು.22– ದೊಡ್ಡರಸಿನ ಕೆರೆ ಶ್ರೀ ಸಣ್ಣಕ್ಕಿ ರಾಯಸ್ವಾಮಿ ದೇವಾಲಯದ ಅರ್ಚಕರ ನೇಮಕಾತಿ ಬಗ್ಗೆ ಎರಡು ಗುಂಪುಗಳ ನಡುವೆ ಪೈಪೋಟಿ ಉಂಟಾಗಿದ್ದು, ವಿವಾದ ತಾರಕಕ್ಕೇರಿದ್ದು, ದೇವಸ್ಥಾನಕ್ಕೆ ಬೀಗ ಜಡಿಯಲಾಗಿದೆ.


ಕಳೆದ ಎರಡ್ಮೂರು ವರ್ಷಗಳಿಂದಲೂ ವಿವಾದಕ್ಕೀಡಾಗಿದ್ದ ದೇವಸ್ಥಾನದಲ್ಲಿ ಗ್ರಾಮಸ್ಥರ ಮಧ್ಯಸ್ಥಿಕೆಯಿಂದ ಪೂಜಾ ಕಾರ್ಯಗಳು ನಡೆಯುತ್ತಿತ್ತು. ಒಂದು ಗುಂಪು ಅರ್ಚಕರನ್ನು ಕರೆತಂದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿತ್ತು. ಆದರೆ ಇದು ತಾರಕಕ್ಕೇರಿದ ಪರಿಣಾಮ ಮುಂಜಾಗ್ರತಾ ಕ್ರಮವಾಗಿ ದೇವಾಲಯದ ಬಾಗಿಲಿಗೆ ಬೀಗ ಹಾಕಿಸಲಾಗಿದೆ.

ಅಧ್ಯಕ್ಷ ಡಾ. ಜಯಪ್ರಕಾಶಗೌಡ ಹಾಗೂ ಡಿ.ಕೆ.ಕೆರೆ ಮಂಚೇಗೌಡ ಇಬ್ಬರು ಪ್ರತ್ಯೇಕವಾಗಿ ದೇವಾಲಯದಲ್ಲಿ ಅರ್ಚಕರನ್ನು ನೇಮಿಸಿ ಪೂಜಾ ಕಾರ್ಯ ನಡೆಸಲು ಮುಂದಾಗಿದ್ದರು. ಇಬ್ಬರ ನಡುವಿನ ಘರ್ಷಣೆ ಹೆಚ್ಚಾದ ಕಾರಣ ದೇವಸ್ಥಾನದ ಬಾಗಿಲಿಗೆ ಬೀಗ ಹಾಕಲಾಗಿತ್ತು. ಆ ಸಂದರ್ಭದಲ್ಲಿ ಗ್ರಾಮಸ್ಥರು ಸಭೆ ಸೇರಿ ಚರ್ಚಿಸಿದ ಪರಿಣಾಮ ಸಣ್ಣಕ್ಕಿ ರಾಯಸ್ವಾಮಿ ಬಸವ ಸಮಿತಿಯ ಮಂಚೇಗೌಡ ಅವರ ತಂಡ ಅರ್ಚಕನನ್ನು ನೇಮಕ ಮಾಡಿ ಪೂಜಾ ಕಾರ್ಯಕ್ಕೆ ಆರಂಭಿಸಲಾಗಿತ್ತು.

ಈ ಆಯ್ಕೆ ದೇವಾಲಯ ಸಮಿತಿ ಅಧ್ಯಕ್ಷ ಡಾ. ಜಯಪ್ರಕಾಶಗೌಡ ಅವರಿಗೆ ಇಷ್ಟವಿರಲಿಲ್ಲ. ಅಂದಿನಿಂದ ಎರಡೂ ಗುಂಪುಗಳ ನಡುವೆ ಶೀಥಲ ಸಮರ ಮುಂದುವರಿದಿತ್ತು. ಆದರೂ ದೇವಾಲಯದ ಕಾರ್ಯಕಲಾಪಗಳು ಎಂದಿನಂತೆ ನಡೆಯುತ್ತಿದ್ದವು.

ಈ ಮಧ್ಯೆ ಅರ್ಚಕರ ನೇಮಕಾತಿ ಕುರಿತಂತೆ ಮತ್ತೆ ವಿವಾದ ಉಂಟಾದ ಪರಿಣಾಮ ಡಾ.ಜಯಪ್ರಕಾಶಗೌಡ ಅವರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ಮಂಚೇಗೌಡರ ತಂಡದ ಅರ್ಚಕರು ದೇವಾಲಯದಲ್ಲಿ ಪೂಜಾ ಕಾರ್ಯ ನಡೆಸದಂತೆ ತಡೆಯಾಜ್ಞೆ ತಂದಿದ್ದರು.

ಈ ಬಗ್ಗೆ ದೇವಾಲಯ ಸಮಿತಿಯವರು ತಹಸೀಲ್ದಾರರ್‌ಗೆ ದೂರು ಸಲ್ಲಿಸಿದ್ದರು. ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರರು ಎರಡೂ ಗುಂಪುಗಳಿಂದ ಮಾಹಿತಿ ಪಡೆದು ಪರಿಶೀಲನೆ ನಡೆಸಿದರು. ಎರಡೂ ಗುಂಪಿನವರ ಮನವೊಲಿಸಲು ಯತ್ನಿಸಿದರು. ಆದರೆ ಇದು ಸಫಲವಾಗದ ಕಾರಣ ದೇವಾಲಯದ ಬಾಗಿಲು ಬಂದ್ ಮಾಡಿ ಎಲ್ಲ ದಾಖಲಾತಿಗಳನ್ನೂ ಮೇಲಧಿಕಾರಿಗಳಿಗೆ ಕಳುಹಿಸುವುದಾಗಿ ತಹಸೀಲ್ದಾರ್ ತಿಳಿಸಿ ಹೊರ ನಡೆದರು. ಇದೇ ಸಂದರ್ಭದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಸಂತೋಷ್ ಅವರು ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.



ಶ್ರೀರಂಗಪಟ್ಟಣ ತಾಲೂಕಿನ ಟಿ.ಎಂ ಹೊಸೂರು ಗೇಟ್ ಬಳಿ ಇರುವ ಶ್ರೀ ಮಹಾ ಕಾಳಿ ದೇವಸ್ಥಾನದಲ್ಲಿ ಕಡೇ ಆಷಾಢ ಶುಕ್ರವಾರದ ವಿಶೇಷ ಮಹಾ ಚಂಡಿ ಯಾಗ ಸಂಸ್ಥಾಪಕ ಪ್ರಧಾನ ಅರ್ಚಕ ಗುರುದೇವ್ ಅವರ ನೇತೃತ್ವದಲ್ಲಿ ನೆರವೇರಿತು. ಈ ವೇಳೆ ನೂರಾರು ಭಕ್ತರು ದರ್ಶನ ಪಡೆದರು.

ಪಾಂಡವಪುರದಲ್ಲಿ ಜಿಎಸ್‌ಟಿ ವಿರೋಧಿಸಿ ರೈತ ಸಂಘ ಪ್ರತಿಭಟನೆ

ಪಾಂಡವಪುರ, ಜು.22– ದಿನ ಬಳಕೆ ವಸ್ತುಗಳ ಬೆಲೆ ಏರಿಕೆಯಿಂದಾಗಿ ಕಂಗಲಾಗಿರುವ ಜನ ಸಾಮಾನ್ಯರಿಗೆ ಕೇಂದ್ರ ಸರ್ಕಾರವು ಜಿಎಸ್‌ಟಿ ವಿಧಿಸುವ ಮೂಲಕ ಜನರ ಬದುಕನ್ನೇ ಅತಂತ್ರಗೊಳಿಸುತ್ತಿದೆ ಎಂದು ಆಪಾದಿಸಿ ಪಾಂಡವಪುರ ತಾಲೂಕು ರೈತ ಸಂಘದ ಕಾರ್ಯಕರ್ತರು ಪಟ್ಟಣದ ಐದು ದ್ವೀಪದ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ, ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.



ತಾಲೂಕು ರೈತ ಸಂಘದ ಅಧ್ಯಕ್ಷ ಚಿಕ್ಕಾಡೆ ಹರೀಶ್ ಮಾತನಾಡಿ, ಜನ ಸಾಮಾನ್ಯರು ಬಳಸುವ ಮೊಸರು, ಲಸ್ಸಿ ಮುಂತಾದ ಪದಾರ್ಥಗಳಿಗೆ ಜಿಎಸ್‌ಟಿ ತೆರಿಗೆ ವಿಧಿಸಿರುವುದನ್ನು ಖಂಡಿಸಿದರಲ್ಲದೆ, ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಪರೀಕ್ಷಿಸಬೇಕು, ಹೈನುಗಾರಿಕೆ ಮೇಲೆ ವಿಧಿಸಿರುವ ಜಿಎಸ್‌ಟಿಯನ್ನು ಈ ಕೂಡಲೇ ರದ್ದು ಪಡಿಸದಿದ್ದರೆ ರಾಜ್ಯ ರೈತ ಸಂಘವು ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ನರೇಂದ್ರ ಮೋದಿಯವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಜಿಎಸ್‌ಟಿಯನ್ನು ವಿರೋಧಿಸಿದ್ದರು. ಜನಸಾಮಾನ್ಯರಿಗೆ ಸಬ್ಸಿಡಿ ನೀಡುವುದರ ಮೂಲಕ 600 ರೂ.ಗಳಿಗೆ ಸಿಲಿಂಡರ್ ನೀಡುತ್ತಿದ್ದು, ಕೇಂದ್ರ ಸರ್ಕಾರ ಸಿಲಿಂಡರ್ ಒಂದಕ್ಕೆ 1100 ರೂ.ಗಳನ್ನು ಸಂಗ್ರಹ ಮಾಡುತ್ತಿದೆ ಎಂದು ಆಪಾದಿಸಿದರು.

ಗಣಿಗಾರಿಕೆಯಿಂದ ಕೆ.ಆರ್.ಎಸ್. ಸುತ್ತ ಮುತ್ತಲು ಪ್ರದೇಶಗಳಿಗೆ ಅಪಾಯವಿದೆ ಎನ್ನುವ ಆತಂಕ ಹಿಂದಿನಿಂದಲೂ ಇದೆ. ಈ ಬಗ್ಗೆ ಹಲವಾರು ಸಂಘಟನೆಗಳು ಹೋರಾಟ ನಡೆಸಿವೆ. ಕೆ.ಆರ್.ಎಸ್. ಉತ್ತರದ ಬೇಬಿ ಬೆಟ್ಟದ ಪ್ರದೇಶದಲ್ಲಿ 10.5 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಬಾರಿ ಸ್ಫೋಟಕ ಬಳಸುವುದರಿಂದ ಕಂಪನವಾಗಿರುವ ಬಗ್ಗೆ ತನಿಖೆಯಾಗಿದೆ. ಅಣ್ಣೆಕಟ್ಟಿಗೆ ಗಣಿಗಾರಿಕೆಯಿಂದ ಅಪಾಯವಿದೆ ಎಂಬುದನ್ನು ಪತ್ತೆ ಹಚ್ಚಲು 2019 ಜನವರಿಯಲ್ಲಿ ತಜ್ಞರ ತಂಡ ಆಗಮಿಸಿತ್ತು. ಮತ್ತೆ ಇದೆ ತಿಂಗಳು 25ರಿಂದ 31ರವರೆಗೆ ತಜ್ಞರ ತಂಡ ಪ್ರಾಯೋಗಿಕ ನಡೆಸಲು ಮುಂದಾಗಿರುವುದನ್ನು ವಿರೋಧಿಸಿ ರೈತ ಸಂಘವು ಗೋಬ್ಯಾಕ್ ಚಳವಳಿ ಹಮ್ಮಿಕೊಂಡಿರುವುದಾಗಿ ತಿಳಿಸಿದರು.

ಹಿರಿಯ ರೈತ ಮುಖಂಡ ಕೆಟಿ. ಗೋವಿಂದೇಗೌಡ ಮಾತನಾಡಿ, ಸರ್ಕಾರವು ಭತ್ತದ ಖರೀದಿ ಕೇಂದ್ರವನ್ನು ತೆರದಿಲ್ಲವಾದ್ದರಿಂದ ದಲ್ಲಾಳಿಗಳ ಹಾವಳಿ ಹೆಚ್ಚಾಗಿದೆ, ರಾಸಾಯನಿಕ ಗೊಬ್ಬರದ ಬೆಲೆ ಹೆಚ್ಚಾಗಿದ್ದು, ಈ ಕೂಡಲೇ ಬೆಲೆ ಏರಿಕೆಯನ್ನು ತಡೆಗಟ್ಟಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕೆ.ಕೆ.ಗೌಡೇಗೌಡ, ಕೆನ್ನಾಳು ವಿಜಯಕುಮಾರ್, ನಂಜೇಗೌಡ, ರಘು, ಮಂಜು, ಜಯರಾಮು, ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.



ಶ್ರೀರಂಗಪಟ್ಟಣ ತಾಲೂಕಿನಲ್ಲಿ ಕೆ.ಆರ್.ಎಸ್ ಗ್ರಾಮವನ್ನು ಕಂದಾಯ ಗ್ರಾಮವನ್ನಾಗಿ ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಬೆಳಗೊಳ ರಾಜಸ್ವ ನಿರೀಕ್ಷಕ ಜೆ.ಉಮೇಶ್ ಅವರ ಕರ್ತವ್ಯವನ್ನು ಶ್ಲಾಘಿಸಿ ಅವರನ್ನು ಶಾಸಕ ರವೀಂದ್ರ ಶ್ರೀಕಂಠಯ್ಯ ಅವರು ಸನ್ಮಾನಿಸಿದರು.

ಆ.11 ರಿಂದ ಮೇಲುಕೋಟೆಯಲ್ಲಿ 'ಹರ್ ಘರ್ ತಿರಂಗಾ' ಕಾರ್ಯಕ್ರಮ

ಮೇಲುಕೋಟೆ,ಜು.22– ಐತಿಹಾಸಿಕ ಪ್ರವಾಸಿತಾಣ ಮೇಲುಕೋಟೆಯಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಸರ್ಕಾರ ರೂಪಿಸಿರುವ "ಹರ್ ಘರ್ ತಿರಂಗಾ" ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಗ್ರಾಪಂ ಉಪಾಧ್ಯಕ್ಷ ಎನ್.ತಿರುಮಲೈ ತಿಳಿಸಿದರು.

ಈ ಸಂಬಂಧ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಆಗಸ್ಟ್ 11 ರಿಂದ 17ರವರೆಗೆ ಮೇಲುಕೋಟೆಯ ಎಲ್ಲಾ ಸರ್ಕಾರಿ ಕಟ್ಟಡಗಳು, ಸಂಘ–ಸಂಸ್ಥೆ ಮುಂಭಾಗ ಸೇರಿದಂತೆ 450ಕ್ಕೂ ಮನೆಗಳ ಮುಂಭಾಗ ರಾಷ್ಟ್ರಧ್ವಜವನ್ನು ಹಾರಿಸಲು ತೀರ್ಮಾನಿಸಲಾಗಿದೆ. ಸರ್ಕಾರಿ ಸಂಘಸಂಸ್ಥೆಗಳಿಗೆ ವಿದ್ವಾನ್ ಆನಂದಾಳ್ವಾರ್ 25 ಧ್ವಜಗಳನ್ನು ಉಚಿತವಾಗಿ ನೀಡುತ್ತಿದ್ದಾರೆ ದಾನಿಗಳು ರಾಷ್ಟ್ರಧ್ವಜ ನೀಡಿ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು ಎಂದರು

ಇದರ ಜೊತೆಗೆ ಆಗಸ್ಟ್ 15 ರಂದು ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ವಾತಂತ್ರ ಸೇನಾನಿಗಳ ವೇಷಭೂಷಣ, ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ ಎಂದರು.

ಈ ವೇಳೆ ಮಾತನಾಡಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರಾಜೇಶ್ವರ್ ಪ್ರತಿ ವರ್ಷ ಶಾಲಾಕಾಲೇಜು ಮತ್ತು ಸರ್ಕಾರಿ ಕಛೇರಿಗಳಲ್ಲಿ ಮಾತ್ರ ಸ್ವಾತಂತ್ರೋತ್ಸವ ಆಚರಿಸಲಾಗುತ್ತಿತ್ತು. ಈ ವರ್ಷ ಮನೆ–ಮನೆಗಳಲ್ಲೂ ಹಬ್ಬದ ರೀತಿಯಲ್ಲಿ ಅಮೃತ ಸ್ವಾತಂತ್ರ್ಯೋತ್ಸವವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ನಿರ್ದೇಶನದಂತೆ ಆಚರಿಸಬೇಕು. ಮೇಲುಕೋಟೆಯ ಪ್ರತಿಯೊಬ್ಬ ನಾಗರೀಕರು ಕ್ರಿಯಾಶೀಲವಾಗಿ ದೇಶಭಕ್ತಿ ಬಿಂಭಿಸುವ ಈ ಹಬ್ಬದ ಯಶಸ್ಸಿಗೆ ಸಹಕಾರ ನೀಡಬೇಕು ಎಂದರು.

ಗ್ರಾ.ಪಂ ಅಧ್ಯಕ್ಷ ಸೋಮಶೇಖರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಗ್ರಾಪಂ ಸದಸ್ಯ ಜಿ.ಕೆ.ಕುಮಾರ್, ವಿದ್ವಾನ್ ಆನಂದಾಳ್ವಾರ್ ದೇವಾಲಯದ ಬಾಲಕೃಷ್ಣ ವಿವಿಧ ಶಾಲೆಯ ಮುಖ್ಯಶಿಕ್ಷಕರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಮಹಿಳಾ ಸಂಘದ ಪ್ರತಿನಿಧಿಗಳು ಭಾಗವಹಿಸಿದ್ದರು.

ಡಿಎವಿ ಪಬ್ಲಿಕ್ ಶಾಲೆಗೆ ಶೇ.100 ಫಲಿತಾಂಶ

ಮೈಸೂರು, ಜು.22–ಮೈಸೂರಿನ ಡಿಎವಿ ಪಬ್ಲಿಕ್ ಶಾಲೆಯು ಸಿಬಿಎಸ್‌ಸಿ 10ನೇ ತರಗತಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದಿದೆ ಪರೀಕ್ಷೆಗೆ ಹಾಜರಾದ129 ವಿದ್ಯಾರ್ಥಿಗಳ ಪೈಕಿ 43 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ ಹಾಗೂ 73 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಆರ್. ಧೃತಿ ಆಚಾರ್ಯ ಶೇ.97.4, ಸ್ಮೃತಿ ಆಚಾರ್ಯ ಶೇ.97.2, ಕೆಆರ್. ತನುಶ್ರೀ ಶೇ.97.2, ಪೌಶಾಲಿ ಸಹಾ ಶೇ.97, ಎಸ್.ಕಶೀಶ್ ಶೇ.96.8, ಈಶಾ ಜೈನ್ ಶೇ.96.6ರಷ್ಟು ಅಂಕ ಗಳಿಸಿದ್ದಾರೆ. ಎಲ್ಲಾ ವಿದ್ಯಾರ್ಥಿಗಳನ್ನು ಶಾಲೆಯ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಶಿಕ್ಷಕ ವರ್ಗದವರು ಅಭಿನಂದಿಸಿದ್ದಾರೆ.



ಆರ್. ಧೃತಿ



ಸ್ಮೃತಿ ಆಚಾರ್ಯ




ಕೆ.ಆರ್. ತನುಶ್ರೀ



ಪೌಶಾಲಿ ಸಹಾ



ಎಸ್.ಕಶೀಶ್




ಈಶಾ ಜೈನ್

ಸಾಧಕರು, ಪ್ರತಿಭಾನ್ವಿತರಿಗೆ ಇಂದು ಸನ್ಮಾನ

ಮೈಸೂರು,ಜು.22–ಹಳೇ ಮೈಸೂರು ರಾಜ್ಯದಲ್ಲಿ ಸಂಸ್ಥಾಪಿತವಾದ ಪ್ರಥಮ ಖಾಸಗಿ ವಾಣಿಜ್ಯ ಕಾಲೇಜು ಎಂಬ ಹೆಗ್ಗಳಿಕೆಗೆ ಮೈಸೂರಿನ ಡಿ.ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜು ಪಾತ್ರವಾಗಿದ್ದು, ಡಿ.ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜು ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಜು.23ರಂದು ಸಂಜೆ 4 ಗಂಟೆಗೆ ಡಿ.ಬನುಮಯ್ಯ ಕಲಾ ಭವನದಲ್ಲಿ 'ಸಾಧಕರು ಮತ್ತು ಪ್ರತಿಭಾನ್ವಿತರಿಗೆ ಸನ್ಮಾನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂಸ್ಥೆಯ ಎಲ್ಲಾ ಹಿರಿಯ ವಿದ್ಯಾರ್ಥಿಗಳು ಭಾಗವಹಿಸುವಂತೆ ಸಂಘದ ಕಾರ್ಯದರ್ಶಿ ಮೂರ್ತಿ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ವೆಂಕಟರಾಮ್ ಕಶ್ಯಪ್ ನಿಧನ



ಮೈಸೂರು, ಜು.22–ನಗರದ ಬ್ರಾಹ್ಮಣ ಸಮಾಜದ ಮುಖಂಡ, 'ಮನ್ವಂತರ' ಪಾಕ್ಷಿಕ ಪತ್ರಿಕೆ ಸಂಪಾದಕರಾಗಿದ್ದ ವೆಂಕಟರಾಮ್ ಕಶ್ಯಪ್‌ರವರು ಇಂದು ಬೆಳಿಗ್ಗೆ ಅವರ ಇ ಅಂಡ್ ಎಫ್ ಬ್ಲಾಕ್ (ಸುಯೋಗ್ ಆಸ್ಪತ್ರೆಯ ಮುಂಭಾಗದ ರಸ್ತೆ) ರಾಮಕೃಷ್ಣನಗರದ ನಿವಾಸದಲ್ಲಿ ನಿಧನ ಹೊಂದಿದರು. ಅವರಿಗೆ 73 ವರ್ಷ ವಯಸ್ಸಾಗಿತ್ತು ಮೃತರು ಪತ್ನಿ ಲಲಿತಮ್ಮ, ಪುತ್ರ ಸುಮಂತ್ ಕಶ್ಯಪ್, ಸೊಸೆ ನಿಖಿಲ, ಪುತ್ರಿ ಮೇಘಾ ಕಶ್ಯಪ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರು ನಂಜನಗೂಡಿನಲ್ಲಿರುವ ಶ್ರೀ ಶಾರದಾ ಗಾನಕಲಾ ಮಂದಿರ ಸಂಗೀತ ಹಾಗೂ ವೀಣಾ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ವೆಂಕಟರಾಮ್ ಕಶ್ಯಪ್ ಅವರ ಅಂತ್ಯಕ್ರಿಯೆ ಇಂದು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿತು.

ಡಾ.ಶಾಮಣ್ಣ



ಮೈಸೂರು: ನಿವೃತ್ತ ಹಿರಿಯ ವೈದ್ಯಕೀಯ ಸಲಹೆಗಾರರಾದ ಡಾ.ಶಾಮಣ್ಣ(81) ಅವರು ಬೃಂದಾವನ ಬಡಾವಣೆಯ ತಮ್ಮ ನಿವಾಸದಲ್ಲಿ ವಯೋಸಹಜ ಕಾಯಿಲೆಯಿಂದ ಇಂದು ಮುಂಜಾನೆ ನಿಧನರಾದರು. ಇವರು ಪತ್ನಿ ಡಾ.ಉಮಾ ಶಾಮಣ್ಣ, ಮಗ, ಇಬ್ಬರು ಹೆಣ್ಣುಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಮತ್ತು ಅಪಾರ ಬಂಧು ಮಿತ್ರರನ್ನು ಆಗಲಿದ್ದಾರೆ. ಶ್ರೀಯುತರ ಅಂತ್ಯಕ್ರಿಯೆ ಅವರ ಸ್ವಂತ ಊರಾದ ವಿರ್ಲೆಯಲ್ಲಿ ಇಂದು ಸಾಯಂಕಾಲ ನೆರವೇರಿತು.

ಬಸವರಾಜ್



ಮೈಸೂರು, ಜು.22– ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ಬಸವರಾಜ್(48) ಅವರು ಶುಕ್ರವಾರ ನಿಧನರಾದರು. ಮೃತರು ಪತ್ನಿ ಹೇಮ ಮತ್ತು ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಕುಂಬಾರಕೊಪ್ಪಲಿನ ರುದ್ರಭೂಮಿಯಲ್ಲಿ ಶುಕ್ರವಾರ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅರಸು ಕನಸು ನನಸಾಗಲು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಎಲ್ಲಾ ರೀತಿಯಲ್ಲೂ ಸಬಲರಾಗಬೇಕು

ಹಿಂದುಳಿದ ವರ್ಗಗಳ ಹಾಸ್ಟೆಲ್ ವಾರ್ಡನ್‌ಗಳಿಗೆ ಇಲಾಖಾ ಆಯುಕ್ತ ಕೆ.ಎ.ದಯಾನಂದ ಸಲಹೆ



ಮೈಸೂರು,ಜು.22(ಎಂಟಿವೈ)– ಹಿಂದುಳಿದ ವರ್ಗಗಳ ಆಶಾಕಿರಣ ಎನಿಸಿರುವ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಆಶಯ, ಕನಸು ನನಸಾಗಬೇಕಾದರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಚೆನ್ನಾಗಿ ಓದಿ ಸಾಮಾಜಿಕ, ಆರ್ಥಿಕವಾಗಿ ಸಬಲರನ್ನಾಗಿ ಮಾಡಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತ ಕೆ.ಎ. ದಯಾನಂದ ಕರೆ ನೀಡಿದ್ದಾರೆ.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ಬಂಟ್ಸ್ ಸಮುದಾಯ ಭವನದಲ್ಲಿ ಶುಕ್ರವಾರ ನಡೆದ ಮೈಸೂರು ವಿಭಾಗಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ 'ಕರ್ತವ್ಯ ನಿರ್ವಹಣೆ ಹಾಗೂ ಜವಾಬ್ದಾರಿ ಪಾಲನೆ' ಕುರಿತು ಹಮ್ಮಿಕೊಂಡಿದ್ದ ಪುನಶ್ಚೇತನ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಾಸ್ಟೆಲ್ ಕಳಪೆಯಾಗಿರಲು ನೇರ ಕಾರಣ ಹಾಸ್ಟೆಲ್ ವಾರ್ಡನ್‌ಗಳೇ ಆಗಿದ್ದಾರೆ. ವಾರ್ಡನ್‌ಗಳಿಗೆ ಹಾಸ್ಟೆಲ್‌ನಲ್ಲಿನ ಅವ್ಯವಸ್ಥೆ ಬಗ್ಗೆ ಮನವರಿಕೆಯಾಗಿದರೆ ಪರಿಸ್ಥಿತಿಯನ್ನು ಶೇ.50ರಷ್ಟಾದರೂ ಸುಧಾರಿಸಬಹುದು. ಅದಕ್ಕಾಗಿಯೇ ಈಗಾಗಲೇ ಗುಲ್ಬರ್ಗ, ಬೆಂಗಳೂರು, ಮೈಸೂರಿನಲ್ಲಿ ಕಾರ್ಯಾಗಾರ ಆಯೋಜಿಸಿ ವಾರ್ಡನ್‌ಗಳಿಗೆ ಹಾಸ್ಟೆಲ್‌ಗಳ ನಿರ್ವಹಣೆ ಕುರಿತಂತೆ ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದರು.

ಹಾಸ್ಟೆಲ್‌ಗೆ ಸೇರುವ ವಿದ್ಯಾರ್ಥಿಗಳಲ್ಲಿ ಹಲವರು ಪೋಷಕರಿಲ್ಲದವರು, ಆರ್ಥಿಕವಾಗಿ ಸಮಸ್ಯೆಯಲ್ಲಿ ಸಿಲುಕಿರುವವರೇ ಆಗಿದ್ದಾರೆ. ವಿದ್ಯಾರ್ಥಿಗಳಲ್ಲಿ ಊಟಕ್ಕೆ ಸಮಸ್ಯೆ ಇರುವ ಮಕ್ಕಳೇ ಹೆಚ್ಚಾಗಿ ವಿದ್ಯಾರ್ಥಿನಿಲಯ ಸೇರುತ್ತಾರೆ. ಅಂತಹ ಮಕ್ಕಳನ್ನು ನಿಮ್ಮ ಮಕ್ಕಳಂತೆ ಕಾಣುವ ಮೂಲಕ ಅವರ ಏಳಿಗೆಗೆ ನೆರವಾಗಬೇಕು. ಹಾಸ್ಟೆಲ್‌ಗಳ ವಾತಾವರಣದ ಸ್ಥಿತಿಗತಿ ಬಗ್ಗೆ ವಿದ್ಯಾರ್ಥಿಗಳಿಗೆ ಮನಸ್ಸು ಕೆಡದಂತೆ ನೋಡಿಕೊಳ್ಳಬೇಕು. ಹಾಸ್ಟೆಲ್ ವಾತಾವರಣ ಸರಿಯಿಲ್ಲ ಎಂಬ ಭಾವನೆ ಮೂಡದಂತೆ ನೋಡಿಕೊಳ್ಳಬೇಕು. ಅಂತಹ ಮನಸ್ಥಿತಿಯನ್ನು ವಾರ್ಡನ್‌ಗಳು ಬದಲಾವಣೆ ಮಾಡಿ. ಸರ್ಕಾರ ನಿಮಗೆ ಉತ್ತಮ ಸಂಬಳ ಕೊಡುತ್ತದೆ. ನೀವು ನಿಮ್ಮ ಸಮಸ್ಯೆಗಳನ್ನೇ ಹೇಳಲು ಹೋಗಬೇಡಿ, ಖಾಸಗಿ ಕಂಪೆನಿಗಳಲ್ಲಿ ಯಾರಾದರು ಸಮಸ್ಯೆ ಹೇಳುತ್ತಾರೆಯೇ? ಆದ್ದರಿಂದ ಹಾಸ್ಟೆಲ್ ವಾರ್ಡನ್‌ಗಳಿಗೆ ಎಲ್ಲಾ ಸೌಲಭ್ಯವು ಇದೆ. ಸರ್ಕಾರ ರಾಜ್ಯದ ಎಲ್ಲಾ ಹಾಸ್ಟೆಲ್‌ಗಳಿಗೆ ಒಂದೇ ರೀತಿಯ ಅನುದಾನ ಕೊಡುತ್ತದೆ. ಆದರೆ ಕೆಲವು ಹಾಸ್ಟೆಲ್‌ಗಳು ಚೆನ್ನಾಗಿ ನಡೆಯುತ್ತಿವೆ. ಕೆಲವು ಹಾಸ್ಟೆಲ್‌ಗಳ ನಿರ್ವಹಣೆ ಕಳಪೆಯಾಗಿದೆ. ಇದಕ್ಕೆ ಕಾರಣ ಯಾರು? ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. ವಾರ್ಡನ್‌ಗಳು ಅಡುಗೆಯವರಿಗೆ ಆಸಕ್ತಿ ಇದ್ದರೆ ಮಾತ್ರ ಹಾಸ್ಟೆಲ್‌ಗಳು ಚೆನ್ನಾಗಿರುತ್ತವೆ. ಶೇ.25% ಹಾಸ್ಟೆಲ್‌ಗಳಿಂದ ಇಲಾಖೆಗೆ ಕೆಟ್ಟ ಹೆಸರು ಬರುತ್ತಿದೆ. ಜಿಲ್ಲಾ ಅಧಿಕಾರಿಗಳು, ತಾಲೂಕು ಅಧಿಕಾರಿಗಳು, ಹಾಸ್ಟೆಲ್‌ಗಳ ಬದಲಾವಣೆ ಮಾಡಲು ಪ್ರಯತ್ನ ಮಾಡಬೇಕು ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಜಂಟಿ ನಿರ್ದೇಶಕರುಗಳಾದ ಡಾ.ಸಿ.ಕೆ. ಜಗದೀಶ್‌ಕುಮಾರ್, ಜಿ. ಜಗದೀಶ್, ರಾಜಪ್ಪ, ಜಿ.ಎಸ್.ಸೋಮಶೇಖರ್, ಸಂಪನ್ಮೂಲವ್ಯಕ್ತಿಗಳಾದ ಪ್ರೊ. ಜಿ.ವೆಂಕಟೇಶಕುಮಾರ್, ಶೋಭಾ, ಅಶೋಕ, ಗಾಳಪ್ಪನವರ, ಜಿಲ್ಲಾ ಅಧಿಕಾರಿಗಳಾದ ಹೆಚ್.ಎಸ್. ಬಿಂದ್ಯಾ, ವೈಸೋಮಶೇಖರ್, ಹಾಕಪ್ಪ, ಆರ್. ಲಮಾಣಿ, ಮಂಜುನಾಥ, ಕೆ. ಶ್ರೀನಿವಾಸ್, ಸಚಿನ್‌ಕುಮಾರ್, ಚಂದ್ರಕಲಾ, ಎಂಟು ಜಿಲ್ಲೆಗಳ ವಾರ್ಡ್‌ಗಳು ತಾಲೂಕು ಅಧಿಕಾರಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಮೈಸೂರು ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಹೆಚ್.ಎಸ್. ಬಿಂದ್ಯಾ ಸ್ವಾಗತಿಸಿದರು. ಸಮನ್ವಯ ಕಾಶಿ ನಿರೂಪಿಸಿದರು. ಜಂಟಿ ನಿರ್ದೇಶಕ ಜಿ.ಎಸ್. ಸೋಮಶೇಖರ್ ವಂದಿಸಿದರು, ರವಿರಾಜ್ ಪ್ರಾರ್ಥಿಸಿದರು.

ವಿಲೇಜ್ ಹಾಸ್ಟೆಲ್‌ಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಆಗ್ರಹಿಸಿ

ಎಸ್‌ಎಫ್‌ಐ ನೇತೃತ್ವದಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು,ಜು.22(ಪಿಎಂ)– ಮೈಸೂರು ವಿವಿಯ ವಿಲೇಜ್ ಹಾಸ್ಟೆಲ್‌ಗೆ ಸಮರ್ಪಕ ಮೂಲಭೂತ ಸೌಲಭ್ಯ ಕಲ್ಪಿಸಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ನೇತೃತ್ವದಲ್ಲಿ ಸದರಿ ಹಾಸ್ಟೆಲ್ ವಿದ್ಯಾರ್ಥಿಗಳು ಶುಕ್ರವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಬೋಗಾದಿ ರಸ್ತೆಯಲ್ಲಿರುವ ಹಾಸ್ಟೆಲ್ ಮುಖ್ಯ ದ್ವಾರದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ವಿಲೇಜ್ ಹಾಸ್ಟೆಲ್‌ನ ಬಹುತೇಕ ಎಲ್ಲಾ ಕೊಠಡಿಗಳು ಮಳೆಯಿಂದ ಶಿಥಿಲಗೊಂಡಿವೆ. ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳು ನೆಲದ ಮೇಲೆ ಮಲಗುವ ಪರಿಸ್ಥಿತಿ ಇದೆ. ಯಾವುದೇ ಕೊಠಡಿಗಳಲ್ಲಿ ಫ್ಯಾನ್‌ಗಳು ಇಲ್ಲ. ಸರಿಯಾದ ಮೂಲಭೂತ ಸೌಲಭ್ಯ ಇಲ್ಲದೆ, ವಿದ್ಯಾರ್ಥಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶೌಚಾಲಯದ ಕೊರತೆಯೂ ಇದ್ದು, ಅವೂ ಸುಸ್ಥಿತಿಯಲ್ಲಿ ಇಲ್ಲದ ಕಾರಣ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ. ಮತ್ತೊಂದೆಡೆ ಹಾಸ್ಟೆಲ್‌ನಲ್ಲಿ ಕಳಪೆ ಆಹಾರ ನೀಡುತ್ತಿದ್ದು, ಇದರಿಂದ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಜೊತೆಗೆ ನೀರಿನ ಟ್ಯಾಂಕ್ ಶುದ್ಧಗೊಳಿಸದೇ ಕಲುಷಿತ ನೀರು ಪೂರೈಕೆಯಾಗುತ್ತಿದೆ ಎಂದು ಆರೋಪಿಸಿದರು. ಶಿಥಿಲಗೊಂಡಿರುವ ಕೊಠಡಿಗಳನ್ನು ಶೀಘ್ರವೇ ದುರಸ್ತಿಪಡಿಸಬೇಕು. ಎಲ್ಲಾ ಕೊಠಡಿಗಳಿಗೂ ಫ್ಯಾನ್ ಅಳವಡಿಸಬೇಕು. ಕೂಡಲೇ ಅಗತ್ಯಕ್ಕೆ ಅನುಗುಣವಾಗಿ ಶೌಚಾಲಯ ಮತ್ತು ಸ್ನಾನದ ಗೃಹಗಳನ್ನು ನಿರ್ಮಿಸಬೇಕು. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಎಸ್‌ಎಫ್‌ಐ ಜಿಲ್ಲಾ ಸಂಚಾಲಕ ವಿಜಯ್‌ಕುಮಾರ್, ವಿವಿ ಘಟಕ ಕಾರ್ಯದರ್ಶಿ ವೀರಭದ್ರ, ವಿದ್ಯಾರ್ಥಿ ಮುಖಂಡರಾದ ಸಾಹು ಮಹರಾಜ್, ಬೋಪಣ್ಣ, ಮಹದೇವ ಪ್ರಸಾದ್, ಅಭಿಷೇಕ್, ಸಂದೇಶ್, ಯತೀಶ್, ಶಿವಕುಮಾರ್, ನಾಗರಾಜ್ ಸೇರಿದಂತೆ ವಿಲೇಜ್ ಹಾಸ್ಟೆಲ್ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಇಂದು ವಾರ್ಷಿಕ ಮಹಾಸಭೆ

ಮೈಸೂರು, ಜು.22– ಮೈಸೂರಿನ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷ ಎಂ.ಸಿ.ಮರಿಸ್ವಾಮಿ ಅಧ್ಯಕ್ಷತೆಯಲ್ಲಿ ಜು.23 ರಂದು ಬೆಳಗ್ಗೆ 10 ಗಂಟೆಗೆ ನಗರದ ಲಲಿತ ಮಹಲ್ ರಸ್ತೆಯಲ್ಲಿರುವ ಪೊಲೀಸ್ ಭವನದಲ್ಲಿ ಏರ್ಪಡಿಸಲಾಗಿದೆ. ಸಂಘದ ಸದಸ್ಯರು ತಪ್ಪದೇ ಸಭೆಗೆ ಹಾಜರಾಗಬೇಕೆಂದು ಸಂಘವು ಕೋರಿದೆ.

ಕೊಠಡಿಯಲ್ಲಿ ಕೂಡಿ ಹಾಕಿ, ಬೆದರಿಸಿ ಚಾಲಕನಿಂದ ರಾಜೀನಾಮೆ ಪತ್ರ ಬರೆಸಿಕೊಂಡ ಆರೋಪ

ಒಂಟಿಕೊಪ್ಪಲು ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿ ದೇವಸ್ಥಾನದ ನಾಲ್ವರು ಟ್ರಸ್ಟಿಗಳ ವಿರುದ್ಧ ಕೇಸ್

ಕ್ರೈಂ ಬಾಕ್ಸ್

ಮೈಸೂರು, ಜು.22–ತನ್ನನ್ನು ಕೊಠಡಿಯಲ್ಲಿ ಕೂಡಿ ಹಾಕಿ, ಬೆದರಿಸಿ ರಾಜೀನಾಮೆ ಪತ್ರ ಬರೆಸಿಕೊಂಡರು ಎಂದು ಚಾಲಕನೋರ್ವ ನೀಡಿದ ದೂರಿನ ಮೇರೆಗೆ ಮೈಸೂರಿನ ಒಂಟಿ ಕೊಪ್ಪಲ್‌ನಲ್ಲಿರುವ ಶ್ರೀ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನದ ನಾಲ್ವರು ಟ್ರಸ್ಟಿಗಳ ವಿರುದ್ಧ ವಿವಿ ಪುರಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಟ್ರಸ್ಟಿಗಳಾದ ರಾಮಕೃಷ್ಣ(55), ವರದರಾಜನ್(60), ಸತ್ಯನಾರಾಯಣ (65), ಅವಿನಾಶ್(45) ಆರೋಪಕ್ಕೆ ಗುರಿಯಾದವರಾಗಿದ್ದು, ಕುರುಬರಹಳ್ಳಿ ನಿವಾಸಿ ಈ ದೇವಸ್ಥಾನ ಟ್ರಸ್ಟ್‌ನ ಚಾಲಕನಾಗಿದ್ದ ಎನ್.ಮಂಜುನಾಥ್(55) ಮೈಸೂರಿನ 6ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಾಖಲಿಸಿದ್ದ ಖಾಸಗಿ ದೂರಿನ ಮೇರೆಗೆ ನ್ಯಾಯಾಲಯದ ಆದೇಶದಂತೆ ಪೊಲೀಸರು ಟ್ರಸ್ಟಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ 341, 506, 468, 471, 420ರಡಿ ಎಫ್‌ಐಆರ್ ದಾಖಲಿಸಿದ್ದಾರೆ.

ವಿವರ: ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿ ದೇವಸ್ಥಾನ ಟ್ರಸ್ಟ್‌ನ ಚಾಲಕನಾಗಿ ಖಾಯಂ ನೌಕರನಾಗಿರುವ ತನ್ನನ್ನು 2021ರ ನವೆಂಬರ್ 17 ರಂದು ಹುಂಡಿ ಎಣಿಕೆ ಮಾಡುವ ಸಂದರ್ಭದಲ್ಲಿ ಟ್ರಸ್ಟಿ ರಾಮಕೃಷ್ಣ ಅವರು, ನೀನು ದೇವಸ್ಥಾನದಿಂದ 3 ಚೀಲ ಹಣವನ್ನು ಕದ್ದು ಸಾಗಿಸಿದ್ದೀಯಾ, ಕೆಲಸಕ್ಕೆ ಬರಬೇಡ ಎಂದು ಹೇಳಿದರು. ಅದೇ ವೇಳೆ ಮತ್ತೋರ್ವ ಟ್ರಸ್ಟಿ ಅವಿನಾಶ್ ತನ್ನನ್ನು ಮೀಟಿಂಗ್ ಹಾಲ್‌ನ ಕೊಠಡಿಯಲ್ಲಿ ಕೂಡಿ ಹಾಕಿ ರಾಜೀನಾಮೆ ಪತ್ರಕ್ಕೆ ಬಲವಂತವಾಗಿ ಸಹಿ ಪಡೆದಿದ್ದಾರೆ. ನಾವು ಹೇಳಿದಂತೆ ಸಹಿ ಹಾಕದೇ ಹೋದರೆ ನಿನ್ನ ವಿರುದ್ಧ ಪೊಲೀಸರಿಗೆ ಸುಳ್ಳು ದೂರು ನೀಡುತ್ತೇವೆ ಎಂದು ಬೆದರಿಸಿದ್ದರು. ಈ ಕುರಿತು ಟ್ರಸ್ಟ್‌ನ ಅಧ್ಯಕ್ಷರಿಗೆ ಲಿಖಿತವಾಗಿ ತಿಳಿಸಿದರೂ ಕ್ರಮ ವಹಿಸದೇ ನಿರ್ಲಕ್ಷ್ಯ ವಹಿಸಿದ್ದಾರೆ. ನಾನು ಹಣ ಕದ್ದಿದ್ದೇನೆ ಎಂದು ಆರೋಪ ಮಾಡಿದ ಟ್ರಸ್ಟಿಗಳು ಹಣ ಕಳುವಿನ ದೃಶ್ಯವನ್ನು ಸಿಸಿಟಿವಿಯಲ್ಲಿ ತನಗೆ ತೋರಿಸಿಲ್ಲ. ಅಲ್ಲದೇ ಕಳ್ಳತನದ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರೂ ಕೂಡ ದಾಖಲಾಗಿಲ್ಲ. ಖಾಯಂ ನೌಕರನಾದ ತನ್ನನ್ನು ಕೆಲಸದಿಂದ ತೆಗೆಯಬೇಕು ಎಂಬ ಉದ್ದೇಶದಿಂದ ಕಳ್ಳತನದ ಆರೋಪ ಮಾಡಿ, ಬೆದರಿಸಿ ಬಲವಂತವಾಗಿ ರಾಜೀನಾಮೆ ಪಡೆದಿದ್ದಾರೆ ಎಂದು ಮಂಜುನಾಥ್ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣ

ಸಿಐಡಿಯಿಂದ ಬಿ–ರಿಪೋರ್ಟ್ ಸತ್ಯಕ್ಕೆ ಸಂದ ಜಯ

ಮೈಸೂರು, ಜು.22(ಎಂಟಿವೈ)– ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಬಿ–ರಿಪೋರ್ಟ್ ಸಲ್ಲಿಸಿರುವುದು ಸತ್ಯಕ್ಕೆ ಸಂದ ಜಯ. ಅಲ್ಲದೆ, ಪಕ್ಷದ ಕಾರ್ಯಕರ್ತ ರಲ್ಲಿದ್ದ ಮುಜುಗರ ನಿವಾರಣೆಯಾಗಿದೆ ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ತಿಳಿಸಿದ್ದಾರೆ.



ಆಷಾಢ ಕೊನೆ ಶುಕ್ರವಾರದ ಹಿನ್ನೆಲೆಯಲ್ಲಿ ಕುಟುಂಬದ ಸದಸ್ಯರೊಂದಿಗೆ ಚಾಮುಂಡಿಬೆಟ್ಟಕ್ಕೆ ಆಗಮಿಸಿ ದೇವಿಯ ದರ್ಶನ ಪಡೆದ ಪಡೆದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಪ್ರಕರಣದಲ್ಲಿ ನನ್ನದು ಎಳ್ಳಷ್ಟು ಪಾತ್ರವಿರಲಿಲ್ಲ. ಈ ಹೇಳಿಕೆಯನ್ನು ಪ್ರಕರಣ ನಡೆದ ದಿನ ಹಾಗೂ ನನ್ನ ಮೇಲೆ ಊಹಾಪೋಹದ ಆರೋಪ ಕೇಳಿ ಬಂದ ದಿನವೇ ಹೇಳಿದ್ದೆ. ಆ ಪ್ರಕರಣ ನಡೆದಾಗ ನಾನು ಮೈಸೂರಲ್ಲೇ ಇದ್ದೆ. ಚಿಕ್ಕ ವಯಸ್ಸಲ್ಲೇ ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಮೇಲೆ ಎಫ್ಐಆರ್ ದಾಖಲಾದ ಬಳಿಕ ಹಲವು ಮಂದಿ ಹಿತೈಷಿಗಳು, ಪಕ್ಷದ ಹಿರಿಯ ನಾಯಕರು ರಾಜಿನಾಮೆ ನೀಡದಂತೆ ಸಲಹೆ ನೀಡಿದ್ದರು. ಆದರೂ, ನಾನು ಪಕ್ಷದ ರಾಷ್ಟ್ರೀಯ ನಾಯಕರೊಂದಿಗೆ ಮೊಬೈಲ್‌ನಲ್ಲೇ ಮಾತನಾಡಿ, ರಾಜೀನಾಮೆ ನೀಡುತ್ತೇನೆಂದು ಹೇಳಿ ಮೈಸೂರಿಂದ ಹಿಂದಿರುಗಿದ್ದೆ. ಆದರೆ, ಈಗ ಸತ್ಯ ಬಯಲಾಗಿದೆ. ಆತ್ಮಹತ್ಯೆಗೆ ಕಾರಣವೇನೆಂಬುದನ್ನು ನೂರಾರು ಪುಟಗಳ ವರದಿಯಲ್ಲಿ ಉಲ್ಲೇಖವಾಗಿದೆ ಎಂದರು.

ಸಂತೋಷ್ ಆತ್ಮಹತ್ಯೆ ಮಾಡಿಕೊಂಡಾಗ ನನಗೆ ನೆನಪಾಗಿದ್ದು, ಆತನ ಚಿಕ್ಕ ಮಗು ಹಾಗೂ ಪತ್ನಿ. ಅವರೇನು ಪಾಪ ಮಾಡಿದ್ದರು ಎನಿಸಿತ್ತು. ಇಷ್ಟೆಲ್ಲಾ ಅನುಕಂಪಪಟ್ಟರೂ ನನ್ನ ಮೇಲೆ ಆರೋಪ ಹೊರಿಸಲಾಗಿತ್ತು. ಬಿ–ರಿಪೋರ್ಟ್ ಸಲ್ಲಿಕೆ ಆಗಿರುವುದಕ್ಕೆ ಕಾಂಗ್ರೆಸ್ ನಾಯಕರ ಹೇಳಿಕೆಯನ್ನು ಗಮನಿಸಿದ್ದೇನೆ. ರಾಜಕಾರಣಕ್ಕಾಗಿ ಹೇಳಿಕೆ ನೀಡುವುದು ಸಾಮಾನ್ಯ. ಆದರೆ 5 ವರ್ಷ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಂತಹ ನಾಯಕರು ನನ್ನ ಹೇಳಿಕೆ ಪಡೆಯದೇ ತನಿಖೆ ನಡೆಸಲಾಗಿದೆ. ರಾಜಕೀಯ ಪ್ರಭಾವ ಬಳಸಲಾಗಿದೆ ಎಂದು ಆರೋಪ ಮಾಡಿರುವುದು ಖಂಡನೀಯ ಎಂದು ಕಿಡಿಕಾರಿದರು. ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಜೋಗಿ ಮಂಜು ಸೇರಿದಂತೆ ಇನ್ನಿತರಿದ್ದರು.



ಶ್ರದ್ಧಾಂಜಲಿ

ಇವರು ದಿ. 22.07.2022 ರಂದು ದೈವಾಧೀನರಾಗಿದ್ದು ಮೃತರ ಅಂತ್ಯ ಕ್ರಿಯೆಯನ್ನು ದಿ. 23.07.2022 ರಂದು ಮಧ್ಯಾಹ್ನ 12 ಗಂಟೆಗೆ ಕುಂಬಾರ ಕೊಪ್ಪಲು, ನಿಂಗಯ್ಯನಕೆರೆ ಪಕ್ಕದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ರಾಜಪ್ಪ ಕೆ
ಕೆ.ಆರ್.ಆಸ್ಪತ್ರೆ ನಿವೃತ್ತ ನೌಕರರು

ದುಃಖತಪ್ತರು: ಕುಟುಂಬವರ್ಗ

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

Before the Hon'ble Family Court, Kalpetta

O.P. 363/2020

Khadeeja : Petitioner
Thambrees Muhammed @ Thambrees Khan, Aged 42 Years, S/o Nazar Khan @ Nazir Khan, Palally, Mandya Taluk, Sree rangapattana (Now residing at Rahmath Mahalla, Chamaraj Nagar, Mysore, Karnataka)
Respondent

Draft Publication filed by P.Jameela, Advocate For the Petitioner in the above matter
the above case stands posted for the appearance of the respondent on 25.07.2022.
Humblysubmitted
Dated this the 20th day of July 2022

Sd/-P.Jameela
Advocate for the petitioner

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯಿತಿ ಕಾರ್ಯಾಲಯ, ರಮ್ಮನಹಳ್ಳಿ, ಮೈಸೂರು ಜಿಲ್ಲೆ.
Email id: itstaff_ulb_rammanahalli@yahoo.com
Ph:0821-2001931 www.rammanahalli.mrc.gov.in

ಸಂ:ಪ.ಪಂ.ರ/ಸಿ.ಆರ್–22/2022–23 ದಿನಾಂಕ: 21.07.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಕೆಡಬ್ಲ್ಯೂ–1ರ ನಿಯಮದನ್ವಯ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕೆ.ಎಸ್.ಆರ್.ಟಿ.ಸಿ ಬಡಾವಣೆಯಲ್ಲಿ ಕೊಳವೆಬಾವಿ ಕೊರೆದು ಪಂಪ್ ಮೋಟರ್ ಅಳವಡಿಸುವುದು, ಅಂದಾಜು ವೆಚ್ಚ 2.35 ಲಕ್ಷ ಕಾಮಗಾರಿ ಬಗ್ಗೆ ಅರ್ಹ ನೋಂದಾಯಿತ ಸಿವಿಲ್ ಗುತ್ತಿಗೆದಾರರಿಂದ ಕೆಡಬ್ಲ್ಯೂ–1ರಂತೆ ಐಟಂವಾರ್ ದರಗಳಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಅರ್ಜಿ ಸಲ್ಲಿಸಲು ಅಂತಿಮ ದಿ:28.07.2022 & ಟೆಂಡರ್ ಸಲ್ಲಿಸಲು ಕೊನೆಯ ದಿ: 29.07.2022 ರ ಸಂಜೆ 4.00 ಗಂಟೆ, ಸ್ವೀಕೃತವಾದ ಟೆಂಡರ್‌ಗಳನ್ನು ತೆರೆಯುವ ದಿ: 29.07.2022 ರ ಸಂಜೆ 5.00 ಗಂಟೆಗೆ, ಟೆಂಡರ್ ಶೆಡ್ಯೂಲ್ ಬೆಲೆ ರೂ.500/– ಮತ್ತು ಇ.ಎಂ.ಡಿ ಮೊತ್ತ ರೂ. 5700.00 ಗಳನ್ನು ಡಿ.ಡಿ ಮುಖಾಂತರ ಮುಖ್ಯಾಧಿಕಾರಿಯವರ ಹೆಸರಿಗೆ ನಮೂದಿಸಿ ಶೆಡ್ಯೂಲ್ ಜೊತೆಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು ಕಛೇರಿ ವೇಳೆಯಲ್ಲಿ ಈ ಕೆಳಗೆ ಸಹಿ ಮಾಡಿದವರಲ್ಲಿ ಪಡೆಯುವುದು. ಅಂತಿಮ ಸಮಯ ಕಳೆದು ಬಂದಿರುವ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ. ಈ ಟೆಂಡರನ್ನು ಪರಿಗಣಿಸುವ ಮತ್ತು ತಿರಸ್ಕರಿಸುವ ಹಕ್ಕನ್ನು ಪಟ್ಟಣ ಪಂಚಾಯಿತಿ ಕಾಯ್ದಿರಿಸಿಕೊಂಡಿದೆ.

ಸಹಿ/– ಆಡಳಿತಾಧಿಕಾರಿ, ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ
ಸಹಿ/– ಮುಖ್ಯಾದಿಕಾರಿ, ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ
DIPR/DD-MYS/MCA/280/2022-23

GSSS
Geetha Bharathi Higher Primary School
Bantwal Madhava Shenoy High School
Badriprasadji Pre-University College
Siddartha Nagar, Mysuru - 570 011.

APPOINTMENT NOTIFICATION

Applications are invited from Eligible Candidates for the following posts:

Institution	Post	Qualification
♦ GSSS PRIMARY SCHOOL ♦ GSSS HIGH SCHOOL (English Medium)	Asst. Teachers	
	1. Nursery	NTT / MTT
	2. Sanskrit	M.A in Sanskrit or Vidwath Uttama
	3. Science	M.Sc with B.Ed - C/B; M.Sc with B.Ed - P/M with Minimum 2 years of experience
	4. ATL Instructor	Diploma in Electronics / Electrical; B.E in Electronics
GSSS BADRIPRASADJI PRE-UNIVERSITY COLLEGE (English Medium)	Lecturers	
	1. Business Studies	M.Com with B.Ed
	2. Computer Science	MCA / M.Sc in Comp. Science with B.Ed with atleast 5 years of experience

a) Kindly superscribe on the envelope the post applied for.
b) Salary is not a constraint for deserving candidates.
c) Fluency in English is Mandatory.
d) Post or courier your resume attached with all relevant documents to **The Hon. Secretary, GSSS(R), Siddarthanagar, Mysuru - 570 011 on or before 04-08-2022.**

Dr. M. Jagannatha Shenoi, President
Smt. Vanaja B. Pandit, Hon. Secretary

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005

ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ–5:113:2022–23 ದಿನಾಂಕ: 21–07–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 69(2)(3)&(4)ರಡಿ

ಮೈಸೂರು ತಾಲ್ಲೋಕು, ಕಸಬಾ ಹೋಬಳಿ, ಮೈಸೂರು ಗ್ರಾಮದ ಸರ್ವೆ ನಂ. 63/2 ರ 00–05 ಗುಂಟೆ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 69(2)(3) & (4)ರಡಿ ಉದ್ಯಾನವನ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ನಿಗದಿಪಡಿಸುವಂತೆ ಶ್ರೀ ಬಿ.ಎನ್.ಸದಾನಂದ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಣಿಜ್ಯ ಅಭಿವೃದ್ಧಿಗಳು ಬಂದಿದ್ದು, ಮುಖ್ಯ ರಸ್ತೆಗೆ ಹೊಂದಿಕೊಂಡಿರುವುದರಿಂದ ಸದರಿ ಜಮೀನಿನ ಭೂ ಉಪಯೋಗವನ್ನು ವಾಣಿಜ್ಯ ಉದ್ದೇಶಕ್ಕೆ ನಿಗಧಿಪಡಿಸಿದಲ್ಲಿ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುತ್ತಿರುವ ಸಾರ್ವಜನಿಕರಿಗೆ ಅಗತ್ಯ ವಸ್ತುಗಳನ್ನು ಖರೀದಿಸಲು ಅನುಕೂಲವಾಗುತ್ತದೆ, "ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ ಮತ್ತು ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ. ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಪ್ರದೇಶದ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.



ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಇಡಿಯಿಂದ ಸೋನಿಯಾ ಗಾಂಧಿ ತನಿಖೆ ವಿರೋಧಿಸಿ

ಮಡಿಕೇರಿಯಲ್ಲಿ ಕಾಂಗ್ರೆಸ್ ಪ್ರತಿಭಟನೆ



ಮಡಿಕೇರಿ,ಜು.22– ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ಇಡಿ ತನಿಖೆಗೆ ಒಳಪಡಿಸುವ ಮೂಲಕ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ರಾಜಕೀಯ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಜನರಲ್ ತಿಮ್ಮಯ್ಯ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಬಿಜೆಪಿ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಬಿಜೆಪಿ ಸರಕಾರ ಕಾಂಗ್ರೆಸ್ ನಾಯಕರಿಗೆ ಕಿರುಕುಳ ನೀಡುವ ಮೂಲಕ ರಾಜಕೀಯವಾಗಿ ಕುಗ್ಗಿಸುವ ಪ್ರಯತ್ನ ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಲಕ್ಷ್ಮಣ್, ಇಡಿ ಸೋನಿಯಾ ಗಾಂಧಿ ವಿರುದ್ಧ ಎಫ್ಐಆರ್ ದಾಖಲಿಸದೇ ತನಿಖೆ ನಡೆಸುತ್ತಿದೆ ಆ ಮೂಲಕ ಕೇಂದ್ರ ಸರಕಾರ ತನಿಖಾ ಸಂಸ್ಥೆಗಳನ್ನು ಬಳಸಿ ಕೊಂಡು ಕಿರುಕುಳ ನೀಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸೋನಿಯಾ ಪಾತ್ರದ ಬಗ್ಗೆ ಬಹಿರಂಗಪಡಿಸಲಿ ಎಂದು ಅವರು ಒತ್ತಾಯಿಸಿದರು.

ದೇಶದಲ್ಲಿ ರೂಪಾಯಿ ಮೌಲ್ಯ ಪಾತಾಳಕ್ಕೆ ಕುಸಿದಿದೆ. ನಿರುದ್ಯೋಗ ಸಮಸ್ಯೆ ತಾಂಡವಾಡುತ್ತಿದೆ. ಈ ವೈಫಲ್ಯಗಳನ್ನು ಮರೆಮಾಚಲು ಕೇಂದ್ರ ಸರಕಾರ ಕಾಂಗ್ರೆಸ್ ನಾಯಕರಿಗೆ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಮಹಿಳಾ ಅಧ್ಯಕ್ಷೆ ಸುರಯ್ಯ ಅಬ್ರಾರ್, ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಕೆಪಿಸಿಸಿ ಪ್ರಮುಖರಾದ ಟಿ.ಪಿ.ರಮೇಶ್, ಎ.ಎಸ್.ಪೊನ್ನಣ್ಣ, ಡಾ. ಮಂಥರ್ ಗೌಡ, ವಕ್ಫ್ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಕೆ.ಎ.ಯಾಕುಬ್, ನಗರ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಕೆ.ಜಿ. ಪೀಟರ್ ಮತ್ತಿತರ ಪ್ರಮುಖರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಿರುಕು ಬಿಟ್ಟಿರುವ 2ನೇ ಮೊಣ್ಣಂಗೇರಿ ಗುಡ್ಡ ಪರಿಶೀಲಿಸಿದ ವಿಜ್ಞಾನಿಗಳು, ಎನ್‌ಡಿಆರ್‌ಎಫ್ ತಂಡ




ಮಡಿಕೇರಿ, ಜು.22– ತಾಲೂಕು 2ನೇ ಮೊಣ್ಣಂಗೇರಿ ಗ್ರಾಮದ ಗುಡ್ಡ ಪ್ರದೇಶದಲ್ಲಿ ಬಿರುಕು ಬಿಟ್ಟಿರುವ ಬಗ್ಗೆ ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ರಾಮಕೊಲ್ಲಿ ಪ್ರದೇಶಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಭೂ ವಿಜ್ಞಾನಿಗಳು, ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತರು ಮತ್ತು ಎನ್‌ಡಿಆರ್‌ಎಫ್ ತಂಡ ಭೇಟಿ ನೀಡಿ ಪರಿಶೀಲಿಸಿತು.

ಪರಿಶೀಲನೆ ನಡೆಸಲು ತೆರಳಿದ ಸಂದರ್ಭದಲ್ಲಿ ಮಳೆಯು ಹೆಚ್ಚಾದ ಕಾರಣ ಸ್ಥಳೀಯರು ಬಿರುಕು ಬಿಟ್ಟಿರುವ ಸ್ಥಳವನ್ನು ಮಳೆ ಕಡಿಮೆಯಾದ ನಂತರ ತೋರಿಸುವುದಾಗಿ ತಿಳಿಸಿದ ಮೇರೆಗೆ 2ನೇ ಮೊಣ್ಣಂಗೇರಿ ಗುಡ್ಡ ಪ್ರದೇಶದಲ್ಲಿ 2018 ನೇ ಸಾಲಿನಲ್ಲಿ ಬೆಟ್ಟ ಕುಸಿದಿದ್ದ ಪ್ರದೇಶ ಹಾಗೂ ಬಿರುಕು ಬಿಟ್ಟಿರುವ ಪ್ರದೇಶಗಳನ್ನು ತಂಡವು ಪರಿಶೀಲಿಸಿತು.

ಈ ಪ್ರದೇಶದಲ್ಲಿ 2018ನೇ ಸಾಲಿನಲ್ಲಿ ಗುಡ್ಡ ಕುಸಿದಿದ್ದ ಪ್ರದೇಶದ ಒಂದು ಭಾಗದಲ್ಲಿ ಅಲ್ಪ ಪ್ರಮಾಣದ ಮಣ್ಣು ಜರಿದಿದ್ದು ಹಾಗೂ ಪಕ್ಕದ ಗುಡ್ಡದಲ್ಲಿ ಸಣ್ಣ ಪ್ರಮಾಣದ ಬಿರುಕು ಬಿಟ್ಟಿರುವುದು ಕಂಡುಬಂದಿದೆ.

ಗುಡ್ಡದ ಕೆಳಭಾಗದ ಪೂರ್ವ ದಿಕ್ಕಿನಲ್ಲಿ ಸುಮಾರು 900 ಮೀಟರ್ ದೂರದಲ್ಲಿ ಅಂದಾಜು 30 ಮನೆಗಳಿರುತ್ತದೆ. ಮಳೆ ಹೆಚ್ಚಾಗಿರುವ ಕಾರಣ ಹಾಗೂ ಮಂಜು ಕವಿದಿರುವುದರಿಂದ ಬಿರುಕು ಬಿಟ್ಟಿರುವ ಪ್ರದೇಶಗಳನ್ನು ಅಧ್ಯಯನ ನಡೆಸಲು ಸಾಧ್ಯವಾಗಿಲ್ಲ, ಮಳೆ ಕಡಿಮೆಯಾದ ನಂತರ ಬಿರುಕು ಬಿಟ್ಟಿರುವ ಪ್ರದೇಶಗಳನ್ನು ಅಧ್ಯಯನ ನಡೆಸಲಾಗುವುದು ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ಶ್ರೀನಿವಾಸ್ ಅವರು ತಿಳಿಸಿದ್ದಾರೆ.

ಮನೆಯ ಅಂಗಳದಲ್ಲಿ ಕಾಡಾನೆಗಳ ದಾಂಧಲೆ

ಮಡಿಕೇರಿ,ಜು.22– ಮನೆಯ ಅಂಗಳದಲ್ಲಿ ಕಾಡಾನೆಗಳ ಹಿಂಡು ದಾಂಧಲೆ ನಡೆಸಿರುವ ಘಟನೆ ನೆಲ್ಯಹುದಿಕೇರಿಯಲ್ಲಿ ನಡೆದಿದೆ. ಬೆಳೆಗಾರ ದಿ.ಸಿ.ಎಂ.ಕಾವೇರಪ್ಪ ಅವರ ಮನೆಯಂಗಳಕ್ಕೆ ಲಗ್ಗೆ ಇಟ್ಟ ಕಾಡಾನೆಗಳು ಹೂವಿನ ಕುಂಡ, ನೀರಿನ ಪೈಪ್ ಮತ್ತು ಟ್ಯಾಂಕ್‌ಗಳಿಗೆ ಹಾನಿಗೊಳಿಸಿವೆ. ಮನೆಯಲ್ಲಿ ಯಾರೂ ಇಲ್ಲದ ಕಾರಣ ಯಾವುದೇ ಅನಾಹುತ ಸಂಭವಿಸಿಲ್ಲ.

ಅತ್ತಿಮಂಗಲ ಅಭ್ಯತ್ ಮಂಗಲ, ನೆಲ್ಯಹುದಿಕೇರಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಕಾಡಾನೆಗಳು ಬೀಡು ಬಿಟ್ಟಿದ್ದು, ಆತಂಕವನ್ನು ಸೃಷ್ಟಿಸಿವೆ. ಅತ್ತಿಮಂಗಲದಲ್ಲಿ ಎರಡು ಕಾಡಾನೆಗಳು ಮರಿ ಹಾಕಿದ್ದು, ಮರಿಗಳೊಂದಿಗೆ ಗಂಡು ಮತ್ತು ಹೆಣ್ಣಾನೆಗಳು ಘೀಳಿಡುತ್ತಾ ಸಂಚರಿಸುತ್ತಿವೆ. ಹಲವು ಕಾಫಿ ತೋಟಗಳಿಗೆ ಹಾನಿ ಮಾಡಿವೆ. ಗ್ರಾಮಸ್ಥರು ಜೀವವನ್ನು ಕೈಯಲ್ಲಿ ಹಿಡಿದು ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ತಕ್ಷಣ ಅರಣ್ಯ ಇಲಾಖೆ ಎಚ್ಚೆತ್ತುಕೊಂಡು ಆನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಜಿಎಸ್‌ಟಿ ವಿರೋಧಿಸಿ ಪ್ರತಿಭಟನೆ



ಸೋಮವಾರಪೇಟೆ, ಜು.22– ಕೇಂದ್ರ ಸರ್ಕಾರದ ಬೆಲೆ ಏರಿಕೆ ಮತ್ತು ಜಿಎಸ್‌ಟಿ ವಿರೋಧಿಸಿ ಇಲ್ಲಿನ ಪುಟ್ಟಪ್ಪ ವೃತ್ತದಲ್ಲಿ ಶುಕ್ರವಾರ ಎಸ್‌ಡಿಪಿಐ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರ ಜಿಎಸ್‌ಟಿ ಜಾರಿಗೆ ತರುವ ಮೂಲಕ ಹೆಚ್ಚಿನ ತೆರಿಗೆ ವಸೂಲಿ ಮಾಡುತ್ತಿದೆ. ದಿನಬಳಕೆಯ ವಸ್ತುಗಳು ಸೇರಿದಂತೆ ಎಲ್ಲ ವಸ್ತುಗಳ ಮೇಲೆ ತೆರಿಗೆ ಹೆಚ್ಚಿಸುವ ಮೂಲಕ ಜನಸಾಮಾನ್ಯರು ಜೀವನ ನಡೆಸಲು ಪರದಾಡುತ್ತಿವಂತೆ ಮಾಡಲಾಗಿದೆ. ಕೂಡಲೇ ಜಿಎಸ್‌ಟಿ ಕೈಬಿಡಬೇಕೆಂದು ಪ್ರತಿಭಟನಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್‌ಡಿಪಿಐ ನಗರ ಘಟಕದ ಅಧ್ಯಕ್ಷ ಬಷೀರ್(ಪುತ್ತು), ಕಾರ್ಯದರ್ಶಿ ಇಮ್ರಾನ್, ಜಿಲ್ಲಾ ಸಮಿತಿ ಸದಸ್ಯ ಕಬೀರ್, ಐಗೂರು ಗ್ರಾಮ ಪಂಚಾಯಿತಿ ಸದಸ್ಯ ಜುನೈದ್, ಪಿಎಫ್ಐ ಜಿಲ್ಲಾ ಸಮಿತಿ ಕಾರ್ಯದರ್ಶಿ ಅಬ್ದುಲ್ ರೆಹಮಾನ್ ಸೇರಿದಂತೆ ಹಲವರು ಪಾಲ್ಗೊಂಡು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ರಾಜ್ಯದ ನಾನಾ ಭಾಗಗಳಿಗೆ ಕಾವೇರಿ ನೀರು ಕೊಡುವ ಕೊಡಗಿಗೆ ಟ್ಯಾಂಕರ್ ನೀರು...

ಕೊಡಗು ಕಾಂಗ್ರೆಸ್ ಉಸ್ತುವಾರಿ ವಿನಯ್‌ಕುಮಾರ್ ಸೊರಕೆ ವಿಷಾಧ



ವಿರಾಜಪೇಟೆ, ಜು.22– ಕೊಡಗಿನ ಕಾವೇರಿ ನದಿ ರಾಜ್ಯದ ಜನತೆಗೆ ಕುಡಿಯಲು ಮತ್ತು ಕೃಷಿಗೆ ನೀರು ಕೊಡುತ್ತಿದೆ. ಆದರೆ ಸರ್ಕಾರ ಕೊಡಗಿನ ಮಡಿಕೇರಿ ಹಾಗೂ ವಿರಾಜಪೇಟೆ ಜನರಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿದೆ ಎಂದು ಕೆಪಿಸಿಸಿ ಉಪಾಧ್ಯಕ್ಷ ಹಾಗೂ ಕೊಡಗು ಕಾಂಗ್ರೆಸ್ ಉಸ್ತುವಾರಿ ವಿನಯ್‌ಕುಮಾರ್ ಸೊರಕೆ ಬೇಸರ ವ್ಯಕ್ತಪಡಿಸಿದರು.

ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ವತಿಯಿಂದ ಪಟ್ಟಣದ ದೊಡ್ಡಟ್ಟಿ ಚೌಕಿಯಲ್ಲಿರುವ ಗಣಪತಿ ಆರ್ಕಿಡ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಇಲ್ಲಿನ ಜನಪ್ರತಿನಿಧಿಗಳು ಪ್ರತಿ ಮನೆಗೂ ಕಾವೇರಿ ನದಿಯ ನೀರಿನ ವ್ಯವಸ್ಥೆ ಕಲ್ಪಿಸಬಹುದಿತ್ತು ಆದರೆ ಯಾರೂ ಈ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಎಂದು ವಿಷಾಧ ವ್ಯಕ್ತಪಡಿಸಿದರು.

ಈ ಹಿಂದೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಅನ್ನಭಾಗ್ಯ, ಕ್ಷೀರ ಭಾಗ್ಯ ಸೇರಿದಂತೆ ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದರು. ಕಾಂಗ್ರೆಸ್ ಪಕ್ಷದ ಯೋಜನೆಗಳನ್ನು ಜನತೆಗೆ ತಿಳಿಸುವಂತ ಕೆಲಸವನ್ನು ಕಾರ್ಯಕರ್ತರು ಮಾಡಬೇಕು ಎಂದು ಅವರು ಹೇಳಿದರು. ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ ಅವರು ಮಾತನಾಡಿ, ಕೊಡಗಿನ ಕುಲದೇವತೆ ಕಾವೇರಿ ಮಾತೆಯ ವಿಚಾರದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಅವಹೇಳನ ಮಾಡಿದ ವಿಚಾರ ತಿಳಿದಾಗ ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕೆಂದು ನಾನೂ ಕೂಡಾ ಧ್ವನಿ ಎತ್ತಿದ್ದೆ ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ್ ಅವರು ಮಾತನಾಡಿದರು. ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಕಳೆದ 20 ವರ್ಷಗಳಿಂದ ಕೊಡಗಿನಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಆಯ್ಕೆ ಆಗದಿದ್ದರೂ ಕಾಂಗ್ರೆಸ್ ಕಾರ್ಯಕರ್ತರ ಉತ್ಸಾಹ ಕುಗ್ಗಿಲ್ಲ. ಸೋನಿಯ ಅವರ ಮೇಲೆ ಇಡಿ ತನಿಖೆ ವಿರೋಧಿಸಿ ಜು.23 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿಪೂಣಚ್ಚ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ಕೆ.ಕೆ.ಮಂಜುನಾಥ್ ಕುಮಾರ್, ಹಿಂದುಳಿದ ಘಟಕದ ಬ್ಲಾಕ್ ಅಧ್ಯಕ್ಷ ಸಿ.ಕೆ.ಪೃಥ್ವಿನಾಥ್, ಪೊನ್ನಂಪೇಟೆ ಅಧ್ಯಕ್ಷ ಬಾನಂಡ ಪೃಥ್ವಿ, ವಿರಾಜಪೇಟೆ ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ತಿಮ್ಮಯ್ಯ, ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ರಫೀಕ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಕೀಲ ನರೇಂದ್ರ ಕಾಮತ್, ಮೊಹಮದ್ ರಾಫಿ, ಹನೀಫ್ ಮಾತನಾಡಿದರು. ಸಭೆಯಲ್ಲಿ ಪಕ್ಷದ ಪಂಚಾಯಿತಿ ಸದಸ್ಯರು ಇದ್ದರು. ನಗರ ಕಾರ್ಯದರ್ಶಿ ಎಂ.ಎಂ. ಶಶಿಧರನ್ ಸ್ವಾಗತಿಸಿದರು.

ಜು.28ರಂದು ಗ್ರಾಮ ಸಭೆ

ಸೋಮವಾರಪೇಟೆ, ಜು.22– ತೋಳೂರು ಶೆಟ್ಟಳ್ಳಿ ಗ್ರಾಮ ಪಂಚಾಯಿತಿಯ 2022–23ನೇ ಸಾಲಿನ ಗ್ರಾಮ ಸಭೆ ಜು.28ರಂದು ಬೆಳಗ್ಗೆ 11ಕ್ಕೆ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ನಡೆಯಲಿದೆ ಎಂದು ಅಭಿವೃದ್ಧಿ ಅಧಿಕಾರಿ ಮಂಜುಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಡಳಿತ ಭವನದ ತಡೆಗೋಡೆಯಿಂದ ಸಮಸ್ಯೆ

ಕಿರಿದಾದ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿ, ಪ್ರಯಾಣಿಕರ ಪರದಾಟ



ನಾಪೋಕ್ಲು ಜು.22– ಮಡಿಕೇರಿಯ ಜಿಲ್ಲಾಡಳಿತ ಭವನದ ತಡೆಗೋಡೆ ಸಮಸ್ಯೆಯಿಂದಾಗಿ ವಾಹನಗಳನ್ನು ಪರ್ಯಾಯ ರಸ್ತೆಯಲ್ಲಿ ಸಂಚರಿಸುವಂತೆ ಮಾಡಿರುವುದರಿಂದ ಕಿರಿದಾದ ರಸ್ತೆಯಲ್ಲಿ ಬಸ್ಸೊಂದು ಕೆಟ್ಟು ನಿಂತ ಪರಿಣಾಮ ವಾಹನ ಸಂಚಾರಕ್ಕೆ ಅಡ್ಡಿಯಾಗಿ ಸಾರ್ವಜನಿಕರು ಪರದಾಡಬೇಕಾಯಿತು.

ಶುಕ್ರವಾರ ಬೆಳಗ್ಗಿನಿಂದ ಈ ರಸ್ತೆಯಲ್ಲಿ ಭಾಗಮಂಡಲ ನಾಪೋಕ್ಲು ಬೆಟ್ಟಗೇರಿ ಮತ್ತಿತರ ಭಾಗಗಳಿಗೆ ಸಂಚರಿಸಬೇಕಿದ್ದ ವಾಹನಗಳು ಕಿಮೀ ಗಟ್ಟಲೆ ರಸ್ತೆಯುದ್ದಕ್ಕೂ ಸಾಲುಗಟ್ಟಿ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣಗೊಂಡಿತು. ಮುಂಜಾನೆ 4 ಗಂಟೆಯಿಂದ 11 ಗಂಟೆಯವರೆಗೂ ವಾಹನ ತೆರವುಗೊಳಿಸಲು ಕಾಲವಕಾಶ ತೆಗೆದು ಕೊಂಡಿದ್ದರಿಂದ ರಸ್ತೆಯಲ್ಲಿ ವಾಹನ ಸವಾರರು ಪರದಾಡಿದರು.

ಜಿಲ್ಲಾಡಳಿತ ಭವನದ ತಡೆಗೋಡೆ ತಂದಿಟ್ಟ ಅವಾಂತರದಿಂದಾಗಿ ವಾಹನಗಳ ಸಂಚಾರಕ್ಕೆ ಮೇಕೆರಿ ಬೈಪಾಸ್‌ಗಾಗಿ ಸಂಪರ್ಕಕ್ಕೆ ಅವಕಾಶ ಒದಗಿಸಲಾಗಿತ್ತು. ಆದರೆ ಈ ರಸ್ತೆಯಲ್ಲೂ ಭೂಕುಸಿತ ಉಂಟಾಗಿ ಲಘು ವಾಹನಗಳಿಗೆ ಮಾತ್ರ ಸಂಚಾರ ವ್ಯವಸ್ಥೆ ಕಲ್ಪಿಸಿದ್ದು ಬೆಂಗಳೂರು ಹಾಗೂ ಮೈಸೂರು ಭಾಗಗಳಿಂದ ಬರುವ ಸರ್ಕಾರಿ ಬಸ್ಸುಗಳಿಗೆ ಕಾಟಕೇರಿ ಬೆಟ್ಟಗೇರಿ ಮೂರ್ನಾಡು ಮೂಲಕ ಸಂಚಾರ ವ್ಯವಸ್ಥೆ ಮಾಡಲಾಗಿತ್ತು. ಸಾಕಷ್ಟು ಪ್ರಯಾಣಿಕರು ಸಮಸ್ಯೆಯಲ್ಲಿ ಸಿಲುಕಿದ್ದು ಕ್ರೇನ್ ಮೂಲಕ ಐರಾವತ ಬಸ್ಸನ್ನು 11 ಗಂಟೆಗೆ ತೆರವು ಮಾಡಿದ ಬಳಿಕ ಸಂಚಾರ ಸುಗಮಗೊಂಡಿತು.

ಜು.28 ರಂದು ಪೊಲಿಂಕಾನ ಉತ್ಸವ

ಮಡಿಕೇರಿ, ಜು.22– ತಾಲೂಕಿನ ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಜು. 28 ರಂದು ಮಧ್ಯಾಹ್ನ 12 ಗಂಟೆಗೆ ಪೊಲಿಂಕಾನ ಉತ್ಸವ ನಡೆಯಲಿದೆ ಎಂದು ಭಗಂಡೇಶ್ವರ–ತಲ ಕಾವೇರಿ ದೇವಾಲಯಗಳ ಕಾರ್ಯ ನಿರ್ವಹಣಾಧಿಕಾರಿ ಬಿ.ಕೃಷ್ಣಪ್ಪ ಅವರು ತಿಳಿಸಿದ್ದಾರೆ.

ಸಿಪಿಐ ಪುಟ್ಟಸ್ವಾಮಿ ವರ್ಗಾವಣೆ ರದ್ದಿಗೆ ಆಗ್ರಹ



ಕೊಳ್ಳೇಗಾಲ, ಜು.22– ಚಾಮರಾಜನಗರ ಠಾಣೆಯ ವೃತ್ತ ನಿರೀಕ್ಷಕ ಪುಟ್ಟಸ್ವಾಮಿ ಅವರು ದಕ್ಷ ಅಧಿಕಾರಿಗಳಾಗಿದ್ದು, ಅವರ ವರ್ಗಾವಣೆ ರದ್ದುಗೊಳಿಸಿ ಅವರನ್ನು ಜಿಲ್ಲೆಯಲ್ಲೇ ಮುಂದುವರೆಸಬೇಕು ಎಂದು ಆಗ್ರಹಿಸಿ ಪುಟ್ಟಸ್ವಾಮಿ ಅಭಿಮಾನಿ ಬಳಗದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿ ತಹಸೀಲ್ದಾರ್ ಶಂಕರರಾವ್ ಅವರಿಗೆ ಮನವಿ ಸಲ್ಲಿಸಿದರು.

ಶುಕ್ರವಾರ ಬೆಳಗ್ಗೆ ತಾಲೂಕು ಕಚೇರಿ ಬಳಿ ಜಮಾಯಿಸಿದ ಅಭಿಮಾನಿಗಳು, ಪುಟ್ಟಸ್ವಾಮಿ ಅವರು ದಕ್ಷ ಅಧಿಕಾರಿಯಾಗಿ ಜಿಲ್ಲೆಯ ರಾಮಾಪುರ, ಕೊಳ್ಳೇಗಾಲ, ಮಾಂಬಳ್ಳಿ, ಚಾ.ನಗರ ಸೇರಿದಂತೆ ವಿವಿಧೆಡೆ ಉತ್ತಮ ಸೇವೆ ಸಲ್ಲಿಸಿದ್ದಾರೆ. ಅವರ ಸೇವೆಗಾಗಿಯೇ ರಾಷ್ಟ್ರಪತಿ, ಮುಖ್ಯಮಂತ್ರಿ ಪದಕಗಳನ್ನು ಸರ್ಕಾರ ನೀಡಿದೆ ಮುಖ್ಯಮಂತ್ರಿಗಳು ಕೂಡಲೇ ಅವರ ವರ್ಗಾವಣೆ ರದ್ದುಗೊಳಿಸಬೇಕು. ಇಲ್ಲದಿದ್ದರೆ ಜಿಲ್ಲಾದ್ಯಂತ ಅಭಿಮಾನಿ ಬಳಗದಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಬಳಗದ ಪ್ರಧಾನ ಕಾರ್ಯದರ್ಶಿ ಉಷಾರಾಣಿ, ಸಂಘಟನಾ ಕಾರ್ಯದರ್ಶಿ ಸುಮಲತಾ, ಕುಣಗಳ್ಳಿ ಗ್ರಾಪಂ ಅಧ್ಯಕ್ಷ ಸಿದ್ದಪ್ಪಸ್ವಾಮಿ, ಮುಳ್ಳೂರು ಗ್ರಾಪಂ ಅಧ್ಯಕ್ಷೆ ರಕ್ಕುರಮ್ಮ, ಮನೋಹರ್, ಶಿವಮಲ್ಲು, ಪುಟ್ಟಸ್ವಾಮಿ, ಕಿರಣ್, ರಾಜು, ಮಲ್ಲಿಕಾರ್ಜುನಸ್ವಾಮಿ, ಜಿನಕನಹಳ್ಳಿ ಶ್ರೀನಿವಾಸ್, ರಾಜಶೇಖರ್, ಕೆಂಪರಾಜು, ಚಂದ್ರು, ಕುಮಾರಸ್ವಾಮಿ ತೇರಂಬಳ್ಳಿ, ಸುಶೀಲಾ, ಮುತ್ತುರಾಜ್, ಭಾಗ್ಯಲಕ್ಷ್ಮಿ, ಸರಸ್ವತಿ, ಮಲ್ಲೇಶ್, ಜಯಲಕ್ಷ್ಮಿ, ಶಿವಮ್ಮ, ಚಂದ್ರು, ಕೆಂಪರಾಜು, ಜಯರಾಜು, ಬಸವರಾಜು ಇನ್ನಿತರರಿದ್ದರು.

ಸೋನಿಯಾ ಗಾಂಧಿ ಇಡಿ ವಿಚಾರಣೆ ಖಂಡಿಸಿ

ಕಾಂಗ್ರೆಸ್‌ನಿಂದ ಭಾರೀ ಪ್ರತಿಭಟನೆ



ಚಾಮರಾಜನಗರ, ಜು.22–ಜಾರಿ ನಿರ್ದೇಶನಾಲಯ(ಇಡಿ) ವಿಚಾರಣೆ ಹೆಸರಿನಲ್ಲಿ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಉದ್ದೇಶಪೂರ್ವಕವಾಗಿ ಕಿರುಕುಳ ನೀಡಲಾಗುತ್ತದೆ ಎಂದು ಆರೋಪಿಸಿ ನಗರದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಭಾರೀ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಾಜಿ ಸಚಿವ ಹಾಗೂ ಜಿಲ್ಲಾ ಕಾಂಗ್ರೆಸ್ ಉಸ್ತುವಾರಿ ಚೆಲುವ ನಾರಾಯಣಸ್ವಾಮಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ನೇತೃತ್ವದಲ್ಲಿ ಸಮಾವೇಶಗೊಂಡ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು, ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಕೆಲಕಾಲ ಮಾನವ ಸರಪಳಿ ನಿರ್ಮಿಸಿ ರಸ್ತೆತಡೆ ನಡೆಸಿದರು. ಈ ವೇಳೆ ಕೇಂದ್ರದ ವಿರುದ್ಧ ಘೋಷಣೆ ಕೂಗಿದರು. ಬಳಿಕ ಬಿ.ರಾಚಯ್ಯ ಜೋಡಿರಸ್ತೆ ಮಾರ್ಗ ಜಿಲ್ಲಾಡಳಿತ ಭವನಕ್ಕೆ ತೆರಳಿ ಮುಖ್ಯದ್ವಾರದ ಬಳಿ ಧರಣಿ ನಡೆಸಿದರು. ಸ್ಥಳಕ್ಕಾಗಮಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ ಅವರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಪ್ರತಿಭಟನಾಕಾರರು ಸಲ್ಲಿಸಲಾಯಿತು.

ಮಾಜಿ ಸಚಿವ ಚೆಲುವರಾಯಸ್ವಾಮಿ ಮಾತನಾಡಿ, ಬಿಜೆಪಿ ಸರ್ಕಾರ ವಿಪಕ್ಷಗಳ ಧ್ವನಿ ಅಡಗಿಸಲು ಸ್ವಾಯಂ ಸಂಸ್ಥೆಗಳಾದ ಐಟಿ, ಇಡಿ, ಸಿಬಿಐಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಪ್ರಧಾನಿ ನರೇಂದ್ರ ಕಳೆದ 8 ವರ್ಷಗಳ ಅವಧಿಯಲ್ಲಿ ಬೆಲೆ ಏರಿಕೆ, ನೋಟ್ ಬ್ಯಾನ್‌ನಿಂದ ಜನರನ್ನು ನರಳುವಂತೆ ಮಾಡಿದ್ದು, ಕಪ್ಪು ಹಣ ವಾಪಸ್ ತರುವಲ್ಲಿ ವಿಫಲರಾಗಿದ್ದಾರೆ ಎಂದು ದೂರಿದರು.

ಸಾಮಾನ್ಯ ಹಾಗೂ ಬಡವರ ಮೇಲೆ ಜಿಎಸ್‌ಟಿ ವಿಧಿಸಿ ಆಕ್ರೋಶಕ್ಕೆ ಒಳಗಾಗಿರುವ ಬಿಜೆಪಿ ನೇತೃತ್ವದ ಸರ್ಕಾರ ಎಲ್ಲಾ ರಂಗದಲ್ಲಿಯೂ ವಿಫಲವಾಗಿದೆ. ತನ್ನ ವೈಫಲ್ಯ ಪ್ರಶ್ನಿಸಿದ ವಿಪಕ್ಷಗಳ ವಿರುದ್ಧ ಐಟಿ, ಸಿಬಿಐಗಳನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿದೆ. ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷೆ ಸೋನಿಯಾಗಾಂಧಿ ಅವರನ್ನು ಉದ್ದೇಶ ಪೂರ್ವಕವಾಗಿ ಇಡಿ ತನಿಖೆಗೆ ಒಳಪಡಿಸಿ ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಶಾಸಕ ಸಿ.ಪುಟ್ಟರಂಗಶೆಟ್ಟಿ, ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಂಜುಳಾ ಮಾನಸ ಮಾತನಾಡಿದರು. ಪ್ರತಿಭಟನೆಯಲ್ಲಿ ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ಮಾಜಿ ಶಾಸಕರಾದ ಎಸ್.ಜಯಣ್ಣ, ಎಸ್.ಬಾಲರಾಜ್, ರಾಜ್ಯ ಕನಿಷ್ಠ ವೇತನಾ ಸಲಹಾ ಮಂಡಳಿ ಮಾಜಿ ಅಧ್ಯಕ್ಷ ಆರ್.ಉಮೇಶ್, ಕಾಂಗ್ರೆಸ್ ಜಿಲ್ಲಾ ಮಹಿಳಾ ಅಧ್ಯಕ್ಷೆ ಲತಾ ರಾಜಶೇಖರ್, ಚುಡಾ ಮಾಜಿ ಅಧ್ಯಕ್ಷ ಸುಹೇಲ್ ಅಲಿಖಾನ್, ಕೆಪಿಸಿಸಿ ಸದಸ್ಯ ಸೈಯದ್ ರಫಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ತೋಂಟೇಶ್, ಬಿ.ಎಂ.ಮುನಿರಾಜು, ರಾಜಶೇಖರ್, ದೇವರಾಜು, ಈಶ್ವರ, ಗುರುಸ್ವಾಮಿ, ಮಹಮ್ಮದ್ ಅಸ್ಗರ್, ಯುವ ಮುಖಂಡ ಗಣೇಶ್ ಪ್ರಸಾದ್, ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಆರ್. ಮಹದೇವು, ಚಿಕ್ಕಮಹದೇವು, ಜಿಲ್ಲಾ ಕಾಂಗ್ರೆಸ್ ವಕ್ತಾರ ಕೆರೆಹಳ್ಳಿ ನವೀನ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಅಜೀಜ್, ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ಸದಸ್ಯರಾದ ಎಸ್.ಸೋಮನಾಯಕ, ಕೆ.ಪಿ.ಸದಾಶಿವಮೂರ್ತಿ, ರಮೇಶ, ಎಪಿಎಂಸಿ ಮಾಜಿ ಅಧ್ಯಕ್ಷ ನಾಗೇಂದ್ರ, ಸದಸ್ಯರಾದ ಹೊಮ್ಮ ರವಿಶಂಕರ್, ಮುಖಂಡರಾದ ಕೊತ್ತಲವಾಡಿ ಸೋಮಲಿಂಗಪ್ಪ, ಕಾಗಲವಾಡಿ ಚಂದ್ರು, ಆಲೂರು ಪ್ರದೀಪ್, ಜಿಪಂ ಮಾಜಿ ಉಪಾಧ್ಯಕ್ಷ ಕೆ.ಎಸ್.ಮಹೇಶ್, ಮಾಜಿ ಸದಸ್ಯರಾದ ಕೆ.ಪಿ.ಸದಾಶಿವಮೂರ್ತಿ, ಸೋಮನಾಯಕ, ರಮೇಶ್, ಚಾಮುಲ್ ನಿರ್ದೇಶಕ ನಂಜುಂಡಸ್ವಾಮಿ, ಕೃಷ್ಣನಾಯಕ, ಮಧುವನಹಳ್ಳಿ ಶಿವಕುಮಾರ್, ಶ್ರೀಕಾಂತ, ಪೃಥ್ವಿ, ಮಹೇಶ್‌ಕುಮಾರ್, ಪುರುಷೋತ್ತಮ್ ಇತರರಿದ್ದರು.

ಬಿಲ್ವಾ ಮಹೇಶ್ ನೇಮಕ



ಚಾಮರಾಜನಗರ, ಜು.22–ಫೆಡರೇಷನ್ ಆಫ್ ಕರ್ನಾಟಕ ಗ್ರಾನೈಟ್ ಕ್ವಾರಿ ಅಂಡ್ ಸ್ಟೋನ್ ಇಂಡಸ್ಟ್ರೀಯ ರಾಜ್ಯ ಉಪಾಧ್ಯಕ್ಷರಾಗಿ ಚಾಮರಾಜನಗರದ ಉದ್ಯಮಿ ಜಿ.ಮಹೇಶ್ (ಬಿಲ್ವಾ ಮಹೇಶ್) ಆಯ್ಕೆಯಾಗಿದ್ದಾರೆ. ಬೆಂಗಳೂರಿನ ಆದರ್ಶ ಹ್ಯಾಮಿಲ್ಟನ್ ಹೋಟೆಲ್‌ನಲ್ಲಿ ನಡೆದ ಸಂಘದ ವಾರ್ಷಿಕ ಮಹಸಭೆಯಲ್ಲಿ ಈ ಆಯ್ಕೆ ನಡೆಯಿತು.

ಮಹದೇಶ್ವರ ಕಥಾಸಾರ ಕಾರ್ಯಕ್ರಮ


ದೊಡ್ಡವ್ವ ಕಾಳಮ್ಮ

ಗುಂಡ್ಲುಪೇಟೆ, ಜು.22–ತಾಲೂಕಿನ ಬೆಂಡರವಾಡಿ ಗ್ರಾಮದಲ್ಲಿ ಜು.23ರ ಶನಿವಾರ ಸಂಜೆ 6 ಗಂಟೆಗೆ ರಾಜ್ಯ ಪ್ರಶಸ್ತಿ ಪುರಸ್ಕೃತ ಡಾ. ಮಳವಳ್ಳಿ ಮಹದೇವಸ್ವಾಮಿ ಅವರಿಂದ ಮಹದೇಶ್ವರ ಕಥಾಸಾರವನ್ನು ಏರ್ಪಡಿಸಲಾಗಿದೆ ಎಂದು ಮುಖಂಡ ಪ್ರೊ. ಮಾದೇವ್ ಭರಣಿ ತಿಳಿಸಿದ್ದಾರೆ.

ಪ್ರೊ. ಮಾದೇವ್‌ಭರಣಿ ಅವರ ಮಾತೃಶ್ರೀ ದೊಡ್ಡವ್ವ ಕಾಳಮ್ಮನವರ ಪುಣ್ಯಾನುಮೋದನೆ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮಹದೇಶ್ವರ ಕಥಾಸಾರವನ್ನು ಏರ್ಪಡಿಸಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮನವಿ ಮಾಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಡಾ.ಬಿ. ಎನ್.ಮಂಜುನಾಥ್, ನಿವೃತ್ತ ಐಪಿಎಸ್ ಅಧಿಕಾರಿ ಡಾ.ಸುಭಾಷ್ ಭರಣಿ, ಚೇತವನದ ಬೌದ್ಧ ಭಿಕ್ಕು ಮನೋರಖ್ಖಿತ ಭಂತೇಜಿ, ಇತಿಹಾಸ ತಜ್ಞ ಪ್ರೊ. ಪಿ.ವಿ.ನಂಜರಾಜ ಅರಸು ಸೇರಿದಂತೆ ವಿವಿಧ ಗಣ್ಯರು ಭಾಗವಹಿಸುವರು ಎಂದು ತಿಳಿಸಿದ್ದಾರೆ.

ಪಡ್ಡೆ ಹುಡುಗರ ನಿಯಂತ್ರಣಕ್ಕೆ ಲಾಠಿ ಹಿಡಿದ ಪೊಲೀಸರು

ಯಳಂದೂರು, ಜು.22–ಪಟ್ಟಣದ ವಿವಿಧೆಡೆ ಪಡ್ಡೆ ಹುಡುಗರ ಹಾವಳಿ ಹೆಚ್ಚಿದ್ದು, ಅದನ್ನು ನಿಯಂತ್ರಿಸಲು ಪಟ್ಟಣ ಪೊಲೀಸರು ಲಾಟಿ ಹಿಡಿದು ಕಾರ್ಯಾಚರಣೆ ಆರಂಭಿದ್ದಾರೆ. ಪ್ರತಿದಿನ ಕಾಲೇಜು ಮುಂಭಾಗ, ಬಸ್ ನಿಲ್ದಾಣ, ಎಸ್‌ಬಿಐ ಸರ್ಕಲ್ ಸೇರಿದಂತೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾಲೇಜು ಆರಂಭದ ವೇಳೆ ಹಾಗೂ ಸಂಜೆಯ ಸಮಯದಲ್ಲಿ ಪುಂಡರು ಬೈಕ್ ಚಲಾಯಿಸಿ ವಿದ್ಯಾರ್ಥಿನಿಯರಿಗೆ ತೊಂದರೆ ನೀಡುತ್ತಿರುವ ಆರೋಪಗಳು ಕೇಳಿ ಬಂದಿದ್ದವು. ಇದನ್ನು ಗಂಭೀರವಾಗಿ ಪರಿಗಣಿಸಿದ ಪಟ್ಟಣ ಠಾಣೆ ಪೊಲೀಸರು, ನಿಗಾ ಇರಿಸಿದ್ದಾರೆ. ಇಂದು ಎಎಸ್ಐ ಶಂಕರ್, ಮಹದೇವಪ್ಪ, ಚಾಲಕ ಸೋಮಣ್ಣ ಲಾಠಿ ಹಿಡಿದು ಕಾಲೇಜು ಬಿಡುವ ಸಮಯದಲ್ಲಿ ಪಟ್ಟಣದ ವಿವಿಧೆಡೆ ಸಂಚರಿಸಿ, ಪುಂಡರ ಚಳಿಬಿಡಿಸಲು ಮುಂದಾದರು.

ಸರ್ಕಲ್ ಇನ್ಸ್‌ಪೆಕ್ಟರ್ ಎಂ.ಶಿವಮಾದಯ್ಯ ಪಟ್ಟಣದಲ್ಲಿರುವ ಎಲ್ಲಾ ಕಾಲೇಜುಗಳಿಗೆ ಭೇಟಿ ನೀಡಿ, ಪ್ರಾಂಶುಪಾಲರಿಗೆ ಅನ್ಯ ವ್ಯಕ್ತಿಗಳು, ಪಡ್ಡೆ ಹುಡುಗರು ಕಾಲೇಜು ಆವರಣದಲ್ಲಿ ಕಂಡುಬಂದರೆ ದೂರು ನೀಡಿ ಎಂದು ತಿಳಿಸಿದರು. ನಂತರ ವಿದ್ಯಾರ್ಥಿನಿಯರ ಜೊತೆಗೆ ಮಾತನಾಡಿ, ಬಸ್ ನಿಲ್ದಾಣ, ರಸ್ತೆಗಳಲ್ಲಿ ತೊಂದರೆ ನೀಡುವವರ ಬಗ್ಗೆ ತಮ್ಮ ಗಮನಕ್ಕೆ ತರುವಂತೆ ಸಲಹೆ ನೀಡಿದರು.

ರಾಮಾಪುರ ಗ್ರಾಪಂನಲ್ಲಿ ಗ್ರಾಮಸಭೆ


ಹನೂರು, ಜು.22– ನರೇಗಾ ಯೋಜನೆಯನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಳ್ಳುವುದರ ಮೂಲಕ ಗ್ರಾಮದ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಪಿಡಿಓ ಮಹದೇವಸ್ವಾಮಿ ತಿಳಿಸಿದರು.



ರಾಮಾಪುರ ಗ್ರಾಪಂ ಕಚೇರಿಯ ಆವರಣದಲ್ಲಿ ಆಯೋಜಿಸಿದ್ದ 2022–23ನೇ ಸಾಲಿನ ನರೇಗಾ ಯೋಜನೆಯ ಸಾಮಾಜಿಕ ಲೆಕ್ಕ ಪರಿಶೋಧನಾ ಗ್ರಾಮಸಭೆಯಲ್ಲಿ ಮಾತನಾಡಿದ ಅವರು, ನರೇಗಾ ಯೋಜನೆಯು ಗ್ರಾಮದ ಅಭಿವೃದ್ಧಿಗೆ ಸಹಕಾರಿಯಾಗಿದ್ದು, ಇದರಲ್ಲಿ ಪ್ರತಿ ಕುಟುಂಬವೂ ಉದ್ಯೋಗ ಪಡೆಯುವುದರ ಮೂಲಕ ಕೂಲಿ ಪಡೆಯಬಹುದಾಗಿದೆ. ಈ ಯೋಜನೆಯಡಿ ಸಮುದಾಯದ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿದೆ ಎಂದರು. ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ದ್ರಾಕ್ಷಾಯಿಣಿ, ಉಪಾಧ್ಯಕ್ಷ ಮುರುಗೇಶ್, ನೋಡಲ್ ಅಧಿಕಾರಿ ಮಹೇಶ್ ಹಾಗೂ ಗ್ರಾಮಸ್ಥರು ಉಪಸ್ಥಿತರದ್ದರು.

ಬುಲೆಟ್‌ಗೆ ಅಡ್ಡ ಬಂದ ನಾಯಿ: ಇಬ್ಬರು ಸಾವು


ಶಿವಮೂರ್ತಿ


ಮಹದೇವಪ್ಪ

ಚಾಮರಾಜನಗರ, ಜು. 22–ನಾಯಿ ಅಡ್ಡ ಬಂದ ಕಾರಣ ಬುಲೆಟ್ ಬೈಕ್‌ನಲ್ಲಿ ತೆರಳುತ್ತಿದ್ದ ಇಬ್ಬರು ಸವಾರರು ಆಯತಪ್ಪಿ ಬಿದ್ದು ಸಾವನ್ನಪ್ಪಿರುವ ಘಟನೆ ತಾಲೂಕಿನ ಮಾದಾಪುರ ಗ್ರಾಮದ ಬಳಿ ಶುಕ್ರವಾರ ಬೆಳಗ್ಗೆ ಸಂಭವಿಸಿದೆ.

ತಾಲೂಕಿನ ಕಟ್ನವಾಡಿ ಗ್ರಾಮದ ನಿವಾಸಿಗಳಾದ ಶಿವಮೂರ್ತಿ(44), ಮಹದೇವಪ್ಪ(55) ಮೃತಪಟ್ಟವರು. ಇವರಿಬ್ಬರು ಬುಲೆಟ್‌ನಲ್ಲಿ ಕಟ್ನವಾಡಿ ಗ್ರಾಮದಿಂದ ಚಾಮರಾಜನಗರ ಮಾರ್ಗವಾಗಿ ಮಹದೇಶ್ವರಬೆಟ್ಟಕ್ಕೆ ತೆರಳುತ್ತಿದ್ದರು. ಈ ವೇಳೆ ನಗರ ಹೊರವಲಯದ ಮಾದಾಪುರ ಬಳಿ ಬೈಕ್‌ಗೆ ನಾಯಿ ಅಡ್ಡ ಬಂದಿದೆ. ಪರಿಣಾಮ ಆಯತಪ್ಪಿ ಇವರಿಬ್ಬರು ರಸ್ತೆಗೆ ಬಿದ್ದರು. ಇದರಿಂದ ಶಿವಮೂರ್ತಿ ಸ್ಥಳದಲ್ಲೇ ಮೃತಪಟ್ಟರು. ತೀವ್ರವಾಗಿ ಗಾಯಗೊಂಡ ಮಹದೇವಪ್ಪ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ ಎಂದು ಸಂಚಾರಿ ಠಾಣೆ ಸಬ್‌ಇನ್ಸ್‌ಪೆಕ್ಟರ್ ನಂದೀಶ್ ಕುಮಾರ್ 'ಮೈಸೂರುಮಿತ್ರ'ನಿಗೆ ತಿಳಿಸಿದ್ದಾರೆ.

ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್, ಡಿವೈಎಸ್‌ಪಿ ಪ್ರಿಯಾದರ್ಶಿನಿ ಸಾಣೆಕೊಪ್ಪ, ಪಟ್ಟಣ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ತಿಮ್ಮರಾಜು, ಸಂಚಾರಿ ಠಾಣೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ನಂದೀಶ್‌ಕುಮಾರ್ ಭೇಟಿ ನೀಡಿ, ಪರಿಶೀಲಿಸಿದರು. ಪಟ್ಟಣ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟ್ರ್ಯಾಕ್ಟರ್ ಡಿಕ್ಕಿ ಹೊಡೆದು ಗಾಯಗೊಂಡಿದ್ದ ಯುವಕ ಸಾವು

ಕೊಳ್ಳೇಗಾಲ, ಜು.22– ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದ ಟ್ರ್ಯಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಗಾಯಗೊಂಡಿದ್ದ ಯುವಕ ಸಾವನ್ನಪ್ಪಿದ್ದಾನೆ.

ತಾಲೂಕಿನ ಉತ್ತಂಬಳ್ಳಿ ಗ್ರಾಮದ ರಂಗಸ್ವಾಮಿ ಪುತ್ರ ಮಗ ಸತ್ಯ(18) ಮೃತ ಯುವಕ. ಜು.20 ರಂದು ಟ್ರ್ಯಾಕ್ಟರ್ ಚಾಲಕ ನಾಗೇಂದ್ರ ಅವರು ಸತ್ಯನನ್ನು ಕೆಲಸಕ್ಕಾಗಿ ಬೆಂಡರಹಳ್ಳಿ ಗ್ರಾಮಕ್ಕೆ ಕರೆದೊಯ್ದಿದ್ದರು. ಜಮೀನಿನಲ್ಲಿ ಉಳುಮೆ ಮಾಡುವಾಗ ಗದ್ದೆಯ ತೆವರಿನ ಮೇಲೆ ಕುಳಿತಿದ್ದ ಸತ್ಯನಿಗೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದ. ತಕ್ಷಣ ಗಾಯಾಳುವನ್ನು ಕೊಳ್ಳೇಗಾಲ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಗಾಯಾಳು ಅಸುನೀಗಿದ್ದಾನೆ. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಶಫಿ ಅಹಮ್ಮದ್ ನಿಧನ



ಗುಂಡ್ಲುಪೇಟೆ ಜು.22–ಪಟ್ಟಣದ ಅಮೀರ್ ಜಾನ್ ರಸ್ತೆ ನಿವಾಸಿ ಶಫಿ ಅಹಮ್ಮದ್ (94) ಶುಕ್ರವಾರ ನಿಧನರಾದರು. ತಾಲೂಕು ಕಚೇರಿಯ ಕಂದಾಯ ಶಾಖೆಯ ನಿವೃತ್ತ ನೌಕರರಾಗಿದ್ದ ಮೃತರು ಕರ್ನಾಟಕ ಶಾಮಿಯಾನ ಸೆಂಟರ್ ಮಾಲೀಕ ಸಗೀರ್ ಅಹಮ್ಮದ್ ಸೇರಿದಂತೆ ಈರ್ವರು ಪುತ್ರರು ಮತ್ತು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 1 ಗಂಟೆಗೆ ಚಾಮರಾಜನಗರದಲ್ಲಿನ ಮುಸ್ಲಿಂ ಖಬ್ರಸ್ತಾನದಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿದೆ.

ಪುಟ್ಟಮಲ್ಲಮ್ಮ



ಕೊಳ್ಳೇಗಾಲ: ತಾಲೂಕಿನ ಮುಳ್ಳೂರು ಗ್ರಾಮದ ಪುಟ್ಟಮಲ್ಲಮ್ಮ(70) ಶುಕ್ರವಾರ ನಿಧನರಾದರು. ಮೃತರು ಓರ್ವ ಪುತ್ರಿ, ಮೂವರು ಪುತ್ರರನ್ನುಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಮುಳ್ಳೂರಿನ ಮೃತರ ಜಮೀನು ಜರುಗಲಿದೆ.

ಅಕ್ಟೋಬರ್‌ನಲ್ಲಿ ಮೈಸೂರು–ಬೆಂಗಳೂರು ಮುಖ್ಯ ಪಥ ಸಂಚಾರಕ್ಕೆ ಮುಕ್ತ

ಸಂಸದ ಪ್ರತಾಪ್‌ಸಿಂಹ ಸ್ಪಷ್ಟನೆ



ಮೈಸೂರು, ಜು. 22 (ಆರ್‌ಕೆ)–ಮೈಸೂರು–ಬೆಂಗಳೂರು ನಡುವಿನ 10 ಪಥದ (ಎಕ್ಸ್‌ಪ್ರೆಸ್‌ವೇ) ಮೇನ್ ಕ್ಯಾರಿಯೇಜ್ ಅನ್ನು 2022ರ ಅಕ್ಟೋಬರ್ ತಿಂಗಳಲ್ಲಿ ವಾಹನ ಸಂಚಾರಕ್ಕೆ ಮುಕ್ತಗೊಳಿಸ ಲಾಗುವುದು ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಸ್ಪಷ್ಟಪಡಿಸಿದ್ದಾರೆ.

ಈ ಬಾರಿಯ ದಸರಾ ವೇಳೆಗೆ ಮೈಸೂರು–ಬೆಂಗಳೂರು ದಶಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ವಿಳಂಬವಾಗುತ್ತಿರುವುದರಿಂದ ದಸರಾ ವೇಳೆಗೆ ಸಂಚಾರಕ್ಕೆ ಅವಕಾಶ ನೀಡಲು ಸಾಧ್ಯವಿಲ್ಲ ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ಅವರ ಹೇಳಿಕೆ ಕೆಲ ಮಾಧ್ಯಮಗಳಲ್ಲಿ ಪ್ರಕಟವಾಗಿದ್ದವು. ಅದೇ ರೀತಿ ಜುಲೈ 19ರಂದು ದಸರಾ ಉನ್ನತ ಮಟ್ಟದ ಸಮಿತಿ ಸಭೆ ನಡೆಸಿದ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹ ದಸರೆ ಒಳಗಾಗಿ ಈ ರಸ್ತೆ ಕಾಮಗಾರಿ ಪೂರ್ಣಗೊಳ್ಳುವುದಿಲ್ಲ ಎಂದು ತಿಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಪ್ರತಾಪ್‌ಸಿಂಹ, ಮೈಸೂರು–ಬೆಂಗಳೂರು ನಡುವಿನ ಎಕ್ಸ್‌ಪ್ರೆಸ್ ಕಾರಿಡಾರ್‌ನ ಮುಖ್ಯ ಪಥವನ್ನು ವಾಹನ ಸಂಚಾರಕ್ಕೆ ಮುಕ್ತಗೊಳಿಸುತ್ತೇವೆ. ಉಳಿದಂತೆ ಪ್ರವೇಶ ಮತ್ತು ನಿರ್ಗಮನದ ಕಾಮಗಾರಿಗಳು ಮಾತ್ರ ಸ್ವಲ್ಪ ವಿಳಂಬವಾಗಬಹುದು ಎಂದರು.

ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ, ಬಿಡದಿಯಂತಹ ಸ್ಥಳಗಳಲ್ಲಿ ಆಗಮನ–ನಿರ್ಗಮನ ಸ್ಥಳಗಳ ಕೆಲಸ ವಿಳಂಬವಾಗಲಿದೆ. ಆದರೆ ಕಾರಿಡಾರ್‌ನ ಮುಖ್ಯ ರಸ್ತೆಗಳಲ್ಲಿ ವಾಹನಗಳು ಓಡಾಡಲು ಅವಕಾಶ ಕಲ್ಪಿಸಲಾಗುವುದು. ಇದು ಸಂಪೂರ್ಣ ಕೇಂದ್ರ ಸರ್ಕಾರದ ಯೋಜನೆಯಾದ್ದರಿಂದ ನಮಗೆ ಕಾಮಗಾರಿ ಎಷ್ಟು ಪೂರ್ಣಗೊಂಡಿದೆ, ಎಲ್ಲೆಲ್ಲಿ ಬಾಕಿ ಇದೆ, ಯಾವಾಗ ಮುಗಿಯುತ್ತದೆ ಎಂಬುದರ ಸ್ಪಷ್ಟ ಮಾಹಿತಿ ಇದೆ ಎಂದರು.

ಈಗಾಗಲೇ ಶೇ.70ರಷ್ಟು ಕಾಮಗಾರಿ ಮುಗಿದಿದ್ದು, ಫ್ಲೈ ಓವರ್‌ಗಳು, ಕೆಳ ಸೇತುವೆಗಳು, ಸೇತುವೆಗಳ ಕಾಮಗಾರಿ ಬಾಕಿ ಉಳಿದಿವೆ. 117 ಕಿ.ಮೀ. ಉದ್ದದ ದಶಪಥ ರಸ್ತೆ ಕಾಮಗಾರಿಯನ್ನು ಎರಡು ಪ್ಯಾಕೇಜ್‌ಗಳಲ್ಲಿ ನಡೆಸುತ್ತಿದ್ದು, ಬೆಂಗಳೂರು– ನಿಡಘಟ್ಟ ಮತ್ತು ನಿಡಘಟ್ಟ–ಮೈಸೂರು ಪ್ಯಾಕೇಜ್‌ನಲ್ಲಿ ಕೆಲಸ ತ್ವರಿತವಾಗಿ ನಡೆಯುತ್ತಿದೆ ಎಂದು ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ಮೂಲಗಳು ತಿಳಿಸಿವೆ. 8172 ಕೋಟಿ ರೂ. ವೆಚ್ಚದ ಈ ಬೃಹತ್ ಕಾಮಗಾರಿ ಪೂರ್ಣಗೊಂಡಲ್ಲಿ ಮೈಸೂರು–ಬೆಂಗಳೂರು ನಡುವಿನ ಪ್ರಯಾಣದ ಸಮಯವು 3 ಗಂಟೆಯಿಂದ 90 ನಿಮಿಷಗಳಿಗೆ ಕಡಿತವಾಗಲಿದ್ದು, ಯಾವುದೇ ಅಡೆತಡೆಗಳಿಲ್ಲದೇ ಸುಲಲಿತವಾಗಿ ವಾಹನಗಳು ಸಂಚರಿಸಬಹುದಾಗಿರುತ್ತದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಪ್ರತಿಷ್ಠಿತ VI-Vodafone Idea ಟೆಲಿಕಾಂ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗ ಮತ್ತು ಹುಡುಗಿಯರು ಸಿಮ್ ಸೇಲ್ಸ್ ಮಾಡಲು, ಸೇಲ್ಸ್ ಪ್ರಮೋಟರ್ಸ್ ಬೇಕಾಗಿದ್ದಾರೆ. ವಿದ್ಯಾರ್ಹತೆ: 10th, PUC, ಯಾವುದೇ ಡಿಗ್ರಿ, ಸಂಬಳ: 14,000/- ರಿಂದ 18.000/- ವರೆಗೆ + ಇನ್‌ಸೆಂಟಿವ್. ಆಸಕ್ತರು ಇಂದೇ ಸಂಪರ್ಕಿಸಿ:
9886018298 / 9164208055

ಮನೆ ಬಾಡಿಗೆಗಿದೆ
8 ಚದರದ ಮನೆ ಕಛೇರಿ / ವಾಸದ ಉದ್ದೇಶಕ್ಕೆ ಮೈಸೂರು, ಕುವೆಂಪುನಗರ ಆರ್.ಎಂ.ಪಿ ಎದುರು ಪೂರ್ವ ದಿಕ್ಕಿಗೆ ಬಾಡಿಗೆಗಿದೆ. Veg Only
8197609290

ಮನೆ ಬಾಡಿಗೆಗೆ ಇದೆ
ಕುವೆಂಪುನಗರದ ಮೇಘಾ ಮೆಡಿಕಲ್ಸ್ ಡೌನ್ ರಸ್ತೆ, 3ನೇ ಕ್ರಾಸ್, E242, 2 ಬೆಡ್ ರೂಂ
9886973148
7975441365

ಶ್ರೀ ಗೌರಿಶಂಕರ ಟ್ರಾವೆಲ್ಸ್
12/8/22 (7/11 ದಿನ): ಅಯೋಧ್ಯ, ಕಾಶಿ, ಪ್ರಯಾಗ್‌ರಾಜ್, ಗಯಾ, ಬುದ್ಧಗಯಾ ಇತ್ಯಾದಿ. 8/10/22 (14/18 ದಿನ) : ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಹರಿದ್ವಾರ್, ದೆಹಲಿ ಇತ್ಯಾದಿ (ವಿಮಾನ ಟ್ರೈನ್ ಮತ್ತು ಎ.ಸಿ. ಬಸ್ಸು) ಊಟ, ವಸತಿ ಸೇರಿರುತ್ತದೆ.
9620002114

ಮನೆ ಆಲ್ಟ್ರೇಷನ್ ಮಾಡಿಕೊಡಲಾಗುತ್ತದೆ
ಗಾರೆಕೆಲಸ, ನಲ್ಲಿ ಕೆಲಸ, ಹೊಸ ಮನೆ ಕೆಲಸ ಮಾಡಿ ಕೊಡಲಾಗುತ್ತದೆ. ಸಿದ್ದರಾಜು:
8971160587
8310338551

HOUSE FOR SALE
GF & FF East Facing Clear Tittle Bank Loan available. Site Size 30x30 at Devinagar, Nanjangud. Brokers Excuse. 59 Lakhs (Negotiable)
8951778449

HOUSE FOR SALE
MUDA Property
30x20 N/F
2 Partion House in Hebbal 1st Stage, Near CITB Chowltry, Mysore
Price: 70 Lakhs
7348958463

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000
9740733021 / 9535028750

ಮುಡಾ ಅನುಮೋದಿತ ಸೈಟ್ ಮಾರಾಟಕ್ಕೆ
20X30, 30X40 & 30X50
ಪೊಲೀಸ್ ಲಾಔಟ್ ಮತ್ತು ಲಲಿತಾದ್ರಿಪುರ ನಡುವೆ
3999/– ಚದರ ಅಡಿ.
ರಿಂಗ್ ರೋಡ್ ಒಳಗೆ
ತಕ್ಷಣದ ನೋಂದಣಿ ಮತ್ತು ಬ್ಯಾಂಕ್ ಸಾಲ ಲಭ್ಯವಿದೆ
98800 65122 / 77956 09173

WANTED
Well Experienced Security Field Officer with Good Communication Wanted Immediately. Place of Work: Nanjangud
0821-4852002
9035269781

S.M GOLD
ಗಿರವಿ ಚಿನ್ನಾಭರಣ ಖರೀದಿ
22 ಕ್ಯಾರೆಟ್ ಗೋಲ್ಡ್ 10 ಗ್ರಾಂ ಚಿನ್ನಕ್ಕೆ 45500
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು, ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
6364414499

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ಬೇಕಾಗಿದ್ದಾರೆ
ಕಂಪ್ಯೂಟರ್ ಜ್ಞಾನ ಉಳ್ಳವರು ಹುಡುಗಿಯರು ಬೇಕಾಗಿದ್ದಾರೆ.
ಚೇತನ ಬುಕ್ಸ್ ಹೌಸ್
ನಾರಾಯಣಶಾಸ್ತ್ರಿ ರೋಡ್, ಮೈಸೂರು

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/- ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು DL, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
04045209698

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL
@ Srirampura & Gokulam
Call: 7829937469, 9901803394
ONLINE TRAINING AVAILABLE

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

V-GUARD

V-GUARD GEYSER
BEST OFFER PRIZE
Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

CHANGE OF NAME
I, Kavyashree R, D/o. K. Ramachandra Rao, residing at # 1281, 3rd Cross, Krishnamurthypuram, Mysuru-570004, have changed my name from Kavyashree R to Kavyashree R Rao on my own free will, in front of Notary Manimala N.S on 21/7/2022. I hereby declare that at all times hereafter in all the records, deeds and writings and in all the proceedings and transactions, I shall be called and signed by the name of Kavyashree R Rao
Sd/- Kavyashree R Rao

HOUSE FOR RENT/LEASE
3 BHK DUPLEX
Independent House, Vijayanagar 3rd Stage
2BHK INDEPENDENT HOUSE
For Lease in Srirampura
2BHK INDEPENDENT HOUSE
For Rent/ Lease Vijaynagar 2nd stage
2BHK HOUSE
For Rent In Vijayanagar 4th Stage
MOB : 9743532664

SITES FOR SALE
30X40
East Facing, 3rd Phase Vijayanagar 4th stage
MUDA ALLOTTED
MOB : 9743532664

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಾಳಿಂಬೆ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು.
Mob.: 9986926101

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

RS CONSTRUCTIONS Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,70,000 ಪ್ರತಿ ಚದರ
ಹಳೆಯ & ಹೊಸ ಮನೆಗಳಿಗೆ Water Proofing ಮಾಡಿಕೊಡಲಾಗುತ್ತದೆ
9538575009 / 8660384527

ಬೇಕಾಗಿದ್ದಾರೆ
ಯಾದವಗಿರಿ ಕೈಗಾರಿಕಾ ಪ್ರದೇಶ, ಮೈಸೂರು ಇಲ್ಲಿ ಇರುವ ವಾಹನ ವಿತರಣೆ ಮತ್ತು ಉತ್ಪಾದನಾ ಘಟಕಕ್ಕೆ ಸಹಾಯಕರು ಬೇಕಾಗಿದ್ದಾರೆ. ಉದ್ಯಮ ಮಾನದಂಡದ ಪ್ರಕಾರ ವೇತನ ನೀಡಲಾಗುವುದು. ಸಂಪರ್ಕಿಸಿ:
9448664411

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಾಡ್ಡ ಕಂಪನಿ, ಆಫೀಸ್‌ಗಳಿಗೆ ಮತ್ತು ಶೋರೂಂಗೆ ಕೆಲಸ ಮಾಡಲು 7th, SSLC, PUC, ITI, Diploma, Any Degree Pass/Fail ಆದವರಿಗೆ Cashier, Billing, Data Entry, Back office ಮತ್ತು Packers, Stores, Helpers, Line Incharge, Maintenance ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 14000/– ದಿಂದ 38000/– (ESI+PF+OT) ಸೇರಿ ಮತ್ತು ಅನ್ನಯ
7892878915 / 9353753194

ಸುವರ್ಣ ಯಾತ್ರ
7 ದಿನಗಳ ಕಾಶಿ ಪ್ರವಾಸ 09/08/22 ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್, ಶ್ರೀ ಬಾಬಾ ಬೈದ್ಯನಾಥ. 3 ದಿನಗಳ ಪುರಿ ಹಾಗೂ ಭುವನೇಶ್ವರ ಪ್ರವಾಸ 18/08/22 ಕೊಣಾರ್ಕ, ಕಂದಗಿರಿ ಹಾಗೂ ಉದಯಗಿರಿ, ಸಾಕ್ಷಿಗೋಪಾಲ್ 8 ದಿನಗಳ ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 03/09/22 ಮನೋಕಾಮನ, ಕಠ್ಮಂಡು, ಪಶುಪತಿನಾಥ, ಬುದ್ಧನೀಲಕಂಠ ಶಿರಡಿ ಪ್ರವಾಸ 3 ದಿನಗಳು 3 ಜ್ಯೋತಿರ್ಲಿಂಗ 13/08/22
9019462508 / 8970949434

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್, ಸೆಕ್ಯೂರಿಟಿ ಗಾರ್ಡ್ಸ್, ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ವಯೋಮಿತಿ 30 to 50 ವರ್ಷ, ESI & EPF ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9739166772 / 9739199355
9844235981

ಬೇಕಾಗಿದ್ದಾರೆ
ಕುಂಚಿಟಿಗರ ಸಂಘ (ರಿ), ಶ್ರೀಮತಿ ಆಲಮ್ಮನವರ ಛತ್ರ, ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು–570001. ಪುರುಷರು ಮಾತ್ರ, ಛತ್ರದ ಮೇಲ್ವಿಚಾರಕರ ಹುದ್ದೆ–1, ವಿದ್ಯಾರ್ಹತೆ (ದ್ವಿತೀಯ ಪಿಯುಸಿ) ಮತ್ತು ಅನುಭವವುಳ್ಳವರಾಗಿರಬೇಕು. ಕಾವಲುಗಾರ ಹುದ್ದೆ–1. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆ.
0821-2422973 / 9035389047

SITE FOR SALE
30x40
ಜ್ಞಾನಭಾರತಿ ಲೇಔಟ್ 2nd ಸ್ಟೇಜ್, ದಡದಹಳ್ಳಿ, East Facing, Site No.348 MUDA ಖಾತೆ ಆಗಿದೆ. ಬೆಲೆ : 21 ಲಕ್ಷ
9342123373

OFFICE SPACE AVAILABLE
(On a share basis / plug n play) located in Kuvempunagar, Mysore. Suitable for backend work, BPO etc. 20 + Computers with furniture, Conference hall, Z cabins available with parking.
Contact:
8095378733

FLAT FOR SALE / RENT
2BHK Flat for Sale / Rent/ Sub -LET Area 1370 sft. Spacious rooms, Near Sterling Vidyaranayapuram.
Contact:
9676887643
Chat on Watts app

HOUSE FOR SALE
30x40 MUDA, NEW 4BHK Duplex, East Facing Site, at Ramkrishnanagar, Near Andolana Circle - 1.55 Cr.
30x40 NEW 3BHK Duplex N/F Site & Door, Vijayanagar 4th Stage - 1.55 cr
(Brokers Excuse)
8660105902

SITES FOR SALE
20x30 - 12.60 Lakhs
30x40 - 25.20 Lakhs
Bank Loan upto 75%, Near Gurur Bus Stop, Ramabainagar, Mysore, DTCP approved, (Corporation Limits) 1.5 kms from J P Nagar Ring Road.
8660105902

S.K.CONSTRUCTION
ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ Plan ಮತ್ತು 3D Elevation ಸಹಿತ 90% Loan ಮಾಡಿಸಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

WANTED PIGMY AGENTS
Attractive interest Rate on your investement upto 11.55% pa, Shares are opened for more details contact:
9902729729
SAI MULTISTATE CREDIT CO-OPERATIVE SOCIETY
3rd Main, 5th Cross, Jayanagar, Mysore

ಬೇಕಾಗಿದ್ದಾರೆ
ಮೈಸೂರು ನಗರಾದ್ಯಂತ ದಿನಸಿ ವಸ್ತುಗಳನ್ನು ಸರಬರಾಜು ಮಾಡಲು ದ್ವಿಚಕ್ರ ವಾಹನ ಹಾಗೂ ವಾಹನ ಚಾಲನಾ ಪರವಾನಗಿ (ಲೈಸೆನ್ಸ್) ಹೊಂದಿರುವ 35 ವರ್ಷ ಒಳಪಟ್ಟಿರುವ ಪುರುಷರು ಬೇಕಾಗಿದ್ದಾರೆ. ವೇತನ: 15,000 ರಿಂದ 18,000 ವರೆಗೆ. ಸಂಪರ್ಕಿಸಿ:
9036461347

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಸಂಬಳ, ಊಟ, ವಸತಿಯೊಂದಿಗೆ 12,000 – 18,000 ರವರೆಗೆ
9739292222 / 0821-3563782
9035113222

FOR SALE
A)30x40 HD Kote Road 12 lakhs
B) 30x50 Saptamantruke Layout attch 28 L
C) 20x30 sites in Vj Ngr 4th stage
D) 20x30 G+1 New House University Layout
E)12 /36 House Near Vijay Bank Circle Kuvempu Nagar
PRAKRUTHI PROPERTIES
90359 90359 / 95386 90359

ವಾಹನ ಬೇಕಾಗಿದೆ
ವೃದ್ಧಾಶ್ರಮಕ್ಕೆ ಬಿಳಿ ಬಣ್ಣದ ಮಾರುತಿ ವ್ಯಾನ್ ಖರೀದಿಗೆ ಬೇಕಾಗಿರುತ್ತದೆ. ಮಾರಲು ಬಯಸುವವರು ದಯವಿಟ್ಟು ಸಂಪರ್ಕಿಸಿ.
8095224800

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಾಯಕಿ ಬೇಕಾಗಿದ್ದಾರೆ. ಸಂಪರ್ಕಿಸಿ.
9449380528
7026498386

SITES FOR SALE
in Kuberananda Sagara, Telicom layout, 30x40 & 40x60 North & South face. Contact: J K
8951144240

ಬೇಕಾಗಿದ್ದಾರೆ
ಪಿಗ್ಮಿ ಏಜೆಂಟ್ & ಫೀಲ್ಡ್ ಎಕ್ಸಿಕ್ಯೂಟಿವ್ 10th & II PUC ಪಾಸ್ & ಫೇಲ್ ವಿದ್ಯಾರ್ಹತೆ, ಹುಣಸೂರು ಸ್ಥಳೀಯರಿಗಾಗಿ ಮಾತ್ರ ಅವಕಾಶ. ಶ್ರೀ ಸಿದ್ದಾರ್ಥ ಹುಣಸೂರು ಅರ್ಬನ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ. ಚಂದ್ರು ಕಾಂಪ್ಲೆಕ್ಸ್ ಮೈಸೂರು ರೋಡ್, ಹುಣಸೂರು.
8296280922 / 8296281922

ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ
ಬೆಳ್ಳಿ ಬಿಜಿನೆಸ್ ಮಾಡಲು 30,000 ರೂ. ಬಂಡವಾಳ ಹೂಡಲು ಬೇಕಾಗಿದ್ದಾರೆ. ಹಾಗೂ ಮಾರ್ಕೆಟಿಂಗ್ ಮಾಡಲು ಹೋಂ ಡೆಲಿವರಿ ಮಾಡಲು ಪುರುಷರು ಬೇಕಾಗಿದ್ದಾರೆ.
ಸಂಪರ್ಕಿಸಿ:
8884848773
(ಪ್ರತಿ ದಿನ 300 ರೂ. ಸಂಬಳ ಕೊಡಲಾಗುವುದು)

FOR RENT
700 Sq.ft. Commercial Space and 2BHK House for Rent at J.P.Nagar, Koppaluru Main Road, Mysore
8867469275

PART TIME JOB
25 ವರ್ಷದೊಳಗಿನ ಮಹಿಳೆಯರು ಬೇಕಾಗಿದ್ದಾರೆ ಹಾಗೂ ವಿದ್ಯಾರ್ಥಿಗಳಿಗೆ ಹೆಚ್ಚಿನ ಆದ್ಯತೆ. ಯಾವುದೇ ಶುಲ್ಕ ಇರುವುದಿಲ್ಲ. ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ & ಶಿವಮೊಗ್ಗದವರಿಗೆ ಆದ್ಯತೆ.
9071593477 / 7829779063

WANTED
KIDSPACE play area Vijayanagar 3rd Stage ನಲ್ಲಿರುವ ಕಂಪನಿಗೆ
1. Receptionist (Basic Computer Knowledge)
2. Attender (SSLC Pass)
Female Candidates only. living in and around Vijayanagar 3rd Stage. Contact:
9900402149

ಮನೆ ಮಾರಾಟಕ್ಕಿದೆ
20x30 ರಾಮವಿಲಾಸ ರಸ್ತೆ, ಸದ್ವಿದ್ಯಾ ಸ್ಕೂಲ್ ಹಿಂಭಾಗ, ದೇವರಾಜ ಮೊಹಲ್ಲಾ, ಮೈಸೂರು. ಸಂಪರ್ಕಿಸಿ:
9945361079
ಅಂಗಡಿ ಬಾಡಿಗೆಗೆ ಶಿವಪ್ರಸಾದ್ ಹೋಟೆಲ್ ಹತ್ತಿರ, ದೇವರಾಜ ಮೊಹಲ್ಲಾ, ಮೈಸೂರು
9342866706

ಉಚಿತ ಉಚಿತ ಉಚಿತ
JESWA ಸಂಸ್ಥೆಯಿಂದ ಮೈಸೂರಿನಲ್ಲಿ OBC, Minarity, ಪರಿಶಿಷ್ಟ ಜಾತಿ (SC, ST) 35 ವರ್ಷ ಒಳಗೆ ಇರುವ ನಿರುದ್ಯೋಗ ಯುವತಿಯರು ಮತ್ತು ಮಹಿಳೆಯರಿಗೆ ಉಚಿತ ಬ್ಯೂಟಿ ಪಾರ್ಲರ್ ಮತ್ತು ಟೈಲರಿಂಗ್ ತರಬೇತಿ ನೀಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9844264134 / 9844736136

CHANGE OF NAME
I, Lavanya Unnamalai, Residing at #13/2, Vivekananda Road, Yadavagiri, Mysore-570020, have changed my name from Alagappan Unnamalai Alias Lavanya to Lavanya Unnamalai on my own free will sworn in before Notary C.N. Kamalamma.R Mysore vide affidavit Dated: 21/2/2022.
Sd/- Lavanya Unnamalai

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9108418233
9743217566

100 ಜನ ಮಹಿಳೆಯರು ಬೇಕಾಗಿದ್ದಾರೆ
ವಾರದ ಕಂತಿನಲ್ಲಿ ಜರ್ಮನ್ ಬೆಳ್ಳಿ ಪಡೆಯಿರಿ
ದೀಪ, ತಟ್ಟೆ, ಚೊಂಬು, ಕುಂಕುಮ, ಬಟಲು, ಲಕ್ಷ್ಮಿ ಮುಖವಾಡ, ಪಂಚಪಾತ್ರೆ, ಉದ್ಧರಣೆ ಇನ್ನಿತರ ಎಲ್ಲಾ ಪದಾರ್ಥಗಳು ವಾರಕ್ಕೆ 100 ರೂ. ರಂತೆ ಕಂತಿನಲ್ಲಿ ಕಟ್ಟಬೇಕು. 100 ಜನರು ಬೇಕಾಗಿದ್ದಾರೆ. ಸಂಪರ್ಕಿಸಿ ಜರ್ಮನ್ ಸಿಲ್ವರ್ ಪ್ಯಾಲೆಸ್. ಅಗ್ರಹಾರ, ಮೈಸೂರು. (ಒಂದು ಗ್ರಾಂಗೆ 10 ರೂಗಳು)
8073309855

BIG GROUP OF COMPANIES
gives you an opportunity to Earn 30,000/-to 1 Lakh per Month in your Free time or Part time. Age Criteria: Above 40 yrs to 65 yrs. Male or Female. Education Criteria: Minimum 2nd PUC.
7349600156 / 9845210772
7022322555

ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಭಾಧೆ, ಪ್ರೇತಾ ಭಾದೇ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಲಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಡ್ರೈವಿಂಗ್ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ: 15,000+W/o (8hrs), ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620667819 / 9880727819

CHANGE OF NAME
I, S. Monica Ahuja, W/o Gurubachan Singh, residing at #2512, 100 Feet Road, Opp. Vinayaka Nursing Home, Mandya City-571 401, after my marriage with Gurubachan Singh, I have changed my name as Manpreet Kaur, on my own free will, in front of Notary Jayalakshmi on 12.7.2022. I hereby declare that, I shall at all times hereafter be called in all records, deeds and upon all occasions and transactions whatsoever use and sign my name as Manpreet Kaur in place of S. Monica Ahuja. The names refer to above are one and the same i.e. my name only.
Sd/- Manpreet Kaur

AFFIDAVIT
I, Shataj Ara, residing at D.No. 2702/1, M.K.D.K. Road, Mandi Mohalla, Mysuru-570 001, my correct name is Shataj Ara only. However, at the time of opening account at Canara Bank, Tilaknagar branch my name was entered as Hatuj. I further declare this in front of Notary Syed Ameer on 19.7.2022, that Shataj Ara and Hatuj, is one and same person belongs to me only.
Sd/- Shataj Ara

ಕಳೆದಿದೆ
ಮಹದೇವನಾಯಕ, 1160/ಎ, 4ನೇ ಹಂತ, ವಿಜಯನಗರ, ಮೈಸೂರು, ಈ ಮೇಲ್ಕಂಡ ಸ್ವತ್ತಿನ (ನೋಂದಾಯಿತ ಶುದ್ಧ ಕ್ರಯ ಪತ್ರದ ಸಂಖ್ಯೆ) 06570/2017–18, ದಿನಾಂಕ: 27.11.2017), ವಿಜಯನಗರ 4ನೇ ಹಂತ, 2ನೇ ಘಟ್ಟ, ಬಡಾವಣೆಯ ನಿವೇಶನ ಸಂಖ್ಯೆ 1160/ಎ ಅಳತೆ 6.00 x 9.00 ಹೊಂದಿದ್ದು, ಸದರಿ ನಿವೇಶನದ ಕಂದಾಯ ಪತ್ರವು ದಿನಾಂಕ 05.06.2022 ರಂದು ಮಧ್ಯಾಹ್ನ ಹಿನಕಲ್ ಕಡೆಯಿಂದ ವಿಜಯನಗರ 4ನೇ ಹಂತದಲ್ಲಿರುವ ನನ್ನ ಮನೆಗೆ ಹೋಗುತ್ತಿರುವಾಗ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9986544622

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಕ್ಯಾಂಟೀನ್ ಅಡುಗೆ ಭಟ್ಟರು Cooking Assitant and House Keeping ಮಹಿಳೆಯರು ಬೇಕಾಗಿದ್ದಾರೆ. ಮೈಸೂರು
7829090366 / 8971662736

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು
ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶ ಪಾರಂಪರ್ಯ ಜ್ಯೋತಿಷ್ಯರು ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೇ ಇಲ್ಲ. ಫೋನಿನ ಮೂಲಕ ಪರಿಹಾರ.
9663466548

ಕೊಳ್ಳೇಗಾಲ ಜ್ಯೋತಿಷ್ಯರು ನಂ. 01 ಮೋಡಿ ಮಾಂತ್ರಿಕರು
ಪಂ. ಎಸ್. ಕುಮಾರಸ್ವಾಮಿ
Mob: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ–ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ಕರೆ ಮಾಡಿ ಬನ್ನಿ.
ಖಾಯಂ ವಿಳಾಸ: ಎ.ಟಿ.ಎಂ. ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್), ಬಿ.ಎನ್. ರೋಡ್, ಕೆ.ಎಸ್.ಆರ್.ಟಿ.ಸಿ. ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಛೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಶ್ರೀ ಮಹಾಕಾಳಿ ಜ್ಯೋತಿಷ್ಯರು ಪಂಡಿತ್ || ಹನುಮಂತರಾವ್
ನಿಮ್ಮೆಲ್ಲಾ ಸಮಸ್ಯೆಗಳಿಗೂ ಆಗಮಶಾಸ್ತ್ರದ ಪೂಜಾ ಪದ್ಧತಿಗಳಿಂದ ಪರಿಹಾರ ಮಾಡಿಕೊಡುತ್ತಾರೆ.
ಸಂಪರ್ಕಿಸಿ:
9686487402
ನಿಮ್ಮ ಸಮಸ್ಯೆಗಳನ್ನು ಗೌಪ್ಯವಾಗಿ ಇಡಲಾಗುವುದು

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೂರನೇ ಪುಟದಿಂದ

ಯಡಿಯೂರಪ್ಪ ಗುಡ್‌ಬೈ

ಘೋಷಣೆ ಮಾಡಿರುವುದು ನಾನಾ ಊಹಾಪೋಹಗಳಿಗೆ ಕಾರಣವಾಗಿದೆ. ವಿಜಯೇಂದ್ರ ಅವರನ್ನು ಬೊಮ್ಮಾಯಿ ಸಂಪುಟ ದಲ್ಲಿ ಮಂತ್ರಿ ಮಾಡಬೇಕೆಂದು ಬಹಳ ಕಸರತ್ತು ತೆರೆಮರೆಯಲ್ಲಿ ನಡೆಸಿದ್ದರು. ಅಷ್ಟೇ ಅಲ್ಲ ವಿಧಾನಸಭೆ ಯಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ವಿಜಯೇಂದ್ರರಿಗೆ ಟಿಕೆಟ್ ದೊರೆಯುತ್ತದೆ ಎಂಬ ಮಹದಾಸೆ ಇಟ್ಟುಕೊಂಡಿದ್ದರು. ಇದಕ್ಕೆ ಪಕ್ಷದ ವರಿಷ್ಠರು ಅದರಲ್ಲೂ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಯಡಿಯೂರಪ್ಪ ಅವರ ಕನಸಿಗೆ ತಣ್ಣೀರು ಎರಚಿದ್ದರು. ಕನಿಷ್ಠ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯನ್ನಾಗಿ ಮಾಡಲು ಪ್ರಯತ್ನಿಸಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ತಮ್ಮ ಪುತ್ರನಿಗೆ ವಿಧಾನ ಸಭಾ ಚುನಾವಣೆ ಯಲ್ಲಿ ಸ್ಪರ್ಧಿಸಲು ಅವಕಾಶ ನೀಡುತ್ತಾರೋ, ಇಲ್ಲವೋ ಎಂಬ ಅನುಮಾನ ಕಾಡುತ್ತಿತ್ತು. ಚುನಾವಣಾ ರಾಜಕೀಯದಿಂದ ಹಿಂದೆ ಸರಿಯುವ ನಿರ್ಧಾರ ಪ್ರಕಟಿಸುವುದರೊಂದಿಗೆ ತನ್ನದೇ ಕ್ಷೇತ್ರ ಶಿಕಾರಿಪುರದಿಂದಲೇ ಪುತ್ರ ಕಣಕ್ಕಿಯುವುದನ್ನು ಘೋಷಣೆ ಮಾಡಿದರು.

ಚುನಾವಣಾ ಸಂದರ್ಭದಲ್ಲಿ ವರಿಷ್ಠರು ಏನೇ ತೀರ್ಮಾನ ಕೈಗೊಂಡರೂ ವಿಜಯೇಂದ್ರ ಶಿಕಾರಿಪುರದಿಂದ ಕಣಕ್ಕಿಳಿಯುತ್ತಾರೆ ಎಂಬ ಸಂದೇಶವನ್ನು ನಾಯಕರಿಗೆ ರವಾನಿಸಿದ್ದಾರೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಯಡಿಯೂರಪ್ಪ, ವಿಜಯೇಂದ್ರಗೆ ಮೈಸೂರಿನ ವರುಣಾ, ಮಂಡ್ಯದ ಕೆ.ಆರ್. ಪೇಟೆ ಸೇರಿದಂತೆ ಹಲವು ವಿಧಾನಸಭಾ ಕ್ಷೇತ್ರಗಳಿಂದ ಚುನಾವಣಾ ಕಣಕ್ಕಿಳಿಯಲು ಒತ್ತಡವಿತ್ತು. ನಾನು ಕ್ಷೇತ್ರ ಖಾಲಿ ಮಾಡುತ್ತಿರುವುದರಿಂದ ವಿಜಯೇಂದ್ರ ಶಿಕಾರಿಪುರದಲ್ಲೇ ನಿಲ್ಲುತ್ತಾರೆ ಎಂದರು. ಕ್ಷೇತ್ರದ ಜನತೆ ನನಗಿಂತ ಹೆಚ್ಚಿನ ಅಂತರದಲ್ಲಿ ವಿಜಯೇಂದ್ರ ಅವರಿಗೆ ಗೆಲುವು ತಂದುಕೊಡಬೇಕು ಎಂದು ಮನವಿ ಮಾಡಿದರು ಪಕ್ಷ ಸಂಘಟನೆಗೆ ರಾಜ್ಯದಲ್ಲಿ ಓಡಾಡುತ್ತೇನೆ. ರಾಜ್ಯದಲ್ಲಿ ನೂರಕ್ಕೆ ನೂರು ಭಾರತೀಯ ಜನತಾ ಪಾರ್ಟಿ ಮತ್ತೆ ಅಧಿಕಾರಕ್ಕೆ ಬರುತ್ತದೆ. ಬಿಜೆಪಿಯವರೇ ಮುಖ್ಯಮಂತ್ರಿಯಾಗುತ್ತಾರೆ. ಈ ಬಗ್ಗೆ ಅನುಮಾನ ಬೇಡ ಎಂದರು.

ಹೆಸರು ನಾಮಕರಣ

ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಸಂಪುಟ ನಿರ್ಧರಿಸಲಾಗಿದೆ. ರಸ್ತೆ, ವಿಮಾನ, ರೈಲು ಸಂಚಾರ ಸಮರ್ಪಕವಾಗಿದ್ದಲ್ಲಿ ಬಂಡವಾಳ ಹೂಡಿಕೆಗೆ ಉದ್ದಿಮೆದಾರರು ಮುಂದಾಗುವುದರ ಜೊತೆಗೆ ಪ್ರವಾಸೋದ್ಯಮ ಅಭಿವೃದ್ಧಿಗೂ ನೆರವಾಗುತ್ತದೆ ಎಂದರು.

ಸಂಸದರ ಮನವಿ: ಅಭಿವೃದ್ಧಿಗೆ ಪೂರಕವಾದ ರಸ್ತೆ, ರೈಲು, ವಿಮಾನಯಾನ ಸಂಪರ್ಕಕ್ಕೆ ಹೆಚ್ಚಿನ ಆದ್ಯತೆ ನೀಡಿರುವ ಸಂಸದ ಪ್ರತಾಪ್ ಸಿಂಹ, ಕಳೆದ ಮೇ 27ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತದ ಅವಧಿಯಲ್ಲಿ ಬಡತನ ನಿವಾರಣೆ, ಗ್ರಾಮೀಣ ಭಾಗಕ್ಕೆ ಮೂಲ ಸೌಕರ್ಯ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ನೀರಾವರಿ, ಕೃಷಿ, ಕೈಗಾರಿಕೆ ಹಾಗೂ ರೈಲ್ವೆ ಸಂಪರ್ಕಕ್ಕೆ ಆದ್ಯತೆ ನೀಡಿದ್ದರು. ಅಲ್ಲದೆ ಮಹಾನ್ ಸಂಸ್ಕೃತಿ ಪೋಷಕರಾಗಿದ್ದರು. ಬೆಂಗಳೂರಿನಲ್ಲಿ 1940ರಲ್ಲಿ ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್(ಹೆಚ್‌ಎಎಲ್)ಗೆ ಅಡಿಗಲ್ಲು ಹಾಕಿದ್ದರು. ಎಲ್ಲಾ ಆಯಾಮಗಳಲ್ಲೂ ಅಭಿವೃದ್ಧಿಗಾಗಿ ಶ್ರಮಿಸುವ ನಾಲ್ವಡಿ ಅವರ ಕಾಲ ಸುವರ್ಣಯುಗವಾಗಿತ್ತು. ಮಹಾತ್ಮ ಗಾಂಧಿ ಅವರು ನಾಲ್ವಡಿ ಅವರನ್ನು 'ರಾಜರ್ಷಿ' ಎಂದು ಹಾಗೂ ಅವರ ಕಾಲವನ್ನು 'ರಾಮರಾಜ್ಯ' ಎಂದು ಬಣ್ಣಿಸಿದ್ದಾರೆ. ಮೈಸೂರು ವಿಮಾನ ನಿಲ್ದಾಣವನ್ನು 'ನಾಲ್ವಡಿ ಕೃಷ್ಣರಾಜ ಒಡೆಯರ್ ವಿಮಾನ ನಿಲ್ದಾಣ' ಎಂದು ಮರುನಾಮಕರಣ ಮಾಡಬೇಕೆಂದು ಒತ್ತಾಯಿಸಿದ್ದರು.

ಸಂಘಟನೆಗಳ ಆಗ್ರಹ: ಮೈಸೂರಿನ ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು, ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ರಾಷ್ಟ್ರಕವಿ ಕುವೆಂಪು ಹೆಸರು ಸೇರಿದಂತೆ ರಾಜ್ಯದ ಎಲ್ಲಾ ವಿಮಾನ ನಿಲ್ದಾಣಗಳಿಗೂ ಕನ್ನಡ ಸಾಧಕರ ಹೆಸರನ್ನು ನಾಮಕರಣ ಮಾಡುವಂತೆ ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ನೇತೃತ್ವದಲ್ಲಿ ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ, ಅಖಿಲ ಕರ್ನಾಟಕ ಒಕ್ಕಲಿಗ ಮಹಾಸಭಾ, ರಾಜ್ಯ ಒಕ್ಕಲಿಗರ ಸಂಘ, ಮೈಸೂರು ಚಾಮರಾಜನಗರ ಜಿಲ್ಲಾ ಒಕ್ಕಲಿಗ ಸಂಘ ಹಾಗೂ ಕರ್ನಾಟಕ ಸೇನಾ ಪಡೆ ಪದಾಧಿಕಾರಿಗಳು ಒಕ್ಕೊರಲಿನಿಂದ ಕಳೆದ ಏಪ್ರಿಲ್‌ನಲ್ಲಿ ಸರ್ಕಾರವನ್ನು ಆಗ್ರಹಿಸಿದ್ದರು.

ಜಿಟಿಡಿ ಒತ್ತಾಯ: ಮೈಸೂರಿನ ಕಲಾಮಂದಿರದಲ್ಲಿ 2019ರಲ್ಲಿ ನಡೆದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ಉದ್ಘಾಟಿಸಿದ್ದ ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ಜಿ.ಟಿ.ದೇವೇಗೌಡರೂ ವಿಮಾನ ನಿಲ್ದಾಣದ ವಿಚಾರವಾಗಿ ಮಾತನಾಡಿದ್ದರು. ವಿಮಾನ ನಿಲ್ದಾಣಕ್ಕೆ ನಾಲ್ವಡಿ ಹೆಸರಿಡುವಲ್ಲಿ ನಿರ್ಲಕ್ಷ್ಯ ವಹಿಸಲಾಗಿದೆ ಎಂಬ ನಿವೃತ್ತ ಪ್ರಾಧ್ಯಾಪಕ ಪಿ.ವಿ.ನಂಜರಾಜ ಅರಸ್ ಮಾತಿಗೆ ಪ್ರತಿಕ್ರಿಯಿಸಿದ್ದ ಅವರು, ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ 'ನಾಲ್ವಡಿ ಕೃಷ್ಣರಾಜ ಒಡೆಯರ್ ವಿಮಾನ ನಿಲ್ದಾಣ' ಎಂದು ನಾಮಕರಣ ಮಾಡುವ ಸಂಬಂಧ ಹಳೇ ಮೈಸೂರು ಪ್ರಾಂತ್ಯದ ಶಾಸಕರು ಹಾಗೂ ಸಂಸದರು ಒಕ್ಕೊರಲಿನಿಂದ ಒತ್ತಾಯಿಸುವುದಾಗಿ ಭರವಸೆ ನೀಡಿದ್ದರು. ಹೀಗೆ ಮೈಸೂರಿನ ಜನಪ್ರತಿನಿಧಿಗಳು, ಇತಿಹಾಸಕಾರರು, ಪಾರಂಪರಿಕ ತಜ್ಞರು, ಸಾಹಿತಿಗಳು, ವಿವಿಧ ಸಂಘಟನೆಗಳ ಆಗ್ರಹಕ್ಕೆ ಸರ್ಕಾರ ಸ್ಪಂದಿಸಿ ಇಂದು ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ರನ್‌ವೇ ವಿಸ್ತರಣೆಗೆ ಭೂಮಿ: ಮೈಸೂರು ವಿಮಾನ ನಿಲ್ದಾಣ ಸದ್ಯ 1740 ಮೀಟರ್ ರನ್‌ವೇ ಹೊಂದಿದ್ದು, ಸಣ್ಣ ವಿಮಾನಗಳು ಮಾತ್ರ ಹಾರಾಟ ನಡೆಸಬಹುದಾಗಿದೆ. ದೊಡ್ಡ ವಿಮಾನಗಳ ಹಾರಾಟಕ್ಕೆ ಸೌಲಭ್ಯ ಕಲ್ಪಿಸಿ ಉನ್ನತೀಕರಣಗೊಳಿಸುವ ನಿಟ್ಟಿನಲ್ಲಿ 2,400 ಮೀಟರ್‌ಗೆ ರನ್‌ವೇ ವಿಸ್ತರಿಸುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರ ಈಗಾಗಲೇ 319 ಕೋಟಿ ರೂ. ಬಿಡುಗಡೆ ಮಾಡಿದ್ದು, ಅಗತ್ಯವಾಗಿರುವ 240 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ನಿರ್ಧಾರ ಕೈಗೊಳ್ಳಲಾಗಿದೆ.

> “ ಮೈಸೂರು ವಿಮಾನ ನಿಲ್ದಾಣ'ಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿಡಬೇಕೆಂಬ ನನ್ನ ಬೇಡಿಕೆಗೆ ಕ್ಯಾಬಿನೆಟ್ ನಿರ್ಣಯದ ಮೂಲಕ ಒಪ್ಪಿಗೆ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ಮೈಸೂರು ಜನತೆ ಪರವಾಗಿ ಅನಂತ ಧನ್ಯವಾದಗಳು. ಮೂಲಭೂತ ಸೌಕರ್ಯ ಖಾತೆ ಸಚಿವರಾದ ವಿ. ಸೋಮಣ್ಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಅವರಿಗೂ ಕೃತಜ್ಞತೆಗಳು.
>
> –ಸಂಸದ ಪ್ರತಾಪ್ ಸಿಂಹ

ಭಕ್ತರ ಮಹಾಪೂರ

ಇಲಾಖೆಯಿಂದ ಗಾಡ್ ಆಫ್ ಹಾನರ್(ಗನ್ ಸೆಲ್ಯೂಟ್) ಸಲ್ಲಿಸ ಲಾಯಿತು. ರಾತ್ರಿ 9.30 ರವರೆಗೆ ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಸಿಂಹವಾಹಿನಿ ಅಲಂಕಾರ: ಆಷಾಢ ಶುಕ್ರವಾರದ ಪೂಜಾ ಮಹೋತ್ಸವದ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ದೇವಾ ಲಯದ ಮುಖ್ಯ ದ್ವಾರದಿಂದ ಗರ್ಭ ಗುಡಿಯ ಮುಂಭಾಗದ ಪ್ರಾಂಗಣವನ್ನು ನಾನಾ ಹೂವುಗಳಿಂದ ಅಲಂಕರಿಸಲಾಗಿತ್ತು. ದೇವಿಗೆ ಸಿಂಹವಾಹಿನಿ ಅಲಂಕಾರ ಮಾಡಲಾಗಿತ್ತು. ಗುರುವಾರ ರಾತ್ರಿ 10 ಗಂಟೆಯಿಂದಲೇ ಮೆಟ್ಟಿಲು ಮೂಲಕ ಚಾಮುಂಡಿ ಬೆಟ್ಟಕ್ಕೆ ಆಗಮಿಸಿದ ಭಕ್ತರು ರಾತ್ರಿಯಿಡೀ ಸರತಿಯ ಸಾಲಿನಲ್ಲಿ ಜಾಗರಣೆ ಮಾಡಿದರು. ಮುಂಜಾ ನೆಯೇ ದೇವಿಯ ದರ್ಶನ ಪಡೆದರು.

ಮೆಟ್ಟಿಲು ಮೂಲಕ: ವಿವಿಧ ಹರಕೆ ಹೊತ್ತ ಮಹಿಳೆಯರು ಸೇರಿದಂತೆ ಅಪಾರ ಭಕ್ತರು ಗುರುವಾರ ರಾತ್ರಿಯಿಂದ ಶುಕ್ರವಾರ ಸಂಜೆವರೆಗೂ ನಿರಂತರವಾಗಿ ಮೆಟ್ಟಿಲುಗಳ ಮೂಲಕ ಬೆಟ್ಟಕ್ಕೆ ಆಗಮಿಸಿ ದೇವಿಯ ದರ್ಶನ ಪಡೆಯಲು ಹಾತೊರೆದರು. ಮಳೆ ನಡುವೆಯೂ ಭಕ್ತರು ಮೆಟ್ಟಿಲು ಹತ್ತಿದ್ದು ವಿಶೇಷವಾಗಿತ್ತು. ಕೊನೆ ಶುಕ್ರವಾರವಾದ ಹಿನ್ನೆಲೆಯಲ್ಲಿ ಮೆಟ್ಟಿಲುಗಳ ಮೂಲಕ ಬೆಟ್ಟ ಹತ್ತುವವರ ಸಂಖ್ಯೆ ಹೆಚ್ಚಾಗಿತ್ತು.

ಪ್ರಸಾದ ವ್ಯವಸ್ಥೆ: ಆಷಾಢ ಶುಕ್ರವಾರದ ಅಂಗವಾಗಿ ಬೆಟ್ಟಕ್ಕೆ ಆಗಮಿಸಿದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು ಮಲ್ಟಿ ಲೆವೆಲ್ ಪಾರ್ಕಿಂಗ್ ಕಟ್ಟಡದಲ್ಲಿ ಪ್ರಸಾದ ವಿನಿಯೋಗಿಸಲು ವ್ಯವಸ್ಥೆ ಮಾಡಲಾಗಿತ್ತು. ಇಂದು ಬೆಟ್ಟಕ್ಕೆ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ, ಶಾಸಕ ಎಸ್.ಎ. ರಾಮದಾಸ್, ನಟ ದರ್ಶನ್ ಸೇರಿದಂತೆ ಇನ್ನಿತರರು ದೇವಿಯ ದರ್ಶನ ಪಡೆದರು.

ಉದ್ಯೋಗ ಕಲ್ಪಿಸಲೇಬೇಕು

ಪ್ರಮಾಣದಲ್ಲಿ ಹೆಚ್ಚುವರಿ ಉದ್ಯೋಗ ಸೃಷ್ಟಿಯಾಗಬೇಕು. ಅವು ನಮ್ಮವರಿಗೇ ದೊರೆಯಬೇಕು. ರಾಜ್ಯದಲ್ಲಿ ದಿನದಿಂದ ದಿನಕ್ಕೆ ನಿರುದ್ಯೋಗ ಸಮಸ್ಯೆ ಆಗಾಧ ಪ್ರಮಾಣದಲ್ಲಿ ಬೆಳೆಯುತ್ತಿದೆ. ಇರುವ ಉದ್ಯೋಗಗಳು ಬೇರೆ ರಾಜ್ಯದ ಯುವಕರ ಪಾಲಾಗುತ್ತಿದೆ. ಇದನ್ನು ತಪ್ಪಿಸುವ ಉದ್ದೇಶದಿಂದ ಸರ್ಕಾರ ಈ ಮಹತ್ವದ ತೀರ್ಮಾನ ಕೈಗೊಂಡಿರುವುದಲ್ಲದೆ, ಮುಂದಿನ 2025 ರವರೆಗೂ ಈ ನೀತಿ ಜಾರಿಯಲ್ಲಿರುತ್ತದೆ ಎಂದರು.

ರಸಗೊಬ್ಬರ ದಾಸ್ತಾನು: ರಸಗೊಬ್ಬರ ದಾಸ್ತಾನಿಗಾಗಿ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಮತ್ತು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿಗೆ ತಲಾ ರೂ. 200 ಕೋಟಿಗಳ ದುಡಿಯುವ ಬಂಡವಾಳ ಸಾಲ ನೀಡುವುದಾಗಿ ರಾಜ್ಯ ಸರ್ಕಾರದ ಖಾತ್ರಿಪಡಿಸಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

81 ಶಿಕ್ಷಾ ಬಂಧಿಗಳ ಬಿಡುಗಡೆ: 75ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ 'ಅಜಾದಿ ಕಾ ಅಮೃತ್' ಮಹೋತ್ಸವ ಪ್ರಯುಕ್ತ ಕೇಂದ್ರ ಸರ್ಕಾರದ ಮಾರ್ಗಸೂಚಿ ಅಡಿಯಲ್ಲಿ 81 ಅರ್ಹ ನಿರ್ದಿಷ್ಟ ವರ್ಗದ ಶಿಕ್ಷ ಬಂಧಿಗಳನ್ನು ಮೊದಲನೇ ಹಂತದಲ್ಲಿ ಬಿಡುಗಡೆ ಮಾಡಲು ಅನುಮತಿ ನೀಡಲಾಗಿದೆ. ಕೆಲವು ಷರತ್ತುಗಳನ್ನು ವಿಧಿಸಿ, ಜೀವಾವಧಿ ಶಿಕ್ಷೆಗೆ ಒಳಪಟ್ಟವರು ಇದರ ಲಾಭ ಪಡೆದುಕೊಳ್ಳಲಿದ್ದಾರೆ ಎಂದರು. ಅವರ ಸನ್ನಡತೆಯ ಆಧಾರದ ಮೇಲೆ ಅವಧಿ ಪೂರ್ವ ಬಿಡುಗಡೆ ಇದಾಗಿರುತ್ತದೆ.

ರೇಷ್ಮೆ ಇಲಾಖೆಯ ಸಮಗ್ರ ಗಣಕೀಕರಣ ಮಾಡಲು 15 ಕೋಟಿ ರೂ.ಗಳ ಅಂದಾಜಿಗೆ ಸಮ್ಮತಿ ನೀಡಲಾಗಿದೆ ಜಲಜೀವನ್ ಮಿಷನ್ ಯೋಜನೆಯಡಿ ಕೊಪ್ಪಳ, ಬೆಳಗಾವಿ, ಚಾಮರಾಜನಗರ, ದಾವಣಗೆರೆ, ಬಳ್ಳಾರಿ ಜಿಲ್ಲೆಗಳ ಜನವಸತಿಗಳಲ್ಲಿ ಕುಡಿಯುವ ನೀರು ಕಲ್ಪಿಸುವ ವಿವಿಧ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

ಡಿ ದರ್ಜೆ ನೌಕರರ ನೇಮಕಾತಿ: ರಾಜ್ಯದ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 1142 ಡಿ ದರ್ಜೆಯ ಸಿಬ್ಬಂದಿಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಉನ್ನತ ಶಿಕ್ಷಣ ಇಲಾಖೆಗೆ ಅನುಮತಿ ನೀಡಲಾಗಿದೆ ಎಂದರು.

ಉಚಿತ ಶೂ, ಸಾಕ್ಸ್ ವಿತರಣೆ: ಶೈಕ್ಷಣಿಕ ಸಾಲಿಗೆ ವಿದ್ಯಾ ವಿಕಾಸ ಯೋಜನೆಯಡಿ ಸರ್ಕಾರಿ ಶಾಲೆಗಳ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ಶೂ ಮತ್ತು ಸಾಕ್ಸ್, ಅಥವಾ ಸ್ಯಾಂಡಲ್‌ಗಳ ವಿತರಣೆಗೆ ರೂ. 132.00 ಕೋಟಿ ಅನುದಾನದಲ್ಲಿ ವಿತರಿಸಲು ಆದೇಶ ಹೊರಡಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಗಿದೆ ಎಂದರು.



68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ

'ಸೂರರೈ ಪೋಟ್ರು' ಅತ್ಯುತ್ತಮ ಚಿತ್ರ

ಕನ್ನಡದ 'ತಲೆದಂಡ', 'ಡೊಳ್ಳು', 'ನಾದದ ನವನೀತ', ತುಳುವಿನ 'ಜೀಟಿಗೆ' ರಜತಕಮಲ



ನವದೆಹಲಿ: 68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಶುಕ್ರವಾರ ಪ್ರಕಟವಾಗಿದ್ದು, 2020ನೇ ಸಾಲಿನಲ್ಲಿ ಬಿಡುಗಡೆಯಾದ ಚಿತ್ರಗಳ ಪೈಕಿ ತಮಿಳಿನ 'ಸೂರಾರೈ ಪೋಟ್ರು' ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಗೆ ಭಾಜನವಾಗಿದೆ. ಕನ್ನಡದ 'ತಲೆದಂಡ', 'ಡೊಳ್ಳು' 'ನಾದದ ನವನೀತ' ಹಾಗೂ ತುಳುವಿನ 'ಜೀಟಿಗೆ' ಚಿತ್ರಗಳು ರಜತ ಕಮಲ ಬಾಚಿಕೊಂಡಿವೆ.

ಈವರೆಗೂ ಪ್ರಶಸ್ತಿಗಳ ಪಟ್ಟಿಯಲ್ಲಿ ಸದಾ ಮುಂಚೂಣಿಯಲ್ಲಿರುತ್ತಿದ್ದ ಬಾಲಿವುಡ್ ಚಿತ್ರಗಳನ್ನು ಹಿಂದಿಕ್ಕಿ ಈ ಬಾರಿ ದಕ್ಷಿಣ ಭಾರತದ ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಶಸ್ತಿಗಳನ್ನು ಬಾಚಿಕೊಂಡಿವೆ.

'ಸೂರಾರೈ ಪೋಟ್ರು' ಚಿತ್ರದಲ್ಲಿನ ನಟನೆಗಾಗಿ ಸೂರ್ಯ ಅತ್ಯುತ್ತಮ ನಟ ಹಾಗೂ ಅಪರ್ಣಾ ಬಾಲಮುರಳಿ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿದ್ದಾರೆ. ಈ ಚಿತ್ರಕ್ಕಾಗಿ ಅತ್ಯುತ್ತಮ ಚಿತ್ರಕಥೆ ಪ್ರಶಸ್ತಿಯನ್ನು ಶಾಲಿನಿ ಉಷಾ ನಾಯರ್, ನಿರ್ದೇಶಕಿ ಸುಧಾ ಕೊಂಗರ ಹಂಚಿಕೊಂಡಿದ್ದಾರೆ. ಅತ್ಯುತ್ತಮ ಸಂಗೀತ ನಿರ್ದೇಶನ (ಜಿ.ವಿ.ಪ್ರಕಾಶ್ ಕುಮಾರ್) ಪ್ರಶಸ್ತಿಯೂ ಇದೇ ಚಿತ್ರಕ್ಕೆ ಲಭಿಸಿದೆ. ಹಿಂದಿಯ 'ತಾನಾಜಿ ದಿ ಅನ್‌ಸಂಗ್ ವಾರಿಯರ್' ಚಿತ್ರಕ್ಕಾಗಿ ಅಜಯ್ ದೇವಗನ್ 'ಅತ್ಯುತ್ತಮ ನಟ' ಪ್ರಶಸ್ತಿಯನ್ನು ನಟ ಸೂರ್ಯ ಅವರ ಜೊತೆ ಹಂಚಿಕೊಂಡಿದ್ದಾರೆ.

ನಟ ದಿವಂಗತ ಸಂಚಾರಿ ವಿಜಯ್ ಅಭಿನಯದ 'ತಲೆದಂಡ' (ನಿರ್ದೇಶನ: ಪ್ರವೀಣ್ ಕೃಪಾಕರ್) ಚಿತ್ರವನ್ನು ಪರಿಸರ ಸಂರಕ್ಷಣೆ ಸಂಬಂಧಿತ ಅತ್ಯುತ್ತಮ ಚಲನಚಿತ್ರ ಎಂದು ಪರಿಗಣಿಸಲಾಗಿದೆ. ಪ್ರಶಸ್ತಿಯು ರಜತ ಕಮಲ ಮತ್ತು 1.50 ಲಕ್ಷ ನಗದು ಒಳಗೊಂಡಿದೆ. ಸಾಗರ್ ಪುರಾಣಿಕ್ ನಿರ್ದೇಶನದ 'ಡೊಳ್ಳು' ಚಿತ್ರವೂ ಅತ್ಯುತ್ತಮ ಕನ್ನಡ ಚಲನಚಿತ್ರ ವಿಭಾಗದ ಅಡಿ ರಜತ ಕಮಲಕ್ಕೆ ಭಾಜನವಾಗಿದೆ. ಪ್ರಶಸ್ತಿಯು 1 ಲಕ್ಷ ನಗದು ಒಳಗೊಂಡಿದೆ. ಅತ್ಯುತ್ತಮ ಧ್ವನಿಗ್ರಹಣಕ್ಕಾಗಿ (ಆಡಿಯೋಗ್ರಫಿ) ಇದೇ ಚಿತ್ರಕ್ಕೆ ಪ್ರಶಸ್ತಿ ಲಭಿಸಿದ್ದು, 50 ಸಾವಿರ ನಗದು ಒಳಗೊಂಡಿದೆ. ಸಂವಿಧಾನದ 8ನೇ ಪರಿಚ್ಛೇದದ ಅಡಿ ಹೊರತಾದ ಭಾಷೆಗಳ ಚಿತ್ರಗಳ ವಿಭಾಗದಲ್ಲಿ ತುಳು ಚಿತ್ರ 'ಜೀಟಿಗೆ'ಗೆ (ನಿರ್ದೇಶನ: ಸಂತೋಷ್ ಮಾಡ) ರಜತ ಕಮಲ ಲಭಿಸಿದೆ. ಅತ್ಯುತ್ತಮ ಕಲೆ, ಸಂಸ್ಕೃತಿ ಆಧಾರಿತ ಚಿತ್ರ ವಿಭಾಗದ ಅಡಿ ಗಿರೀಶ್ ಕಾಸರವಳ್ಳಿ ನಿರ್ದೇಶನದ 'ನಾದದ ನವನೀತ ಡಾ.ಪಂಡಿತ್ ವೆಂಕಟೇಶ್ ಕುಮಾರ್' ರಜತ ಕಮಲ ಪ್ರಶಸ್ತಿ ಪಡೆದಿದೆ.

ಮಲಯಾಳಂನ 'ಅಯ್ಯಪ್ಪನುಂ ಕೋಷಿಯುಂ' ಚಿತ್ರಕ್ಕಾಗಿ ದಿವಂಗತ ಕೆ.ಆರ್. ಸಚ್ಚಿದಾನಂದನ್ ಅವರಿಗೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಒಲಿದುಬಂದಿದೆ. ಇದೇ ಚಿತ್ರದ ಸಾಹಸ ನಿರ್ದೇಶನಕ್ಕಾಗಿ ರಾಜಶೇಖರ್, ಮಾಫಿಯಾ ಸಸಿ ಹಾಗೂ ಸುಪ್ರೀಂ ಸುಂದರ್ ಅವರಿಗೆ ಉತ್ತಮ ಸಾಹಸ ನಿರ್ದೇಶಕ ಪ್ರಶಸ್ತಿ ಲಭಿಸಿದೆ. ಇದೇ ಚಿತ್ರದ 'ಅಯ್ಯಪ್ಪನ್' ಪಾತ್ರಕ್ಕಾಗಿ ಬಿಜು ಮೆನನ್ ಅವರಿಗೆ ಅತ್ಯುತ್ತಮ ಪೋಷಕ ನಟ ಹಾಗೂ ತಮಿಳು ಚಿತ್ರ 'ಸಿವರಂಜಿನಿಯುಂ ಇನ್ನುಂ ಸುಲಾ ಪೆಂಗಳುಂ'ನ ಅಭಿನಯಕ್ಕಾಗಿ ಲಕ್ಷ್ಮೀ ಪ್ರಿಯಾ ಚಂದ್ರಮೌಳಿ ಅವರಿಗೆ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ಲಭಿಸಿದೆ.

'ಮಂಡೇಲ' (ತಮಿಳು) ಚಿತ್ರಕ್ಕಾಗಿ ಚೊಚ್ಚಲ ನಿರ್ದೇಶನಕ್ಕಾಗಿ ನೀಡುವ ಇಂದಿರಾ ಗಾಂಧಿ ಪ್ರಶಸ್ತಿಯು ಮಡೋನ್ನೆ ಅಶ್ವಿನ್ ಅವರಿಗೆ ಲಭಿಸಿದೆ. ಇದೇ ಚಿತ್ರಕ್ಕೆ ಅಶ್ವಿನ್ ಅವರಿಗೆ ಅತ್ಯುತ್ತಮ ಚಿತ್ರಕಥೆ ಪ್ರಶಸ್ತಿ ಲಭಿಸಿದೆ.

ಇತರ ವಿಭಾಗಗಳು: ಅತ್ಯುತ್ತಮ ಹಿನ್ನೆಲೆ ಗಾಯಕಿ: ನಂಚಮ್ಮ (ಚಿತ್ರ: ಅಯ್ಯಪ್ಪನುಂ ಕೋಶಿಯುಂ), ಅತ್ಯುತ್ತಮ ಹಿನ್ನೆಲೆ ಗಾಯಕ ರಾಹುಲ್ ದೇಶಪಾಂಡೆ (ಚಿತ್ರ: ಮಿ ವಸಂತರಾವ್), ಅತ್ಯುತ್ತಮ ಛಾಯಾಗ್ರಹಣ: ಸುಪ್ರತಿಮ್ ಭೋಲ್ (ಚಿತ್ರ ಅವಿಜಾತ್ರಿಕ್), ಅತ್ಯುತ್ತಮ ಸಂಕಲನಕಾರ: ಶ್ರೀಕರ ಪ್ರಸಾದ್ (ಸಿವರಂಜಿನಿಯುಂ ಇನ್ನುಂ ಸಿಲಾ ಪೆಂಗಳುಂ), ಅತ್ಯುತ್ತಮ ನಿರ್ಮಾಣ ವಿನ್ಯಾಸದ ಚಿತ್ರ: ಕಪ್ಪೆಲ (ಮಲಯಾಳಂ).

ಪ್ಲಾಸ್ಟಿಕ್ ಬಳಕೆ ವಿರುದ್ಧ ಕಾರ್ಯಾಚರಣೆಗೆ ಹೋಟೆಲ್ ಮಾಲೀಕರ ಸಂಘ ವಿರೋಧ

ಸಾಧಕ-ಬಾಧಕ ಚರ್ಚಿಸದೇ ಏಕಾಏಕಿ ನಿರ್ಧಾರಕ್ಕೆ ಖಂಡನೆ

ಮೈಸೂರು, ಜು.22(ಎಸ್‌ಬಿಡಿ)– ವ್ಯಾಪಾರಿಗಳಿಂದ ಏಕಾಏಕಿ ಏಕಬಳಕೆ ಪ್ಲಾಸ್ಟಿಕ್ ವಶಪಡಿಸಿಕೊಂಡು ಅವರಿಗೆ ದಂಡ ವಿಧಿಸುವ ಮೈಸೂರು ನಗರ ಪಾಲಿಕೆ ಕ್ರಮವನ್ನು ಹೋಟೆಲ್ ಮಾಲೀಕರ ಸಂಘ ಖಂಡಿಸಿದೆ.

ಕೇಂದ್ರ ಸರ್ಕಾರದ ಪರಿಸರ ಇಲಾಖೆ ಒಮ್ಮೆ ಬಳಸುವ(Single used) ಪ್ಲಾಸ್ಟಿಕ್ ನಿಷೇಧದ ಬಗ್ಗೆ ಜಾಗೃತಿ ಮೂಡಿಸದೆ, ತೆರಿಗೆದಾರ ಅಭಿಪ್ರಾಯ, ಸಾಧಕ–ಬಾಧಕಗಳ ಬಗ್ಗೆ ಚರ್ಚಿಸದೆ, ಪ್ಲಾಸ್ಟಿಕ್ ಪರ್ಯಾಯದ ಬಗ್ಗೆ ತಿಳಿಸಿಕೊಡದೆ ಏಕಾಏಕಿ ಅನುಷ್ಠಾನಕ್ಕೆ ತಂದಿದೆ. ಇದನ್ನೇ ನೆಪವಾಗಿಸಿಕೊಂಡು ಮೈಸೂರು ನಗರ ಪಾಲಿಕೆ ಅಧಿಕಾರಿಗಳು ವ್ಯಾಪಾರಿಗಳಿಗೆ ಸಾವಿರಾರು ರೂ. ದಂಡ ವಿಧಿಸುತ್ತಿದ್ದಾರೆ ಎಂದು ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ ತಿಳಿಸಿದ್ದಾರೆ.

ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸರಬರಾಜು ಮಾಡುವ ಪ್ಲಾಸ್ಟಿಕ್ ಕವರ್‌ಗಳಿಗೆ ಪರ್ಯಾಯ ಮಾರ್ಗವೇನೆಂದು ಇದುವರೆಗೂ ತಿಳಿಸಿಲ್ಲ. ಆದರೆ ವ್ಯಾಪಾರಿಗಳಿಂದ ಇದ್ದಕ್ಕಿದ್ದಂತೆ ಪ್ಲಾಸ್ಟಿಕ್ ವಶಪಡಿಸಿಕೊಂಡರೆ ಬಿಸ್ಕೆಟ್, ಬ್ರೆಡ್, ಸಿಹಿ ತಿಂಡಿ, ಖಾರ ಇನ್ನಿತರ ತಿನಿಸುಗಳನ್ನು ಪ್ಯಾಕ್ ಮಾಡುವುದು ಹೇಗೆ?. ಹೋಟೆಲ್‌ಗಳಲ್ಲಿ ಪರ್ಯಾಯ ಪಾರ್ಸಲ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಕಾಲಾವಕಾಶ ಬೇಕು. ಇದರಿಂದ ಗ್ರಾಹಕರಿಗೂ ಹೆಚ್ಚು ಹೊರೆಯಾಗಬಹುದು. ದಂಡ ಹಾಕುವುದನ್ನು ನಿಲ್ಲಿಸಿ, ಮೊದಲು ಪ್ಲಾಸ್ಟಿಕ್ ಉತ್ಪಾದನೆಯನ್ನೇ ಸ್ಥಗಿತಗೊಳಿಸಬೇಕು. ನಂತರ ವಿತರಕರು ಹಾಗೂ ಬಳಕೆದಾರರಿಗೆ ಸೂಚನೆ ನೀಡಬೇಕು. ದಂಡದ ರೂಪದಲ್ಲಿ ಸರ್ಕಾರಕ್ಕೆ ಹಣ ಕೂಡಿಸುವುದೇ ಮುಖ್ಯವಾಗಬಾರದು ಎಂದು ಹೇಳಿದ್ದಾರೆ.



ಹಲವು ರಹದಾರಿ ಪಡೆದು ಉದ್ಯಮಿ ವ್ಯಾಪಾರ ಆರಂಭಿಸುತ್ತಾರೆ. ಕೊರೊನೋತ್ತರದಲ್ಲಿ ಸುಧಾರಿಸಿಕೊಳ್ಳುವ ಹೊತ್ತಿನಲ್ಲಿ ಹೀಗೆ ತೆರಿಗೆಗಳ ಜೊತೆಗೆ ದಂಡದ ಬರೆ ಎಳೆದರೆ ಅವರ ಗತಿಯೇನು?. ಇದರ ನಡುವೆ ಕಾನೂನು–ಕಾಯ್ದೆಗಳ ಮುಂದಿಟ್ಟುಕೊಂಡು ಬೆದರಿಸಿ ಲಂಚ ಪಡೆಯುವ ಕೃತ್ಯವೂ ನಡೆದಿವೆ. ಹೊಸ ಕಾನೂನುಗಳು ಬಂದರೆ ಕೆಲ ಅಧಿಕಾರಿಗಳಿಗೆ ಹಬ್ಬದ ಸಂಭ್ರಮ. ಬಂಡವಾಳ ಹೂಡಿದ ಉದ್ಯಮಿಗಿಂತ ಹೆಚ್ಚು ಸಂಪಾದಿಸುತ್ತಾರೆ. ಸರ್ಕಾರ ಯಾವುದೇ ಹೊಸ ಕಾಯ್ದೆ ಜಾರಿಗೆ ತರುವಾಗ ಮೊದಲು ಅದರ ಬಗ್ಗೆ ಜಾಗೃತಿ ಮೂಡಿಸಿ, ಪರ್ಯಾಯ ಮಾರ್ಗದ ಬಗ್ಗೆ ತಿಳಿಸಿ ನಂತರ ಮುಂದುವರೆಯಬೇಕು. ಸದ್ಯಕ್ಕೆ ಮೈಸೂರು ನಗರ ಪಾಲಿಕೆಯವರು ದಂಡ ವಿಧಿಸುವ ಅವೈಜ್ಞಾನಿಕ ಕ್ರಮವನ್ನು ನಿಲ್ಲಿಸಿ, ಜಾಗೃತಿ ಕಾರ್ಯಕ್ರಮ ನಡೆಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಇಂದು ವಿ.ಸೋಮಣ್ಣ ವನಸಿರಿ ಪ್ರಶಸ್ತಿ ಪ್ರದಾನ

ಮೈಸೂರು, ಜು.22–ವಸತಿ ಸಚಿವ ವಿ.ಸೋಮಣ್ಣ ಅವರ ಹುಟ್ಟು ಹಬ್ಬದ ಅಂಗವಾಗಿ ವಿ. ಸೋಮಣ್ಣ ಅಭಿಮಾನಿ ಬಳಗದ ವತಿಯಿಂದ ನಾಳೆ (ಜು.23) ಸಂಜೆ 5 ಗಂಟೆಗೆ ಮೈಸೂರಿನ ಬಲ್ಲಾಳ್ ಸರ್ಕಲ್ ಬಳಿ ಇರುವ ನಿತ್ಯೋತ್ಸವ ಕಲಾಭವನದಲ್ಲಿ 'ಶ್ರೀ ವಿ.ಸೋಮಣ್ಣ ವನಸಿರಿ' ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ.





ವನಸಿರಿ ಪ್ರಶಸ್ತಿ ಪುರಸ್ಕೃತ ದಂಪತಿ

ಚಾಮರಾಜನಗರದ ಪರಿಸರ ಪ್ರೇಮಿ ಸಿ.ಎಂ.ವೆಂಕಟೇಶ್ ಮತ್ತು ಶ್ರೀಮತಿ ಜಿ.ಜಯಲಕ್ಷ್ಮೀ ವೆಂಕಟೇಶ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ, 25 ಸಾವಿರ ರೂ. ದತ್ತಿ ನಿಧಿ ಸಮರ್ಪಿಸಲಾಗುವುದು. ಇದೇ ವೇಳೆ ಸಮಾಜ ಸೇವಾ ವಿಭಾಗದಲ್ಲಿ ಶ್ರೀಮತಿ ಜಯಾ ಗೌಡ, ಕೆ.ವಿ.ಮಲ್ಲೇಶ್, ಹೆಚ್.ಜಿ.ಪರಶಿವಪ್ಪ, ಬಸವಲಿಂಗಪ್ಪ, ಎಸ್.ಶಿವಮೂರ್ತಿ ಕಾನ್ಯ, ರಂಗಭೂಮಿ ವಿಭಾಗದಲ್ಲಿ ಶಿವಾಜಿರಾವ್ ಜಾಧವ್, ಸಂಗೀತಾ ರಾಜೇಶ್ (ಕಲೆ), ಪ್ರಕಾಶ್ ಚಿಕ್ಕಪಾಳ್ಯ (ಕಲೆ), ಸಿ.ಬಸವೇಗೌಡ (ಸಹಕಾರ), ಓಂ ಪ್ರಕಾಶ್ (ಸಹಕಾರ), ಶ್ರೀಮತಿ ಗೀತಾ ಪ್ರಸನ್ನ (ಐಪಿಎಸ್), ಡಾ. ಹರ್ಷ ಬಸಪ್ಪ (ವೈದ್ಯಕೀಯ), ಡಾ. ಯೋಗೇಶ್ (ವೈದ್ಯಕೀಯ) ಮತ್ತು ಕೆ.ಎಸ್.ಮಹದೇವಪ್ರಸಾದ್ (ವಕೀಲರು), ಅವರನ್ನು ಸನ್ಮಾನಿಸಲಾಗುವುದು.

ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದು, ವಸತಿ ಸಚಿವ ವಿ.ಸೋಮಣ್ಣ ಮತ್ತು ವಿ.ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ವಿ.ಸೋಮಣ್ಣ ಉಪಸ್ಥಿತರಿರುವರು. ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಲಿದ್ದು, ಕಾರ್ಯಕ್ರಮವನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಲಿದ್ದಾರೆ. ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ವಿ.ಸೋಮಣ್ಣ ಅವರ ಸಂಘಟನಾ ಶಕ್ತಿ ಮತ್ತು ಸಾಮಾಜಿಕ ಬದ್ಧತೆ ಕುರಿತು ಮಾತನಾಡುವರು. ಶಾಸಕರಾದ ಎಸ್.ಎ.ರಾಮದಾಸ್, ತನ್ವೀರ್ ಸೇಠ್, ಎಲ್.ನಾಗೇಂದ್ರ, ಮರಿತಿಬ್ಬೇಗೌಡ, ಡಾ. ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಪತ್ರಕರ್ತ ಕೆ.ಪಿ.ನಾಗರಾಜ್, ಪ್ರಗತಿಪರ ಕೃಷಿಕ ಚಿನ್ನಸ್ವಾಮಿ ವಡ್ಡಗೆರೆ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಬ್ಬರು ಖದೀಮರ ಬಂಧನ

15 ಲಕ್ಷ ರೂ. ಮೌಲ್ಯದ 9 ಬುಲೆಟ್ ಸೇರಿ 14 ದ್ವಿಚಕ್ರ ವಾಹನಗಳ ವಶ



ಮೈಸೂರು, ಜು. 22 (ಆರ್‌ಕೆ)–ಖದೀಮರಿಬ್ಬರನ್ನು ಬಂಧಿಸಿರುವ ಮೈಸೂರಿನ ಕುವೆಂಪುನಗರ ಠಾಣೆ ಪೊಲೀಸರು, 15 ಲಕ್ಷ ರೂ. ಮೌಲ್ಯದ 14 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಮೈಸೂರಿನ ದಟ್ಟಗಳ್ಳಿ ನಿವಾಸಿ ಕಾರ್ತಿಕ್ ಹಾಗೂ ಹೆಚ್.ಡಿ.ಕೋಟೆಯ ಕಿರಣ್ ಬಂಧಿತರು. ಅವರಿಂದ 9 ರಾಯಲ್ ಎನ್‌ಫೀಲ್ಡ್ ಬುಲೆಟ್ ಬೈಕ್‌ಗಳು, 3 ಹೋಂಡಾ ಆಕ್ಟೀವಾ, 1 ಬಜಾಜ್ ಪಲ್ಸರ್, 1 ಯಮಹಾ ಆರ್‌ಎಕ್ಸ್ ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಖದೀಮರು ಕುವೆಂಪುನಗರ ಠಾಣೆಯ 5, ಸರಸ್ವತಿಪುರಂನ 2, ಅಶೋಕಪುರಂನ 1, ಆಲನಹಳ್ಳಿಯ 1, ನಂಜನಗೂಡಿನ 1 ಹಾಗೂ ರಾಮನಗರ ಐಜೂರು ಠಾಣೆ ವ್ಯಾಪ್ತಿಯಲ್ಲಿ 3 ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿ, ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡಿದ್ದರು ಎಂಬುದು ತಿಳಿಯಿತು.

ಬಂಧಿತರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ ಮಾರ್ಗದರ್ಶನದಲ್ಲಿ ಕೆಆರ್. ಉಪ ವಿಭಾಗದ ಎಸಿಪಿ ಎಂ.ಎಸ್.ಗಂಗಾಧರಸ್ವಾಮಿ ಉಸ್ತುವಾರಿಯಲ್ಲಿ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಕಿಷಣ್ಸಿಂಗ್ ವರ್ಮ, ಸಬ್‌ಇನ್ಸ್‌ಪೆಕ್ಟರ್‌ಗಳಾದ ಎಂ.ರಾಧ, ಎಸ್.ಮಹದೇವ, ಸಿಬ್ಬಂದಿಗಳಾದ ಎಂ.ಪಿ. ಮಂಜುನಾಥ್, ಎನ್.ಕೆ.ಪುಟ್ಟಪ್ಪ, ಎಂ.ಸಿ.ಯೋಗೇಶ್, ನಾಗೇಶ್, ಹಜರತ್, ಶ್ರೀನಿವಾಸ್, ಮಂಜು ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಭ್ರಷ್ಟಾಚಾರ ಪ್ರಕರಣ: ಮಾಜಿ ಸಿಎಂ ಬಿಎಸ್‌ವೈಗೆ ಸುಪ್ರೀಂಕೋರ್ಟ್‌ನಿಂದ ತಾತ್ಕಾಲಿಕ ರಿಲೀಫ್

ಬೆಂಗಳೂರು, ಜು.22– ಶಿಕಾರಿಪುರ ಕ್ಷೇತ್ರವನ್ನು ಪುತ್ರ ವಿಜಯೇಂದ್ರನಿಗೆ ಬಿಟ್ಟುಕೊಡುವ ನಿರ್ಧಾರ ಪ್ರಕಟಿಸಿದ ದಿನವೇ ಭ್ರಷ್ಟಾಚಾರ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸುಪ್ರೀಂಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ.



ತಮ್ಮ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ತಡೆಹಿಡಿಯುವಂತೆ ಕೋರಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಪುರಸ್ಕರಿಸಿದೆ. ಭೂ ಹಂಚಿಕೆ ಹಗರಣದಲ್ಲಿ ಆರೋಪಿಯಾಗಿರುವ ಯಡಿಯೂರಪ್ಪ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದುಗೊಳಿಸಲು ಕರ್ನಾಟಕ ಹೈಕೋರ್ಟ್ ನಿರಾಕರಿಸಿತ್ತು. ಮಾಜಿ ಸಿಎಂ ಬಿ.ಎಸ್ . ಯಡಿಯೂರಪ್ಪ 2006–07ರಲ್ಲಿ ಉಪಮುಖ್ಯಮಂತ್ರಿಯಾಗಿದ್ದಾಗ ಅಕ್ರಮವಾಗಿ ಎಕರೆಗಟ್ಟಲೆ ಭೂಮಿಯನ್ನು ಡಿ ನೋಟಿಫೈ ಮಾಡಿ ಉದ್ಯಮಿಗಳಿಗೆ ಜಮೀನು ಮಂಜೂರು ಮಾಡಿದ ಆರೋಪ ಹೊತ್ತಿದ್ದಾರೆ. ಅವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

2020ರಲ್ಲಿ ಕರ್ನಾಟಕ ಲೋಕಾಯುಕ್ತ ಪೊಲೀಸರು ದಾಖಲಿಸಿದ ಎಫ್‌ಐಆರ್ ಅನ್ನು ರದ್ದುಗೊಳಿಸಬೇಕೆಂಬ ಅವರ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿತ್ತು. ಹೈಕೋರ್ಟ್ ನ್ಯಾಯಾಧೀಶ ಜಾನ್ ಮೈಕೆಲ್ ಕುನ್ಹಾ ಅವರು ತನಿಖೆ ವಿಳಂಬಕ್ಕೆ ಪೊಲೀಸರಿಗೆ ಛೀಮಾರಿ ಹಾಕಿದ್ದರು. 2013ರಲ್ಲಿ ವಾಸುದೇವ ರೆಡ್ಡಿ ಎಂಬುವರು ಖಾಸಗಿ ದೂರಿನ ಮೇರೆಗೆ ಯಡಿಯೂರಪ್ಪ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಮಾಜಿ ಮುಖ್ಯಮಂತ್ರಿ ಬೆಳ್ಳಂದೂರು ಮತ್ತು ದೇವರಬೀಸನಹಳ್ಳಿಯಲ್ಲಿ ಐಟಿ ಪಾರ್ಕ್ ಅಭಿವೃದ್ಧಿಪಡಿಸಲು ಸ್ವಾಧೀನಪಡಿಸಿಕೊಂಡಿರುವ ಭೂಮಿಯನ್ನು ಡಿನೋಟಿಫೈ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಕೆಆರ್‌ಎಸ್‌ನಲ್ಲಿ ಅಣೆಕಟ್ಟೆಯ ಹಳೇ ಕ್ರೆಸ್ಟ್‌ಗೇಟ್ ಮ್ಯೂಸಿಯಂ

ಬೃಂದಾವನ, ನೃತ್ಯ ಕಾರಂಜಿಗೆ ಹೊಸ ರೂಪ ನೀಡಲು ನಿರ್ಧಾರ

ಮೈಸೂರು, ಜು.22(ಆರ್‌ಕೆ)–ಕೃಷ್ಣರಾಜಸಾಗರ (ಕೆಆರ್‌ಎಸ್)ದಲ್ಲಿ ಅಣೆಕಟ್ಟೆಗೆ ಅಳವಡಿಸಿದ್ದ ಹಳೇ ಕ್ರೆಸ್ಟ್‌ಗೇಟ್‌ಗಳ ಸಂಗ್ರಹಾಲಯ (ಮ್ಯೂಸಿಯಂ) ಮಾಡಲು ಕಾವೇರಿ ನೀರಾವರಿ ನಿಗಮ ನಿಯಮಿತ ಮುಂದಾಗಿದೆ.



90 ವರ್ಷಗಳ ಹಿಂದೆ ಸರ್ ಎಂ. ವಿಶ್ವೇಶ್ವರಯ್ಯ ಅವರು ವಿನ್ಯಾಸಗೊಳಿಸಿರುವ ಕಬ್ಬಿಣದ ಗೇಟ್‌ಗಳು ತುಕ್ಕು ಹಿಡಿದಿರುವುದರಿಂದ ಅವುಗಳನ್ನು ಬದಲಿಸುವ ಕೆಲಸ ಪ್ರಗತಿಯಲ್ಲಿದ್ದು, ಹಳೆಯ ಗೇಟ್‌ಗಳನ್ನು ವಿಲೇವಾರಿ ಮಾಡದೇ ಮ್ಯೂಸಿಯಂ ಮಾಡಿ ಪ್ರವಾಸಿಗರ ವೀಕ್ಷಣೆಗಾಗಿ ಸಂರಕ್ಷಿಸುವಂತೆ ಇತ್ತೀಚೆಗೆ ಕೆಆರ್‌ಎಸ್‌ಗೆ ಭೇಟಿ ನೀಡಿ, ಡ್ಯಾಂ ವೀಕ್ಷಿಸಿದ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸಲಹೆ ನೀಡಿದ್ದರು.

ಕೆಆರ್‌ಎಸ್‌ನಲ್ಲಿ ಒಟ್ಟು 173 ಗೇಟ್‌ಗಳಿದ್ದು, ಆ ಪೈಕಿ 152 ಫ್ಲಡ್ ಗೇಟ್‌ಗಳಾಗಿವೆ. ಮಳೆ ಜಾಸ್ತಿಯಾಗಿ, ಜಲಾಶಯಕ್ಕೆ ಹೆಚ್ಚಿನ ಪ್ರಮಾಣದ ನೀರು ಹರಿದು ಬಂದಾಗ ನದಿ, ಕಾಲುವೆಗಳಿಗೆ ನೀರು ಬಿಡುವ ಮೂಲಕ ಅಣೆಕಟ್ಟೆ ಸುರಕ್ಷತೆಗೆ ಈ ಗೇಟ್‌ಗಳು ಸಹಕಾರಿಯಾಗಿವೆ 90 ವರ್ಷಗಳ ಹಿಂದೆ ಅಳವಡಿಸಿರುವ ಈ ಹಳೆಯ ಗೇಟ್‌ಗಳು ತುಕ್ಕು ಹಿಡಿದು ಶಿಥಿಲಗೊಂಡಿರುವುದರಿಂದ ಅವುಗಳನ್ನು ಬದಲಾಯಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಡ್ಯಾಂ ರಿಹಾಬಿಲಿಟೇಷನ್ ಅಂಡ್ ಇಂಪ್ರೂವ್‌ಮೆಂಟ್ ಪ್ರಾಜೆಕ್ಟ್ (DRIP) ಯೋಜನೆಯಡಿ ವಿಶ್ವಬ್ಯಾಂಕ್ ನೆರವಿನೊಂದಿಗೆ ಅಣೆಕಟ್ಟೆಯ 136 ಕ್ರೆಸ್ಟ್‌ಗೇಟ್‌ಗಳನ್ನು ಬದಲಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. 106 ಅಡಿಗಿಂತ ಹೆಚ್ಚು ಮಟ್ಟದ 40 ಗೇಟ್‌ಗಳನ್ನು ಈಗಾಗಲೇ ತೆಗೆದು ಹೊಸ ಗೇಟ್ ಹಾಕಲಾಗಿದೆ.

103 ಅಡಿ ಮಟ್ಟದ 48ರಲ್ಲಿ 23, 114 ಅಡಿ ಮಟ್ಟದ 48ರಲ್ಲಿ 12 ಗೇಟ್‌ಗಳನ್ನು ಈಗಾಗಲೇ ಬದಲಿಸಲಾಗಿದೆ. ಇದೀಗ ಜಲಾಶಯ ಭರ್ತಿಯಾಗಿರುವುದರಿಂದ (ನೀರಿನ ಮಟ್ಟ 124.80 ಅಡಿ ತಲುಪಿರುವ ಕಾರಣ) ಗೇಟ್ ಬದಲಿಸಲು ಸಾಧ್ಯವಾಗುವುದಿಲ್ಲ. ನೀರಿನ ಮಟ್ಟ ಕಡಿಮೆಯಾದಾಗ ಬರುವ ಬೇಸಿಗೆ ಅವಧಿಯಲ್ಲಿ ಕಾಮಗಾರಿ ಮುಂದುವರೆಸಬೇಕಾಗಿದೆ.

ಈ ಹಿಂದೆ ಬಸವರಾಜ ಬೊಮ್ಮಾಯಿ ಅವರು, ಜಲಸಂಪನ್ಮೂಲ ಸಚಿವರಾಗಿದ್ದಾಗ ಅಣೆಕಟ್ಟೆಯ 80+ ಅಡಿಯ 80ರ ಪೈಕಿ 16 ಕ್ರೆಸ್ಟ್‌ಗೇಟ್‌ಗಳನ್ನು ಬದಲಾಯಿಸಲಾಗಿತ್ತು ಈ ಗೇಟ್‌ಗಳನ್ನು ಸಂರಕ್ಷಿಸಿ ಮ್ಯೂಸಿಯಂ ಮಾಡಲು ಕಾವೇರಿ ನೀರಾವರಿ ನಿಗಮ ನಿಯಮಿತದ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ.

136 ಗೇಟ್‌ಗಳನ್ನು ಬದಲಾಯಿಸುವ ಕಾಮಗಾರಿಯನ್ನು ಮುಂದಿನ ಬೇಸಿಗೆ ಮುಗಿಯುವುದರೊಳಗಾಗಿ ಯೋಜನೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ.

ಬೃಂದಾವನ ನೃತ್ಯ ಕಾರಂಜಿ ಉನ್ನತೀಕರಿಸಿ ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಬೇಕೆಂದು ಕಾವೇರಿಗೆ ಬಾಗಿನ ಸಮರ್ಪಣೆ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಹೆಚ್.ಡಿ.ಕುಮಾರಸ್ವಾಮಿ ಸಿಎಂ ಆಗಿದ್ದಾಗ ಡಿಸ್ನಿಲ್ಯಾಂಡ್ ಮಾದರಿಯಲ್ಲಿ ಕೆಆರ್‌ಎಸ್‌ಅನ್ನು ಅಭಿವೃದ್ಧಿಪಡಿಸಲು ಮುಂದಾಗಿ ಯೋಜನೆಗೆ ಡಿಪಿಆರ್ ಕೂಡ ಸಿದ್ಧಪಡಿಸಲಾಗಿತ್ತು.

ಆದರೆ ರೈತ ಸಂಘ, ಪರಿಸರವಾದಿಗಳು ಹಾಗೂ ಇನ್ನಿತರ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು. ಇತ್ತ ಯೋಜನೆ ಬಗ್ಗೆ ನಿರ್ಧಾರ ಕೈಗೊಳ್ಳುವ ಮುನ್ನವೇ ಸಮ್ಮಿಶ್ರ ಸರ್ಕಾರ ಪತನವಾಗಿ, ಯೋಜನೆಯೂ ನೆನೆಗುದಿಗೆ ಬಿದ್ದಿತ್ತು ಇದೀಗ ಕೆಆರ್‌ಎಸ್‌ನ ಬೃಂದಾವನ ಮತ್ತು ನೃತ್ಯ ಕಾರಂಜಿಯನ್ನು ಪುನರುಜ್ಜೀವನಗೊಳಿಸಲು ಮುಖ್ಯಮಂತ್ರಿಗಳು ಮುಂದಾಗಿದ್ದಾರೆ.



ಮೈಸೂರಿನ ಹೆಬ್ಬಾಳು ಶ್ರೀಕಾಳಿಕಾಂಬ ದೇವಸ್ಥಾನದಲ್ಲಿ ನಡೆದ ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಎಲ್ ನಾಗೇಂದ್ರ ಭಾಗವಹಿಸಿದ್ದರು. ಈ ವೇಳೆ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ವಿಶ್ವಕರ್ಮ ಸಮುದಾಯದ ಮುಖಂಡರಾದ ದಕ್ಷಿಣ ಮೂರ್ತಿ, ಈಶ್ವರಚಾರ್, ಪುಟ್ಟರಾಜು, ಮಂಜು, ರಾಮಚಂದ್ರಚಾರ್, ಸಿದ್ದಪ್ಪಾಜೀ, ನಂಜುಂಡಚಾರ್, ರಾಜು ಆಚಾರ್, ನರಸಿಂಹಚಾರ್, ನಾರಾಯಣಾಚಾರ್, ಯುವ ಮೋರ್ಚಾ ಮುಖಂಡರಾದ ಮಂಜೇಶ್, ಅವಿನಾಶ್, ಮಧು, ಇತರರು ಇದ್ದರು

ಗೊಂದಲದ ಗೂಡಾದ ನಂ.ಗೂಡು ನಗರಸಭೆ ಸಾಮಾನ್ಯ ಸಭೆ

ಆಡಳಿತ, ವಿಪಕ್ಷ ಸದಸ್ಯರ ಆರೋಪ-ಪ್ರತ್ಯಾರೋಪ, ಕೈ ಕೈ ಮಿಲಾಯಿಸಲು ಮುಂದಾದ ಸದಸ್ಯರು

ನಂಜನಗೂಡು, ಜು.22- ಇಲ್ಲಿನ ನಗರಸಭೆಯಲ್ಲಿ ಶುಕ್ರವಾರ ನಡೆದ ಸಾಮಾನ್ಯ ಸಭೆ ಆಡಳಿತ ಪಕ್ಷ ಬಿಜೆಪಿ ಹಾಗೂ ವಿಪಕ್ಷ ಕಾಂಗ್ರೆಸ್ ಸದಸ್ಯರ ಪರಸ್ಪರ ಆರೋಪ-ಪ್ರತ್ಯಾರೋಪದಿಂದಾಗಿ ಗೊಂದಲದ ಗೂಡಾಯಿತಲ್ಲದೆ, ತಳ್ಳಾಟ-ನೂಕಾಟದ ಪ್ರಸಂಗ ಜರುಗಿತು.

ಸಭೆ ಆರಂಭದಲ್ಲೇ ಜೆಡಿಎಸ್ ಸದಸ್ಯ ಖಾಲಿದ್ ಅಹಮದ್ ಅಧ್ಯಕ್ಷರ ಬಳಿಗೆ ಬಂದು ಸಭೆಯಲ್ಲಿ ಹೇಳುವುದು ಒಂದು, ಆದರೆ ರೆಜುಲೇಷನ್‌ನಲ್ಲಿ ದಾಖಲು ಮಾಡುವುದು ಮತ್ತೊಂದು ಎಂದು ಆರೋಪಿಸಿ ಸದನದ ಮುಂಭಾಗ ವಾಗ್ವಾದಕ್ಕಿಳಿದರು. ಇವರಿಗೆ ಧ್ವನಿಗೂಡಿಸಿದ ಕಾಂಗ್ರೆಸ್ ಸದಸ್ಯರಾದ ಎಸ್.ಪಿ. ಮಹೇಶ್, ಗಂಗಾಧರ್, ಪ್ರದೀಪ್, ಶ್ರೀಕಂಠಸ್ವಾಮಿ ಅಧ್ಯಕ್ಷ ಮಹದೇವಸ್ವಾಮಿ ಅವರು ಸಭೆಯಲ್ಲಿ ವ್ಯಕ್ತವಾಗುವ ನಿರ್ಧಾರದಂತೆ ನಡಾವಳಿ ಬರೆಸುತ್ತಿಲ್ಲ. ಆಡಳಿತ ಪಕ್ಷದವರು ತಮಗೆ ಇಷ್ಟ ಬಂದ ಹಾಗೇ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಆಪಾದಿಸಿದರು.

ಇನ್ನು ಆಡಳಿತ ಪಕ್ಷದ ಸದಸ್ಯರಾದ ಕಪಿಲೇಶ್, ಮಹದೇವಪ್ರಸಾದ್, ದೇವ ಸೇರಿದಂತೆ ಎಲ್ಲರೂ ವಿಪಕ್ಷದ ಸದಸ್ಯರ ವರ್ತನೆ ಖಂಡಿಸಿ ವಾಗ್ವಾದಕ್ಕಿಳಿದರು. ಇದರಿಂದ ಪರಿಸ್ಥಿತಿ ಬಿಗಡಾಯಿಸಿ ಸಭೆ ಗೊಂದಲದ ಗೂಡಾಯಿತು. ಈ ವೇಳೆ ಪ್ರತಿಕ್ರಿಯಿಸಿದ ಅಧ್ಯಕ್ಷ ಮಹದೇವಸ್ವಾಮಿ, ನೀವು ರೌಡಿಸಂ, ಗೂಂಡಾಗಿರಿ ಮಾಡಬೇಡಿ ಎಂದು ಹರಿಹಾಯ್ದರು. ಇದರಿಂದ ಮತ್ತಷ್ಟು ಕೋಪಗೊಂಡ ಸದಸ್ಯರು ಉದ್ರಿಕ್ತರಾಗಿ ಕೈ ಕೈ ಮಿಲಾಯಿಸಲು ಮುಂದಾದರು. ಈ ವೇಳೆ ಮಧ್ಯ ಪ್ರವೇಶಿಸಿದ ಪೌರಾಯುಕ್ತ ರಾಜಣ್ಣ ಎಲ್ಲರನ್ನು ಸಮಾಧಾನಗೊಳಿಸಿದರು.



ನಂಜನಗೂಡಿನ ನಗರಸಭೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್, ಜೆಡಿಎಸ್ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು.

ಇದಕ್ಕೂ ಮುನ್ನ ಆಡಳಿತ ಪಕ್ಷದ ಸದಸ್ಯ ದೊರೆಸ್ವಾಮಿ ಜೂನಿಯರ್ ಕಾಲೇಜು-ಖಾಸಗಿ ಹೋಟೆಲ್ ನಡುವಿನ ಗಲ್ಲಿಯ ಜಾಗಕ್ಕೆ 20 ಸಾವಿರ ರೂ. ಬಾಡಿಗೆ ನಿಗದಿ ಮಾಡಲು ನಿಮಗೆ ಯಾರು ಅಧಿಕಾರ ಕೊಟ್ಟವರು? ಎಂದು ಅಧ್ಯಕ್ಷರನ್ನು ಪ್ರಶ್ನಿಸಿದರು. ನಾಮನಿರ್ದೇಶಿತ ಸದಸ್ಯ ರಂಗಸ್ವಾಮಿ ಮಾತನಾಡಿ, ನಗರದ ಟೌನ್ ಟೆನ್ನಿಸ್ ಕ್ಲಬ್‌ಗೆ ನೀಡಿರುವ ಜಾಗದಲ್ಲಿ ವಾಣಿಜ್ಯ ಮಳಿಗೆ ನಿರ್ಮಾಣ ಮಾಡಲಾಗಿದೆ. ವಾಣಿಜ್ಯ ಸಂಕೀರ್ಣ ನಗರಸಭೆ ಆಸ್ತಿಯಾಗಿದೆ. ಈ ಬಗ್ಗೆ ನಾನು ಲೋಕಾಯುಕ್ತಕ್ಕೆ ದೂರು ನೀಡಿದರೂ, ಸರಿಯಾದ ಮಾಹಿತಿ ಒದಗಿಸಿಲ್ಲ ಎಂದು ದೂರಿದರು.

ಕಳೆದ 45 ವರ್ಷಗಳ ಹಿಂದೆ ವರ್ಷಕ್ಕೆ 1 ರೂ. ನಂತೆ 99 ವರ್ಷಗಳ ಕಾಲ ಆ ಜಾಗವನ್ನು ಭೋಗ್ಯಕ್ಕೆ ನೀಡಲಾಗಿದೆ ಎಂಬ ದಾಖಲೆ ನಗರಸಭೆಯಲ್ಲಿದೆ. ಈ ಬಗ್ಗೆ ಮತ್ತೊಮ್ಮೆ ದಾಖಲೆ ಪರಿಶೀಲಿಸಿ ಮಾಹಿತಿ ನೀಡುವುದಾಗಿ ಪೌರಾಯುಕ್ತ ರಾಜಣ್ಣ ಪ್ರತಿಕ್ರಿಯಿಸಿದರು.

ಶ್ರೀಕಂಠೇಶ್ವರಸ್ವಾಮಿ ದೇಗುಲದ 300 ಮೀ. ಸುತ್ತಳತೆಯಲ್ಲಿ ದೇಗುಲ ಆಡಳಿತ ಮಂಡಳಿ ವಾಹನಗಳ ಪಾರ್ಕಿಂಗ್ ಟೆಂಡರ್ ಕರೆದು ಗುತ್ತಿಗೆ ನೀಡಿದೆ. ಆದರೂ ನಗರಸಭೆಯಿಂದ ನೆಲಬಾಡಿಗೆ ವಸೂಲಿ ಗುತ್ತಿಗೆ ಜೊತೆಗೆ ದೇಗುಲದ ಸುತ್ತಮುತ್ತ ಪಾರ್ಕಿಂಗ್ ವಸೂಲಿಗೆ ಗುತ್ತಿಗೆ ನೀಡಿರುವುದು ಕಾನೂನು ಬಾಹಿರ ಎಂದು ಸದಸ್ಯ ಎನ್.ಸಿ.ಬಸವಣ್ಣ ಆರೋಪಿಸಿದರು.

ಶಾಲಾ ಕಾಲೇಜು ಸುತ್ತಲಿನ 100 ಮೀಟರ್ ಸುತ್ತಳತೆಯಲ್ಲಿ ಬೀಡಿ, ಸಿಗರೇಟ್, ಮಾದಕ ವಸ್ತುಗಳ ಮಾರಾಟ ಅಂಗಡಿಗಳು ಕಾನೂನು ಬಾಹಿರವಾಗಿ ತಲೆ ಎತ್ತಿದ್ದು ತೆರವುಗೊಳಿಸುವಂತೆ ಸದಸ್ಯ ಕಪಿಲೇಶ್ ಒತ್ತಾಯಿಸಿದರು. ಸದಸ್ಯ ಪ್ರದೀಪ್ ಮಾತನಾಡಿ, ನಗರಸಭೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ನಗರಸಭಾಧ್ಯಕ್ಷ 8 ಮಂದಿ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಿದ್ದಾರೆ. ಅವರಿಗೆ ಅಭಿನಂದನೆಗಳು. ಆದರೆ ನಗರದ ಖಾಸಗಿ ವ್ಯಕ್ತಿಯೊಬ್ಬರು ವರ್ಗಾವಣೆ ಬೆದರಿಕೆವೊಡ್ಡಿ ಅಧಿಕಾರಿಗಳಿಗೆ ಕಿರುಕುಳ ನೀಡುತ್ತಿರುವುದಾಗಿ ಅಧಿಕಾರಿಗಳು ನನ್ನಲ್ಲಿ ನೋವು ತೋಡಿಕೊಂಡಿದ್ದಾರೆ ಎಂದರು.

ಸಭೆಯಲ್ಲಿ ನಗರಸಭೆ ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ ನಾಗರಾಜು, ಎಇಇ ಶ್ರೀನಿವಾಸ್, ಸದಸ್ಯ ಪ್ರದೀಪ್ ಇತರೆ ಸದಸ್ಯರು ಉಪಸ್ಥಿತರಿದ್ದರು.

ಪಿ.ಪಟ್ಟಣ ಪ್ರೆಸ್‌ಕ್ಲಬ್‌ಗೆ ಸತೀಶ್ ಆರಾಧ್ಯ ಅಧ್ಯಕ್ಷ

ಪಿರಿಯಾಪಟ್ಟಣ, ಜು.22- ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಅಧ್ಯಕ್ಷರಾಗಿ ಸತೀಶ್ ಆರಾಧ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬೆಕ್ಕರೆ ಸತೀಶ್ ಆರಾಧ್ಯ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ್ ಹಾಗೂ ಸಹಾಯಕ ಚುನಾವಣಾಧಿಕಾರಿ ಪತ್ರಕರ್ತರ ಸಂಘದ ಜಿಲ್ಲಾ ಖಜಾಂಚಿ ನಾಗೇಶ್ ಪಾಣತ್ತಲೆ ಅವಿರೋಧ ಆಯ್ಕೆ ಘೋಷಿಸಿದರು.



ನೂತನ ಪದಾಧಿಕಾರಿಗಳು: ಬೆಕ್ಕರೆ ಸತೀಶ್ ಆರಾಧ್ಯ (ಅಧ್ಯಕ್ಷ), ರಾಜೇಂದ್ರ ಬಿಲಿಗೆರೆ (ಉಪಾಧ್ಯಕ್ಷ), ಪ್ರಸನ್ನ ಪಿ.ಡಿ (ಪ್ರಧಾನ ಕಾರ್ಯದರ್ಶಿ), ಅಶೋಕ್.ಎಸ್ (ಕಾರ್ಯದರ್ಶಿ), ಪಿ.ಎನ್ ದೇವೇಗೌಡ (ಖಜಾಂಚಿ), ಕಾರ್ಯಕಾರಿ ಸಮಿತಿ ಸದಸ್ಯರಾಗಿ ಪಿ.ಎಸ್. ವೀರೇಶ್, ಇಮ್ತಿಯಾಜ್ ಅಹಮದ್, ಬೆಟ್ಟದಪುರ ಪ್ರಸನ್ನ ಕುಮಾರ್, ಕೆ.ಶಿವಣ್ಣ, ಸದಾಶಿವ, ಬಿ.ಎಂ.ಸ್ವಾಮಿ, ಎಚ್.ಕೆ.ಮಹೇಶ್ ಆಯ್ಕೆಯಾಗಿದ್ದಾರೆ.

ಅಕ್ರಮವಾಗಿ ಹಾಲಿನ ಪೌಡರ್ ಸಾಗಿಸುತ್ತಿದ್ದವನ ಬಂಧನ

ಮಲ್ಕುಂಡಿ, ಜು.22- ಅಂಗನವಾಡಿಗಳಿಗೆ ಪೂರೈಕೆಯಾಗುವ ಹಾಲಿನ ಪೌಡರ್ ಅನ್ನು ಅಕ್ರಮವಾಗಿ ಕೊಂಡೊಯ್ಯುತ್ತಿದ್ದ ವ್ಯಕ್ತಿಯೋರ್ವನನ್ನು ಗ್ರಾಮಸ್ಥರೇ ಹಿಡಿದು ಅಧಿಕಾರಿಗಳ ವಶಕ್ಕೆ ನೀಡಿರುವ ಘಟನೆ ತಾಲೂಕಿನ ಮಡುವಿನಹಳ್ಳಿಯಲ್ಲಿ ನಡೆದಿದೆ.



ನರಸೀ ಗ್ರಾಮದ ಜಗದೀಶ್ ಎಂಬಾತ ಮಡುವಿನಹಳ್ಳಿ ಅಂಗನವಾಡಿ ಕೇಂದ್ರವೊಂದರಿಂದ ಅರ್ಧ ಕೆಜಿ ತೂಕದ 128 ಪ್ಯಾಕೆಟ್ ಹಾಲಿನ ಪುಡಿಯನ್ನು ಬೈಕ್‌ನಲ್ಲಿ ಕೊಂಡೊಯ್ಯುತ್ತಿದ್ದ ವೇಳೆ ಸ್ಥಳೀಯ ಗ್ರಾಮಸ್ಥರು ಅನುಮಾನಗೊಂಡು ಪ್ರಶ್ನಿಸಿದ್ದಾರೆ. ಈ ವೇಳೆ ಚೀಲದಲ್ಲಿ ಮಕ್ಕಳು ಮತ್ತು ಗರ್ಭಿಣಿ ಮಹಿಳೆಯರಿಗೆ ವಿತರಿಸಬೇಕಿದ್ದ ಹಾಲಿನ ಪೌಡರನ್ನು ಅಕ್ರಮವಾಗಿ ಸಾಗಿಸುತ್ತಿರುವುದು ಪತ್ತೆಯಾಗಿದೆ. ಅನಂತರ ಗ್ರಾಮಸ್ಥರು ಪ್ರಶ್ನಿಸಿದಾಗ ಸ್ಥಳೀಯ ಅಂಗನವಾಡಿ ಕೇಂದ್ರದ ಸಿಬ್ಬಂದಿ ಮಂಜುಳಾ ಎಂಬುವರಿಂದ ಹಾಲಿನ ಪೌಡರ್ ಖರೀದಿಸಿರುವುದಾಗಿ ಮಾಹಿತಿ ನೀಡಿದ್ದಾನೆ. ಈ ಕುರಿತು ಗ್ರಾಮಸ್ಥರು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಬಳಿಕ ಸ್ಥಳಕ್ಕಾಗಮಿಸಿದ ಸಹಾಯಕ ಶಿಶು ಅಭಿವೃದ್ಧಿ ಅಧಿಕಾರಿ ನಾರಾಯಣ್ ಅಕ್ರಮವಾಗಿ ಸಾಗಿಸುತ್ತಿದ್ದ ಹಾಲಿನ ಪೌಡರ್ ಅಂಗನವಾಡಿ ಕೇಂದ್ರಗಳಿಗೆ ವಿತರಿಸಲಾಗಿತ್ತು ಎಂಬುದನ್ನು ಖಚಿತಪಡಿಸಿದ್ದಲ್ಲದೆ ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದರು. ಬಳಿಕ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ.

ಗ್ರಾಮಸ್ಥರ ಆಕ್ರೋಶ: ನಂಜನಗೂಡು ತಾಲೂಕಿನಾದ್ಯಂತ ಈ ದಂಧೆ ರಾಜಾರೋಷವಾಗಿ ನಡೆಯುತ್ತಿದೆ. ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಇದೀಗ ಪ್ರಕರಣ ಬೆಳಕಿಗೆ ಬಂದಿದ್ದು, ಆರೋಪಿ ಸೇರಿದಂತೆ ಹಾಲಿನ ಪೌಡರ್ ಸಾಗಣೆಗೆ ಸಹಕರಿಸಿದ ಅಂಗನವಾಡಿ ಮೇಲ್ವಿಚಾರಕಿ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದೆಂದು ಮಡುವಿನಹಳ್ಳಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ನೀರನ್ನು ಮಿತವಾಗಿ ಬಳಸಿ: ಸಾ.ರಾ.ಮಹೇಶ್

ಚುಂಚನಕಟ್ಟೆ, ಜು.22- ಜೀವಜಲ ನೀರನ್ನು ರೈತರು ಮಿತವಾಗಿ ಬಳಕೆ ಮಾಡಬೇಕು ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.



ಸಾಲಿಗ್ರಾಮ ತಾಲೂಕಿನ ಬಳ್ಳೂರು ಅಣೆಕಟ್ಟು ಬಳಿ ನಾಲೆಗಳಿಗೆ ನೀರು ಹರಿಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರೈತರು ತಮಗೆ ಅಗತ್ಯವಿರುವಷ್ಟು ನೀರನ್ನು ಬಳಕೆ ಮಾಡಿಕೊಂಡು ಇತರರಿಗೂ ಅನುಕೂಲ ಕಲ್ಪಿಸಬೇಕು ಎಂದರು.

ಕಾವೇರಿ ನದಿ ಪಾತ್ರದ ವಿವಿಧ ನಾಲೆಗಳ ವ್ಯಾಪ್ತಿಯಲ್ಲಿ 33 ಸಾವಿರ ಹೆಕ್ಟೇರ್ ನೀರಾವರಿ ಪ್ರದೇಶವಿದ್ದು, ನಾನು ಶಾಸಕನಾದ ನಂತರ 20 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನ ಮಾಡಿರುವ ಏತ ನೀರಾವರಿಯಿಂದ 25 ಸಾವಿರ ಹೆಕ್ಟೇರ್ ಜಮೀನಿಗೆ ನೀರು ಒದಗಿಸಲಾಗುತ್ತಿದೆ ಎಂದು. ಕೃತ್ತಿಪುರ, ರಾಮಸಮುದ್ರ ಚಾಮರಾಜ ಎಡ ಮತ್ತು ಬಲದಂಡೆ ಹಾಗೂ ಮಿರ್ಲೆ ಶ್ರೇಣಿ ನಾಲೆಗಳಿಗೆ ಇಂದಿನಿಂದಲೇ ನೀರು ಹರಿಸಲಾಗುತ್ತಿದ್ದು, ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳು ನಾಲೆಗಳ ಏರಿ ಮೇಲೆ ಸಂಚಾರ ಮಾಡಿ ಯಾವುದೇ ಸಮಸ್ಯೆಗಳಿದ್ದರೂ, ಕೂಡಲೇ ನನ್ನ ಗಮನಕ್ಕೆ ತರಬೇಕೆಂದು ತಾಕೀತು ಮಾಡಿದರು.

ಚುಂಚನಕಟ್ಟೆ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ಆ.18ರಿಂದ ಕಬ್ಬು ಅರೆಯುವ ಕಾರ್ಯ ಆರಂಭಿಸಲಿದ್ದು, ಅಲ್ಲಿಯವರೆಗೆ ರೈತರು ಹೊರ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳಿಗೆ ತಾವು ಬೆಳೆದಿರುವ ಕಬ್ಬು ಸರಬರಾಜು ಮಾಡಲು ಸಂಬಂಧಿಸಿದ ಅಧಿಕಾರಿಗಳು ಮತ್ತು ಕಾರ್ಖಾನೆಯ ಮಾಲೀಕರೊಂದಿಗೆ ಮಾತುಕತೆ ನಡೆಸಿ ಅನುಕೂಲ ಕಲ್ಪಿಸಿದ್ದೇನೆ ಎಂದು ಸಚಿವ ಹೇಳಿದರು.

ಕಳೆದ 10 ವರ್ಷಗಳಿಂದ ಕಬ್ಬು ಅರೆಯುವ ಕಾರ್ಯ ಸ್ಥಗಿತಗೊಳಿಸಿರುವ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ಆರಂಭವಾದರೆ ಈ ಭಾಗದ ಎಲ್ಲಾ ಜನರ ಆರ್ಥಿಕ ಸ್ಥಿತಿ ಉತ್ತಮವಾಗಲಿದ್ದು, ರೈತರ ಜಮೀನಿನಲ್ಲಿ 5 ಲಕ್ಷ ಟನ್ ಕಬ್ಬು ಬೆಳೆಯಬಹುದಾಗಿದೆ. ಎಲ್ಲರೂ ಇದರ ಪ್ರಯೋಜನ ಪಡೆಯಬೇಕು ಎಂದರು.

ಸಾಲಿಗ್ರಾಮ ಗ್ರಾಪಂ ಪ್ರಭಾರ ಅಧ್ಯಕ್ಷೆ ಸುಧಾ, ಹರದನಹಳ್ಳಿ ಗ್ರಾಪಂ ಅಧ್ಯಕ್ಷೆ ನಂದಿನಿ, ಸಾಲಿಗ್ರಾಮ ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ, ಉಪಾಧ್ಯಕ್ಷ ಮಿರ್ಲೆ ತುಕಾರಾಮ್, ಗ್ರಾಪಂ ಸದಸ್ಯರಾದ ಎಸ್.ಆರ್.ಪ್ರಕಾಶ್, ಬಾಲಾಜಿ ಗಣೇಶ್, ಸುನೀಲ್, ಮಾಜಿ ಸದಸ್ಯ ಆಯಾಜ್ ಅಹಮದ್, ಜೆಡಿಎಸ್ ಮುಖಂಡರಾದ ಕೆಜೆ.ಕುಚೇಲ, ರಮೇಶ್, ಶಂಕರ್, ಗೌತಮ್, ತುಳಸಿರಾಮ್, ಹುಲ್ಲೇಗೌಡ, ಮೋಹನ್ ಕುಮಾರ್, ತಾಪಂ ಇಒ ಎಚ್.ಕೆ.ಸತೀಶ್, ಜಲಸಂಪನ್ಮೂಲ ಇಲಾಖೆ ಕಾರ್ಯಪಾಲಕ ಅಭಿಯಂತರ ಜಿ.ಜೆ.ಈರಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ರವಿಕುಮಾರ್, ಗುರುರಾಜ್, ವೆಂಕಟೇಶ್, ಇನ್ಸ್‌ಪೆಕ್ಟರ್ ಆರ್.ಶ್ರೀಕಾಂತ್ ಇದ್ದರು.

ತಾರಕದಿಂದ 415 ಕ್ಯೂಸೆಕ್ ನೀರು ಹರಿವು



ಹೆಚ್.ಡಿ.ಕೋಟೆ, ಜು.22- ತಾಲೂಕಿನ ತಾರಕ ಜಲಾಶಯದಿಂದ ಶುಕ್ರವಾರ ನದಿಗೆ 415 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ.

ತಾರಕ ಜಲಾನಯನ ಪ್ರದೇಶದಲ್ಲಿ ಅತೀ ಹೆಚ್ಚು ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ 1639 ಕ್ಯೂಸೆಕ್ ಒಳಹರಿವು ಬರುತ್ತಿರುವ ಹಿನ್ನೆಲೆಯಲ್ಲಿ ಜಲಾಶಯದಿಂದ 415 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ. ಜಲಾಶಯದ ಗರಿಷ್ಠ ಮಟ್ಟ 2425 ಅಡಿಗಳಾಗಿದ್ದು, ಪ್ರಸ್ತುತ 2423 ಅಡಿ ನೀರು ಸಂಗ್ರಹವಾಗಿದೆ. ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಜಲಾಶಯದ ಮೂರು ಗೇಟ್‌ಗಳ ಪೈಕಿ 1 ಗೇಟ್‌ನಿಂದ ನೀರು ಹರಿಸಲಾಗುತ್ತಿದೆ ಎಂದು ಸಹಾಯಕ ಇಂಜಿನಿಯರ್ ಮಂಜುನಾಥ್ ತಿಳಿಸಿದ್ದಾರೆ. ರಾತ್ರಿ ವೇಳೆ ಇನ್ನೂ ಹೆಚ್ಚಿನ ನೀರನ್ನು ನದಿಗೆ ಬಿಡುವ ಸಾಧ್ಯತೆ ಇರುವುದರಿಂದ ನದಿ ಪಾತ್ರದ ಜನತೆ ಸುರಕ್ಷಿತ ಸ್ಥಳಕ್ಕೆ ತೆರಳಬೇಕು ಎಂದು ತಿಳಿಸಿದ್ದಾರೆ.



ನಂಜನಗೂಡು ತಾಲೂಕಿನ ಹೆಡತಲೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಬೂಸ್ಟರ್ ಡೋಸ್ ನೀಡಲಾಯಿತು. ತಾಪಂ ಸದಸ್ಯ ಮಹದೇವ ನಾಯಕ ಅವರಿಗೆ ಡಾ.ಅರ್ಚನಾ ಲಸಿಕೆ ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ಪಿಎಸಿಎಸ್ ಅಧ್ಯಕ್ಷ ಪುಟ್ಟರಾಜು, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಮಹೇಶ್, ಮೆಕಾನಿಕ್, ಆಶಾ ಕಾರ್ಯಕರ್ತೆಯರು, ಆರೋಗ್ಯ ಸಿಬ್ಬಂದಿ ಹಾಜರಿದ್ದರು.



ಮೈಸೂರು ತಾಲೂಕಿನ ಕಡಕೊಳ ಗ್ರಾಮದ ಕಾಳಿಕಾಂಬ ದೇವಸ್ಥಾನದಲ್ಲಿ ಆಷಾಢ ಮಾಸದ ಕೊನೆ ಶುಕ್ರವಾರದ ಅಂಗವಾಗಿ ವಿಶೇಷ ಪೂಜೆ ಏರ್ಪಡಿಸಲಾಗಿತ್ತು ಈ ವೇಳೆ ಕಡಕೊಳ ಹಾಗೂ ಸುತ್ತಮುತ್ತಲಿನ ಸಾವಿರಾರು ಭಕ್ತರು ದೇವರ ದರ್ಶನ ಪಡೆದರು. ಗ್ರಾಮದ ಸಂಘ ಸಂಸ್ಥೆಗಳಿಂದ ಭಕ್ತರಿಗೆ ಪ್ರಸಾದ ವಿನಿಯೋಗ ನಡೆಯಿತು.

ಕಟಾಚಾರಕ್ಕೆ ಖರ್ಚು-ಜಮಾ ಪ್ರಸ್ತಾವ ಮಂಡನೆ

ಪುರಸಭೆ ಸಾಮಾನ್ಯ ಸಭೆಯಲ್ಲಿ ಬಿಜೆಪಿ ಸದಸ್ಯರ ಆಕ್ಷೇಪ



ತಿ.ನರಸೀಪುರ, ಜು.22- ಪುರಸಭೆಯ 3 ತಿಂಗಳ ಜಮಾ ಖರ್ಚುಗಳನ್ನು ಸರಿಯಾಗಿ ಮಂಡಿಸಿಲ್ಲ. ಯಾವುದೇ ಸಹಿ, ಮೊಹರಿಲ್ಲ ಎಂದು ಪಟ್ಟಣದ ಪುರಸಭಾ ಕಚೇರಿ ಸಭಾಂಗಣದಲ್ಲಿ ಅಧ್ಯಕ್ಷ ಎಸ್. ಮದನ್‌ರಾಜ್ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

ಸಭೆಯಲ್ಲಿ ಮಾತನಾಡಿದ ಬಿಜೆಪಿ ಸದಸ್ಯ ಆರ್.ಅರ್ಜುನ್, ಜಮಾ ಖರ್ಚು ಮಂಡಿಸುವಾಗ ದಾಖಲೆಗಳಿಗೆ ಸೀಲು, ಸಹಿ ಇದ್ದರೆ ಅದು ಅಧಿಕೃತ ಎನ್ನಬಹುದು. ಸಹಿ ಇಲ್ಲದಿದ್ದರೆ ಅದು ಅಧಿಕೃತವಾಗುವುದೇ, ಹೇಗೂ ಅನುಮೋದನೆ ಪಡೆದು ಸಭೆ ಮುಗಿಸಿದರೆ ಸಾಕು. ಕಾಟಾಚಾರಕ್ಕೆ ಸಭೆ ನಡೆಸುತ್ತೀರಾ. ಇದಕ್ಕೆ ನಾವು ಏಕೆ ಮೋದನೆ ಕೊಡಬೇಕಾ ನೀವೇ ಹೇಳಿ. ಅಧ್ಯಕ್ಷರು ಎಂದರೆ ಅದಕ್ಕೊಂದು ಘನತೆ ಇರುತ್ತದೆ. ಆದರೆ ಮುಖ್ಯಾಧಿಕಾರಿಗಳು ಈ ರೀತಿ ಬೇಜವಾಬ್ದಾರಿ ತೋರುತ್ತಿರುವುದು ಖಂಡನೀಯ. ಸದಸ್ಯರಿಗೆ ಇಲ್ಲಿ ಮೂರು ಕಾಸಿನ ಬೆಲೆ ಇಲ್ಲ. ಬಿಜೆಪಿ ಸದಸ್ಯರನ್ನು ತೇಜೋವಧೆ ಮಾಡುತ್ತಿದ್ದೀರಾ. ಮುಂದಿನ ದಿನಗಳಲ್ಲಿ ಇದು ಸರಿಯಾಗಲಿಲ್ಲ ಎಂದರೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ ಅವರು, ಕಂದಾಯ ಪಾವತಿಸಲು ಬಂದವರಿಂದಲೂ ಕೂಡ ಕಂದಾಯ ಕಟ್ಟಿಸಿಕೊಳ್ಳಲು ನಿಮ್ಮಿಂದ ಸಾಧ್ಯವಾಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಭೆ ಕರೆಯುವ ಮುನ್ನ ವಾರ್ಡ್ ಸದಸ್ಯರ ಜತೆ ಚರ್ಚಿಸಿ, ವಾರ್ಡ್ ಸಮಸ್ಯೆಗಳ ಬಗ್ಗೆ ಅಜೆಂಡಾದಲ್ಲಿ ನಮೂದಿಸಿದರೆ ಸಮಸ್ಯೆ ಬಗೆಹರಿಸಲು ಸಾಧ್ಯವಾಗುತ್ತದೆ ಎಂದರು.

ಸದಸ್ಯ ಎಸ್.ಕೆ.ಕಿರಣ್ ಮಾತನಾಡಿ, ಪಟ್ಟಣದ ರಸ್ತೆಗಳು ಹಾಳಾಗಿವೆ. ಇದರಿಂದ ಜನರು ನಮ್ಮನ್ನು ನಿಂದಿಸುತ್ತಿದ್ದಾರೆ. ಪಟ್ಟಣ ಅಭಿವೃದ್ಧಿಯಾಗುತ್ತಿಲ್ಲ, ಜನಸಾಮಾನ್ಯರ ಕೆಲಸ ಪುರಸಭೆಯಲ್ಲಿ ಆಗುತ್ತಿಲ್ಲ. ಹೀಗಾದರೆ ನಾವು ಜನರಿಗೆ ಏನು ಉತ್ತರ ಕೊಡುವುದು ಹೇಳಿ ಎಂದು ಅಧ್ಯಕ್ಷರನ್ನು ಪ್ರಶ್ನಿಸಿದರು.

ಪಟ್ಟಣದ ಹುಲ್ಲಹಳ್ಳಿ ನಾಲಾ ರಸ್ತೆಯ ಇಂದಿರಾ ಕಾಲೋನಿ ರಸ್ತೆಯಲ್ಲಿರುವ ಸರ್ಕಾರಿ ಜಾಗವನ್ನು ಹಿಂದಿನ ಮುಖ್ಯಾಧಿಕಾರಿ ಅಶೋಕ್ ಅವರು ಕೆಎಂಎಫ್ 24, ಇ-ಖಾತೆ, ಪರವಾನಗಿ ನೀಡಿದ್ದು ಅಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಿಸಲಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿ, ಜಿಲ್ಲಾ ಉಸ್ತುವಾರಿ ಸಚಿವರಿಗೆ ದೂರು ನೀಡಿದ್ದು, ಕೂಡಲೇ ಅಕ್ರಮ ಕಟ್ಟಡ ತೆರವುಗೊಳಿಸಿ ಸರ್ಕಾರಿ ಆಸ್ತಿ ಉಳಿಸಬೇಕೆಂದು ಆಗ್ರಹಿಸಿದರು.

ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ಮಾತನಾಡಿ, ಪುರಸಭಾ ವ್ಯಾಪ್ತಿಯ ಸಮಗ್ರ ಅಭಿವೃದ್ಧಿಗೆ ಬದ್ಧವಾಗಿದ್ದೇವೆ. ಸ್ವಲ್ಪ ನಮಗೂ ಅವಕಾಶ ನೀಡಿ. ಅನಗತ್ಯ ಗೊಂದಲ ಮಾಡಬೇಡಿ. ಇಂಜಿನಿಯರ್ ಸಿದ್ದಪ್ಪ ಎಂಬುವವರನ್ನು ನಿಯೋಜಿಸಲಾಗಿದೆ. ಸದ್ಯದಲ್ಲೇ ಪಟ್ಟಣದ ಅಭಿವೃದ್ಧಿ ಕಾಮಗಾರಿ ಕಾರ್ಯಗಳನ್ನು ಕೈಗೊಳ್ಳಲಾಗುವುದಾಗಿ ತಿಳಿಸಿದರು.

ಪುರಸಭೆಯಿಂದ ಕಾರ್ಯ ನಿರ್ವಹಿಸುತ್ತಿರುವ ಫಲ ತ್ಯಾಜ್ಯ ವಿಲೇವಾರಿ ಘಟಕ ಸ್ಥಿರಾಂತರ ಬಗ್ಗೆ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದು, ಸರ್ಕಾರ ಕೂಡ ಪುರಸಭೆಗೆ ಪರ್ಯಾಯ ಜಾಗ ಗೊತ್ತುಪಡಿಸಿದೆ. ಈ ಬಗ್ಗೆ ಈಗ ಸೂಚಿಸಿರುವ ನಿವೇಶನಕ್ಕೆ ಮೂಲ ಸೌಕರ್ಯ ಇರುವ ಬಗ್ಗೆ ಖಚಿತಪಡಿಸಿಕೊಳ್ಳುವುದು ಬಗ್ಗೆ ಸಭೆ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

ಜಮಾ ಖರ್ಚು, 15ನೇ ಹಣಕಾಸು ಯೋಜನೆಯಡಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಕರೆಯುವ ಟೆಂಡರ್, ಎಸ್‌ಎಫ್‌ಸಿ ಮುಕ್ತ ನಿಧಿ ಉಳಿಕೆ ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ, ಮೂಲ ಸೌಲಭ್ಯ ಮಂಜೂರು ಮಾಡುವ ನಿಷ್ಠೆ ದೇವಾಲಯ ಟ್ರಸ್ಟ್, ವೃದ್ಧಾಶ್ರಮ, ನಿವೇಶನ ಮಂಜೂರಾತಿ, ಪೌರಕಾರ್ಮಿಕರಿಗೆ ಸಮುದಾಯ ಭವನಕ್ಕೆ ನಿವೇಶನ ಮಂಜೂರಾತಿಗೆ ಸಂಬಂಧಿಸಿದಂತೆ ಅನುಮೋದನೆ ನೀಡಲಾಯಿತು.

ಸಭೆಯಲ್ಲಿ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಮಾತನಾಡಿದರು. ಉಪಾಧ್ಯಕ್ಷೆ ನಾಗರತ್ನ ಮಾದೇಶ್, ಮುಖ್ಯಾಧಿಕಾರಿ ಬಸವರಾಜು, ಮಾಜಿ ಅಧ್ಯಕ್ಷ ಸೋಮು, ಮಾಜಿ ಉಪಾಧ್ಯಕ್ಷೆ ಪ್ರೇಮ ಮರಿಯಪ್ಪ, ಬಾದಾಮಿ ಮಂಜು, ತುಂಬಲ ಪ್ರಕಾಶ್, ನಾಗರಾಜು, ಬೇಬಿ ಹೇಮಂತ್ ಕುಮಾರ್, ರೂಪ ಕರಿಯಪ್ಪ, ಮಂಜುನಾಥ್, ರೂಪ ಪರಮೇಶ್, ವಸಂತ ಶ್ರೀಕಂಠ, ಮಹದೇವಮ್ಮ, ಶೋಭಾರಾಣಿ ಮಲ್ಲೇಶ್, ಮಹದೇವಿ, ತೇಜಸ್ವಿನಿ ರಾಜು, ನಾಮ ನಿರ್ದೇಶಿತ ಸದಸ್ಯರಾದ ನಂಜುಂಡಸ್ವಾಮಿ, ಎನ್. ಲೋಕೇಶ್, ಲೆಕ್ಕಾಧಿಕಾರಿ ವಿನೋದ್, ಸಹಾಯ ಅಭಿಯಂತ ಲೋಕೇಶ್, ಆರೋಗ್ಯಾಧಿಕಾರಿ ಮಹೇಂದ್ರ, ಕಂದಾಯಾಧಿಕಾರಿ ಪುಟ್ಟಸ್ವಾಮಿ ಹಾಜರಿದ್ದರು.

ಸಯ್ಯದ್ ಅಹ್ಮದ್ ಪುರಸಭೆ ಸ್ಥಾಯಿ ಸಮಿತಿ ನೂತನ ಅಧ್ಯಕ್ಷ



ತಿ.ನರಸೀಪುರ, ಜು.22- ಪಟ್ಟಣದ ಪುರಸಭೆ ನೂತನ ಅಲ್ಪಸಂಖ್ಯಾತ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಸಯ್ಯದ್ ಅಹ್ಮದ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪುರಸಭೆಯಲ್ಲಿ ನಡೆದ ಸಾಮಾನ್ಯ ಸಭೆಗೂ ಮುನ್ನ ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆ ಬಗ್ಗೆ ಚರ್ಚಿಸಿ, ಒಟ್ಟು ಸದಸ್ಯರ ಪೈಕಿ 7 ಜನರ ಸಮಿತಿ ರಚಿಸಲಾಯಿತು. ಈ ವೇಳೆ ಬೇರೆ ಯಾರೂ ಸ್ಪರ್ಧಿಸದ ಕಾರಣ ಅಹ್ಮದ್ ಸಯ್ಯದ್ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡರು. ಉಳಿದಂತೆ ಪ್ರಕಾಶ್, ಮಹದೇವಮ್ಮ, ಬೇಬಿ ಹೇಮಂತ್ ಕುಮಾರ್, ಟಿ.ಎಂ.ನಂಜುಂಡಸ್ವಾಮಿ, ವಸಂತ, ಎಲ್.ಮಂಜುನಾಥ್, ಎಸ್. ಕೆ.ಕಿರಣ್ ಸಮಿತಿ ಸದಸ್ಯರಾಗಿದ್ದಾರೆ.

ಚುಚ್ಚು ಮದ್ದಿನಿಂದ ಕಾಲಿನ ಸ್ವಾಧೀನ ಕಳೆದುಕೊಂಡ ಬಾಲಕ

ಖಾಸಗಿ ಕ್ಲಿನಿಕ್ ವೈದ್ಯನ ವಿರುದ್ಧ ಡಿಹೆಚ್‌ಓಗೆ ಪೋಷಕರ ದೂರು

ಜಯಪುರ, ಜು.22- ಖಾಸಗಿ ಕ್ಲಿನಿಕ್‌ನ ವೈದ್ಯರೊಬ್ಬರು ನೀಡಿದ ಚುಚ್ಚು ಮದ್ದಿನಿಂದ ಬಾಲಕ ಕಾಲಿನ ಸ್ವಾಧೀನ ಕಳೆದುಕೊಂಡಿರುವ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಪೋಷಕರು ದೂರು ಸಲ್ಲಿಸಿದ್ದಾರೆ.



ಜಯಪುರ ಹೋಬಳಿಯ ಬರಡನಪುರ ಗ್ರಾಮದ ನಿವಾಸಿ ಬಸಪ್ಪ ಎಂಬುವವರ ಪುತ್ರ ಮಹೇಶ್(10) ಕಾಲಿನ ಸ್ವಾಧೀನ ಕಳೆದುಕೊಂಡ ಬಾಲಕ. ಈತನ ಎಡಗಾಲಿನ ಹೆಬ್ಬೆಟ್ಟಿಗೆ ಗಾಯವಾಗಿತ್ತು. ಹೀಗಾಗಿ ಪೋಷಕರು ಜಯಪುರದ ಬಸವೇಶ್ವರ ಬಡಾವಣೆಯಲ್ಲಿರುವ ಶ್ರೀನಿಧಿ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಕೊಡಿಸಿದ್ದಾರೆ. ಗಾಯ ವಾಸಿಯಾಗದ ಹಿನ್ನೆಲೆಯಲ್ಲಿ ಮರುದಿನ ವೈದ್ಯರನ್ನು ಸಂಪರ್ಕಿಸಿದಾಗ ಬಾಲಕನನ್ನು ಪರೀಕ್ಷಿಸಿ ವೈದ್ಯರು ಚುಚ್ಚುಮದ್ದು ನೀಡಿದ್ದಾರೆ. ಬಳಿಕ ಬಾಲಕನಿಗೆ ವಿಪರೀತ ನೋವುಂಟಾಗಿದೆ. ಇದರಿಂದ ಆತಂಕಕ್ಕೆ ಒಳಗಾದ ಪೋಷಕರು ಬಾಲಕನನ್ನು ಮೈಸೂರಿನ ಸ್ಟ್ರೋಕ್ ಕೇರ್‌ಗೆ ಕರೆತಂದು ಸಿಟಿ ಸ್ಕ್ಯಾನ್ ಮಾಡಿಸಿದ್ದಾರೆ. ವರದಿಯಲ್ಲಿ ಚುಚ್ಚುಮದ್ದನ್ನು ನರಕ್ಕೆ ಅಳವಡಿಸಿ ಚುಚ್ಚಿರುವುದರಿಂದ ಬಾಲಕ ಕಾಲು ಸ್ವಾಧೀನ ಕಳೆದುಕೊಂಡಿರುವುದಾಗಿ ಅಲ್ಲಿನ ವೈದ್ಯರು ಪೋಷಕರಿಗೆ ತಿಳಿಸಿ, ಕಾಲು ಸರಿ ಹೋಗುವವರೆಗೂ ಕರೆಂಟ್ ಶಾಕ್ ಕೊಡಿಸುವಂತೆ ಸೂಚಿಸಿದ್ದಾರೆ.

ಈ ಸಂಬಂಧ ಜಯಪುರದ ಶ್ರೀನಿಧಿ ಕ್ಲಿನಿಕ್ ವೈದ್ಯರನ್ನು ಪ್ರಶ್ನಿಸಿದ ಪೋಷಕರಿಗೆ ಆತ ಉಡಾಫೆ ಉತ್ತರ ನೀಡಿದ್ದು, ಕ್ಲಿನಿಕ್ ಬಾಗಿಲು ಬಂದ್ ಮಾಡಿ ಪರಾರಿಯಾಗಿದ್ದಾರೆ. ಇದರಿಂದ ನನ್ನ ಮಗನಿಗೆ ನಡೆಯಲು ಸಾಧ್ಯವಾಗುತ್ತಿಲ್ಲ. ಕಾಲಿನ ಸ್ವಾಧೀನ ಕಳೆದುಕೊಂಡು ನೋವನ್ನು ಅನುಭವಿಸುತ್ತಿದ್ದಾನೆ. ಬಡವರಾದ ನಮಗೆ ಹೆಚ್ಚಿನ ಚಿಕಿತ್ಸೆ ಕೊಡಿಸಲು ಸಾಧ್ಯವಾಗದೇ ಸಂಕಷ್ಟಕ್ಕೆ ಸಿಲುಕಿದ್ದೇವೆ. ಚುಚ್ಚುಮದ್ದು ನೀಡಿದ ವೈದ್ಯರಿಂದ ನಮಗೆ ನ್ಯಾಯ ಕಲ್ಪಿಸಿಕೊಡಬೇಕು ಎಂದು ಬಾಲಕನ ಪೋಷಕರು ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ದೂರು ನೀಡಿದ್ದಾರೆ. ಮೈಸೂರು ತಾಲೂಕಿನಲ್ಲಿ ನಕಲಿ ವೈದ್ಯರು ಖಾಸಗಿ ಕ್ಲಿನಿಕ್ ತೆರೆದು ಗ್ರಾಮೀಣ ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ನಕಲಿ ಕ್ಲಿನಿಕ್‌ಗಳನ್ನು ಮುಚ್ಚಬೇಕು ಎಂದು ಬರಡನಪುರ ಗ್ರಾಮದ ಬಿ.ಡಿ.ಬಸವಣ್ಣ ಆಗ್ರಹಿಸಿದ್ದಾರೆ.